# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು

ಶಾಸನಬದ್ಧ ಸಹಕಾರಿ ಸಂಸ್ಥೆ

'ಸೌಹಾರ್ದ ಸಹಕಾರಿ ಸೌಧ', ನಂ.68, 18ನೇ ಅಡ್ಡ ರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು–560055, ದೂರವಾಣಿ: 080–23378375–80,
ವೆಬ್‌ಸೈಟ್ : www.souharda.coop, ಇ–ಮೇಲ್: souharda@souharda.coop

ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವ 2025


ಪತ್ರ ಸಂಖ್ಯೆ:ಸಂಸ/ವಾಸಾಸ/24/2025–26 ದಿನಾಂಕ:20.09.2025

ಇವರಿಗೆ:
ಮಾನ್ಯ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರು
ರಾಜ್ಯದ ಸೌಹಾರ್ದ ಸಹಕಾರಿಗಳು.

ಮಾನ್ಯರೇ,

ವಿಷಯ : ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯಗಳನ್ನು ಕಳುಹಿಸುತ್ತಿರುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 22 ಆಗಸ್ಟ್ 2025, ಶುಕ್ರವಾರದಂದು ಬೆಳಿಗ್ಗೆ 10:00 ಗಂಟೆಗೆ ಗಾಯತ್ರಿ ವಿಹಾರ (ಗಾಯತ್ರಿ ಗ್ರ್ಯಾಂಡ್), ಗೇಟ್ ನಂ.4, ಅರಮನೆ ಮೈದಾನ, ರಮಣ ಮಹರ್ಷಿ ರಸ್ತೆ (ಬಳ್ಳಾರಿ ರಸ್ತೆ), ಬೆಂಗಳೂರು–560080 ಇಲ್ಲಿ ಅರ್ಥಪೂರ್ಣವಾಗಿ ಜರುಗಿತು.

ನೋಂದಣಿಗೊಂಡ ಒಟ್ಟು 6548 ಸೌಹಾರ್ದ ಸಹಕಾರಿಗಳಲ್ಲಿ ಈ ವರ್ಷದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಬೇಕಾಗಿದ್ದ 4225 ಅರ್ಹ ಸೌಹಾರ್ದ ಸಹಕಾರಿಗಳಲ್ಲಿ 2302 ಸೌಹಾರ್ದ ಸಹಕಾರಿಗಳ ಡೆಲಿಗೇಟ್‌ಗಳು ಈ ಸಭೆಯಲ್ಲಿ ಭಾಗವಹಿಸಿದ್ದರು. 33 ಸೌಹಾರ್ದ ಸಹಕಾರಿಗಳು ಗೈರು ಹಾಜರಿಗೆ ಅನುಮತಿ ಕೋರಿ ಪತ್ರಗಳನ್ನು ಕಳುಹಿಸಿದ್ದು, ಇವರ ಗೈರು ಹಾಜರಿಗೆ ಸಭೆಯು ಅನುಮತಿ ನೀಡಿರುತ್ತದೆ.

ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 6ಸಿ (2) (i) (ಬಿ)ರ ಪ್ರಕಾರ ಮತ್ತು ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯ 17ರ ನಿರ್ಣಯದಂತೆ, ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯಗಳನ್ನು ವಿದ್ಯುನ್ಮಾನ ಅಂಚೆ (ಇ–ಮೇಲ್) ಮೂಲಕ ಕಳುಹಿಸಲಾಗುತ್ತಿದ್ದು, ಈ ನಡವಳಿ ಮತ್ತು ನಿರ್ಣಯಗಳ ಕುರಿತು ತಮ್ಮ ಅಭಿಪ್ರಾಯ/ಸಲಹೆ/ಅನಿಸಿಕೆಗಳೇನಾದರೂ ಇದ್ದಲ್ಲಿ ದಿನಾಂಕ 20 ಅಕ್ಟೋಬರ್ 2025ರೊಳಗೆ ಲಿಖಿತವಾಗಿ ಸಂಯುಕ್ತ ಸಹಕಾರಿಯ ಮೇಲಿನ ವಿಳಾಸಕ್ಕೆ ತಲುಪುವಂತೆ ಕಳುಹಿಸಲು ತಿಳಿಸಿದೆ.

ವಂದನೆಗಳೊಂದಿಗೆ,

Karnataka State Souharda Federal Cooperative Ltd. Reg. No. RSR / SOU / ACT / 136 / Regn. 051 / 2001-02 dated 04-01-2002 Bangalore

ತಮ್ಮ ವಿಶ್ವಾಸಿ

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**

ಶಾಸನಬದ್ಧ ಸಹಕಾರಿ ಸಂಸ್ಥೆ

ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560055, Ph : 080-23378375-80, website : www.souharda.coop
Email : souharda@souharda.coop


# ದಿನಾಂಕ 22 ಆಗಸ್ಟ್ 2025ರಂದು ನಡೆದ ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳು ಹಾಗೂ ನಿರ್ಣಯಗಳು

**ಸಭೆಯು ಪ್ರಾರಂಭವಾದ ಸಮಯ:ಬೆಳಿಗ್ಗೆ 10:35** **ಸಭೆಯು ಮುಕ್ತಾಯವಾದ ಸಮಯ:ಮಧ್ಯಾಹ್ನ 02:05**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ 24ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 22 ಆಗಸ್ಟ್ 2025, ಶುಕ್ರವಾರದಂದು ಗಾಯತ್ರಿ ವಿಹಾರ (ಗಾಯತ್ರಿ ಗ್ರ್ಯಾಂಡ್), ಗೇಟ್ ನಂ.4, ಅರಮನೆ ಮೈದಾನ, ರಮಣ ಮಹರ್ಷಿ ರಸ್ತೆ (ಬಳ್ಳಾರಿ ರಸ್ತೆ), ಬೆಂಗಳೂರು-560080 ಇಲ್ಲಿ ಜರುಗಿತು.

ವಾರ್ಷಿಕ ಸಾಮಾನ್ಯ ಸಭೆಯ ಪೂರ್ವದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರು ಸಹಕಾರ ಧ್ವಜಾರೋಹಣವನ್ನು ನೆರವೇರಿಸಿದ ನಂತರ ನೆರೆದಿರುವ ಎಲ್ಲಾ ಸಹಕಾರಿಗಳಿಗೆ ರಾಷ್ಟ್ರೀಯ ಐಕ್ಯತಾ ಪ್ರತಿಜ್ಞೆಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಬೋಧಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್.ಪ್ರಸನ್ನ ಕುಮಾರ್, ಎಲ್ಲಾ ಮಾನ್ಯ ನಿರ್ದೇಶಕರು ಹಾಗೂ ರಾಜ್ಯದ ವಿವಿಧ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

ವಿಶೇಷ/ ವಿಭಿನ್ನ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲು ಸೌಹಾರ್ದ ಸಹಕಾರಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ತಂತ್ರಾಂಶ (Software) ಪೂರೈಕೆದಾರರು, ವಿಮಾ ಉತ್ಪನ್ನ ಅಥವಾ ಬಡ್ಡಿಯೇತರ ಆದಾಯಗಳಿಗೆ ಸಂಬಂಧಿಸಿದ ಸೇವಾ ಪೂರೈಕೆದಾರರು, ತಂತ್ರಜ್ಞಾನ (Technology) ಹಾಗೂ ಸುರಕ್ಷತಾ (Security) ಉಪಕರಣಗಳ ಪೂರೈಕೆದಾರರು ತಮ್ಮ ತಮ್ಮ ಸೇವೆ/ ಉಪಕರಣಗಳ ಪ್ರದರ್ಶನ/ ಮಾಹಿತಿ ನೀಡಲು ಏರ್ಪಡಿಸಲಾಗಿದ್ದ ತಾಂತ್ರಿಕ ಮೇಳ (Techno Fare) ವನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರು, ಮಾನ್ಯ ಉಪಾಧ್ಯಕ್ಷರು ಹಾಗೂ ಮಾನ್ಯ ನಿರ್ದೇಶಕರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಹಕಾರಿ ಸಂಸ್ಥೆಗಳಿಂದ ಉತ್ಪಾದನೆಯಾಗಿರುವ ವಸ್ತುಗಳ ಮಾರಾಟ ಮಳಿಗೆಯನ್ನೂ ಸಹ ವ್ಯವಸ್ಥೆ ಮಾಡಲಾಗಿತ್ತು. ಹಾಗೆಯೇ, ಸಂಯುಕ್ತ ಸಹಕಾರಿಯಿಂದ ಪ್ರಕಟಣೆಗಳ ಮಾರಾಟಕ್ಕಾಗಿ 1 ಮಾರಾಟ ಮಳಿಗೆಯನ್ನು ತೆರೆಯಲಾಗಿತ್ತು. ಒಟ್ಟಾರೆಯಾಗಿ ಈ ತಾಂತ್ರಿಕ ಮೇಳದಲ್ಲಿ 40 ಮಳಿಗೆಗಳಿದ್ದವು.

ನಂತರ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ 24ನೇ ವಾರ್ಷಿಕ ಸಾಮಾನ್ಯ ಸಭೆಯು ಶ್ರೀಮತಿ ಜ್ಯೋತಿ ರವಿ ಪ್ರಕಾಶ್ ಹಾಗೂ ತಂಡದವರಿಂದ ಪ್ರಾರ್ಥನೆ, ನಾಡ ಗೀತೆ ಮತ್ತು ಸಹಕಾರ ಗೀತೆಯೊಂದಿಗೆ ಪ್ರಾರಂಭವಾಯಿತು.

ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ವೇದಿಕೆಯ ಮೇಲೆ ಉಪಸ್ಥಿತರಿದ್ದ ಎಲ್ಲಾ ಗಣ್ಯರ ಸ್ವಾಗತ ಮತ್ತು ಪರಿಚಯವನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್.ಪ್ರಸನ್ನ ಕುಮಾರ್ ಇವರು ನಡೆಸಿಕೊಟ್ಟರು. ತಮ್ಮ ಸ್ವಾಗತ ಭಾಷಣದಲ್ಲಿ 24ನೇ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿರುವ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರಿಗೆ, ಸಂಯುಕ್ತ ಸಹಕಾರಿಯ ಎಲ್ಲಾ ಗೌರವಾನ್ವಿತ ಮಾನ್ಯ ನಿರ್ದೇಶಕರುಗಳಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ಜಗದೀಶ ಮಲ್ಲಿಕಾರ್ಜುನ ಕವಟಗಿಮಠ, ಶ್ರೀ ಬಿ.ಎಸ್.ಗುಂಡುರಾವ್, ಶ್ರೀ ಸಿ.ಪಿ.ವಿಜಯ್, ಶ್ರೀ ರಘುರಾಮ ರೆಡ್ಡಿ, ಶ್ರೀ ಪ್ರಭುದೇವ್.ಎಂ.ಆರ್., ಶ್ರೀಮತಿ ಭಾರತಿ ಜಿ ಭಟ್, ಶ್ರೀ ಮಂಜುನಾಥ, ಶ್ರೀ ರಾಮನಗೌಡ ಬ. ಪಾಟೀಲ, ಶ್ರೀ ಮಲ್ಲಿಕಾರ್ಜುನ ಅಜ್ಜಪ್ಪ ಹೊರಕೇರಿ, ಶ್ರೀ ಕೆ.ಶಿವಲಿಂಗಪ್ಪ, ಶ್ರೀ ನಾಗರಾಜ ರಂಗಪ್ಪಯ್ಯ ದೇಶಪಾಂಡೆ, ಶ್ರೀ ಮೋಹನದಾಸ ಜೆ. ನಾಯಕ, ಶ್ರೀಮತಿ ಶೈಲಜಾ ವಿ. ತಪಲಿ, ಶ್ರೀ ಹೆಚ್.ಜೆ. ಹನುಮಂತಯ್ಯ, ಶ್ರೀ ಆರ್ ತಿಮ್ಮಯ್ಯ ಶೆಟ್ಟಿ, ಶ್ರೀ ಜಿ.ಶ್ರೀಧರ ಇವರಿಗೆ ಮತ್ತು

ಸಂಯುಕ್ತ ಸಹಕಾರಿಯ 2024–25ನೇ ಸಾಲಿನ ಶಾಸನಬದ್ಧ ಸನ್ನದು ಲೆಕ್ಕಪರಿಶೋಧಕರಾದ ಮೆ. ಮಧುಕರ ಹೆಗಡೆ & ಕೋ., ಬೆಂಗಳೂರು ಇವರಿಗೆ ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರಿಗೆ, ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರಿಗೆ ಮತ್ತು ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಗೆ ಆಗಮಿಸಿರುವ ಎಲ್ಲಾ ಗೌರವಾನ್ವಿತ ಮಾನ್ಯ ಡೆಲಿಗೇಟುಗಳಿಗೆ, ಈ ಸಭೆಯಲ್ಲಿ ಉಪಸ್ಥಿತರಿರುವ ಮಾನ್ಯ ಮಾಜಿ ಹಾಗೂ ಹಾಲಿ ಶಾಸಕರುಗಳಿಗೆ, ಮಾಧ್ಯಮ ಮಿತ್ರರಿಗೆ ಹಾಗೂ ಸಂಯುಕ್ತ ಸಹಕಾರಿಯ ಸಿಬ್ಬಂದಿಗಳಿಗೆ ಆದರದ ಸ್ವಾಗತವನ್ನು ಕೋರಿದರು. ಹಾಗೆಯೇ, ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ ಆರ್ ಪ್ರಸನ್ನ ಕುಮಾರ್‌ರವರಿಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸ್ವಾಗತವನ್ನು ಕೋರಿದರು.

ನಂತರ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು, ಮಾನ್ಯ ಉಪಾಧ್ಯಕ್ಷರು ಮತ್ತು ಎಲ್ಲಾ ಗೌರವಾನ್ವಿತ ಮಾನ್ಯ ನಿರ್ದೇಶಕರು ದೀಪ ಪ್ರಜ್ವಲಿಸುವುದರ ಮೂಲಕ 24ನೇ ವಾರ್ಷಿಕ ಸಾಮಾನ್ಯ ಸಭೆಯ ಕಾರ್ಯಕಲಾಪಗಳಿಗೆ ಚಾಲನೆ ನೀಡಿದರು.

ನಂತರ 2024–25ನೇ ಸಾಲಿನಲ್ಲಿ ಹಾಗೂ ಇತ್ತೀಚಿಗೆ ನಿಧನರಾದ ಗಣ್ಯರು, ಸಹಕಾರಿಗಳು, ರಾಜಕೀಯ ಧುರೀಣರು, ಸಂಗೀತ, ಚಲನಚಿತ್ರರಂಗ ಹಾಗೂ ನೆರೆ ಪ್ರವಾಹದಿಂದ ನಿಧನರಾದವರು ಸೇರಿದಂತೆ ಕೆಲವು ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ನಿರ್ದೇಶಕರುಗಳು, ಹಿರಿಯ ಸಹಕಾರಿಗಳು, ನಿಧನರಾದ ರೈತರು, ಗಡಿಯಲ್ಲಿ ಹುತಾತ್ಮರಾದ ಸೈನಿಕರು ಸೇರಿದಂತೆ ಕಳೆದ ಸಾಲಿನಲ್ಲಿ ಮೃತರಾದ ಎಲ್ಲಾ ಗಣ್ಯರುಗಳಿಗೆ ಒಂದು ನಿಮಿಷ ಮೌನವನ್ನು ಆಚರಿಸುವುದರ ಮೂಲಕ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ನಂತರ, ಇಂದು ನಡೆಯುತ್ತಿರುವ ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಬೇಕಾಗಿದ್ದ 4225 ಅರ್ಹ ಸೌಹಾರ್ದ ಸಹಕಾರಿಗಳಲ್ಲಿ ಅಗತ್ಯವಿರುವ ಕೋರಂನ ಸಂಖ್ಯೆ 845 ಆಗಿದ್ದು, ಭಾಗವಹಿಸಿರುವ ಅಧಿಕೃತ ಡೆಲಿಗೇಟ್‌ಗಳ ಸಂಖ್ಯೆ 2302 ಆಗಿರುತ್ತದೆ ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಯ ಗಮನಕ್ಕೆ ತಂದರು.

ಸಭೆಯಲ್ಲಿ ಮುಂದುವರೆದು ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ನಾವೆಲ್ಲರೂ ಸಹ ಈ ಬಾರಿ ವಿಶೇಷವಾದ ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿದ್ದೇವೆ. ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದು 25 ವರ್ಷಗಳಾಗಿದ್ದು, ಈ ಸೌಹಾರ್ದ ಸಹಕಾರಿ ಚಳುವಳಿಯಲ್ಲಿ ಭಾಗವಹಿಸಿರುವ ಸಹಕಾರಿ ನಾಯಕರುಗಳು ಈ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿದ್ದು, ಎಲ್ಲರಿಗೂ ಸಹ ಸ್ವಾಗತವನ್ನು ಕೋರಿ, ಇಂದಿನ ಇಡೀ ದಿನದ ಕಾರ್ಯಕ್ರಮಗಳ ವಿವರಗಳನ್ನು ಸಭೆಗೆ ವಿವರಿಸಿದರು. ಬೆಳಗಿನ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ಜರುಗಲಿದ್ದು, ಮಧ್ಯಾಹ್ನದ ಅವಧಿಯಲ್ಲಿ ಮಧ್ಯಾಹ್ನ 03:00 ಗಂಟೆಗೆ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದು 25 ವರ್ಷಗಳಾಗಿರುವ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸೌಹಾರ್ದ ಸಹಕಾರಿ ಚಳುವಳಿಯ ರಜತ ಮಹೋತ್ಸವದ ಪ್ರಯುಕ್ತ ಸಹಕಾರಿಗಳ ಸಮಾವೇಶವನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ನಂತರ ಸಂಯುಕ್ತ ಸಹಕಾರಿಯಿಂದ ಮುದ್ರಣ ಮಾಡಿಸಲಾಗಿದ್ದ ವಿವಿಧ ಪ್ರಕಟಣೆಗಳಾದ 1) ಸೌಹಾರ್ದ ಸಹಕಾರಿ ಮಾರ್ಗದರ್ಶಿ, 2) ಸಂಯುಕ್ತ ಸಹಕಾರಿಯ ಉಪವಿಧಿ, 3) ಮಾದರಿ ಠೇವಣಿ ಹಾಗೂ ಭದ್ರತಾ ಕಪಾಟು ನಿಯಮಗಳು, 4) ನೂತನ ಸೌಹಾರ್ದ ಸಹಕಾರಿಗಳಿಗಾಗಿ – ಸ್ವಾಗತ ಕೈಪಿಡಿ, 5) ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನಾ ಕೈಪಿಡಿ, 6) ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ಕೈಪಿಡಿ, 7) ಮಾದರಿ ಸಾಲದ ನಿಯಮಗಳು ಈ 07 ಪ್ರಕಟಣೆಗಳ ಬಿಡುಗಡೆ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಎಲ್ಲಾ ನಿರ್ದೇಶಕರು ನೆರವೇರಿಸಿದರು.

ನಂತರ ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಗೆ ಕಾರಣಾಂತರಗಳಿಂದಾಗಿ ಹಾಜರಾಗಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿ, ಗೈರು ಹಾಜರಿಗೆ ಅನುಮತಿಯನ್ನು ಕೋರಿರುವ ಸೌಹಾರ್ದ ಸಹಕಾರಿಗಳ ಹೆಸರುಗಳನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಯಲ್ಲಿ ಓದಿ ಹೇಳಿದರು. ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಗೆ ಕಾರಣಾಂತರಗಳಿಂದಾಗಿ ಗೈರು ಹಾಜರಿಗೆ ಅನುಮತಿಯನ್ನು ಕೋರಿರುವ ಈ ಕೆಳಗಿನ 33 ಸೌಹಾರ್ದ ಸಹಕಾರಿಗಳ ಗೈರು ಹಾಜರಿಗೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

| ಕ್ರ.ಸಂ | ಸದಸ್ಯತ್ವ ಸಂಖ್ಯೆ | ಸೌಹಾರ್ದ ಸಹಕಾರಿಯ ಹೆಸರು | ತಾಲ್ಲೂಕು | ಜಿಲ್ಲೆ |
|---|---|---|---|---|
| 1 | ಎಸ್‌ಎಂಜಿ–0020 | ಶಾರದ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., | ಶಿವಮೊಗ್ಗ | ಶಿವಮೊಗ್ಗ |
| 2 | ಎಸ್‌ಎಂಜಿ–0074 | ಶ್ರೀ ಮಹಾದೇಶ್ವರ ವಿವಿದೋದ್ಧೇಶ ಸೌಹಾರ್ದ ಸಹಕಾರಿ ಸಂಘ ನಿ., | ಶಿವಮೊಗ್ಗ | ಶಿವಮೊಗ್ಗ |
| 3 | ಡಿವಿಜಿ–0023 | ಶ್ರೀ ಕೆಂಚಾಂಬ ಸೌಹಾರ್ದ ಪತ್ತಿನ ಸಹಕಾರಿ ನಿ., | ದಾವಣಗೆರೆ | ದಾವಣಗೆರೆ |
| 4 | ಡಿವಿಜಿ–0088 | ಸಿದ್ದ ಬೆನಕ ಸೌಹಾರ್ದ ಸಹಕಾರಿ ಸಂಘ ನಿ., | ದಾವಣಗೆರೆ | ದಾವಣಗೆರೆ |
| 5 | ಎಂಎನ್‌ಜಿ–0060 | ಪ್ರಣವ ಸೌಹಾರ್ದ ಸಹಕಾರಿ ಸಂಘ ನಿ., | ಮಂಗಳೂರು | ದಕ್ಷಿಣ ಕನ್ನಡ |
| 6 | ಎಂಎನ್‌ಜಿ–0069 | ಅನುಗ್ರಹ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., | ಪುತ್ತೂರು | ದಕ್ಷಿಣ ಕನ್ನಡ |
| 7 | ಸಿಕೆಎಂ–0028 | ಬಾಳೆಹೊನ್ನೂರು ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., | ನರಸಿಂಹರಾಜಪುರ | ಚಿಕ್ಕಮಗಳೂರು |
| 8 | ಯುಡಿಪಿ–0016 | ಜನಹಿತ ಸೌಹಾರ್ದ ವಿವಿದೋದ್ಧೇಶ ಸಹಕಾರಿ ನಿ., | ಉಡುಪಿ | ಉಡುಪಿ |
| 9 | ಯುಡಿಪಿ–0048 | ಶ್ರೀ ವೀರಭದ್ರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ನಿ., | ಉಡುಪಿ | ಉಡುಪಿ |
| 10 | ಯುಡಿಪಿ–0068 | ಶ್ರೀ ಮಹಾಲಿಂಗೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., | ಕುಂದಾಪುರ | ಉಡುಪಿ |
| 11 | ಯುಡಿಪಿ–0082 | ಪಂದುಬೆಟ್ಟು ಸೌಹಾರ್ದ ಸಹಕಾರಿ ಸಂಘ ನಿ., | ಉಡುಪಿ | ಉಡುಪಿ |
| 12 | ಯುಡಿಪಿ–0085 | ಸಂಹಿತಾ ಸೌಹಾರ್ದ ಸಹಕಾರಿ ನಿ., | ಉಡುಪಿ | ಉಡುಪಿ |
| 13 | ಯುಡಿಪಿ–0093 | ಪಂಚಮಿ ಸೌಹಾರ್ದ ಸಹಕಾರಿ ನಿ., | ಉಡುಪಿ | ಉಡುಪಿ |
| 14 | ಯುಡಿಪಿ–0113 | ಮದರ್ ಮೇರಿ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ಲಿ., | ಉಡುಪಿ | ಉಡುಪಿ |
| 15 | ಯುಡಿಪಿ–0162 | ಇಸ್ಲಾಮಿಕ್ ವೆಲ್ಫೇರ್ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ನಿ., | ಉಡುಪಿ | ಉಡುಪಿ |
| 16 | ಬಿಜಿಎಂ–0002 | ಶ್ರೀ ಶಂಕರಲಿಂಗ ಪತ್ತಿನ ಸೌಹಾರ್ದ ಸಹಕಾರಿ ನಿ., | ಹುಕ್ಕೇರಿ | ಬೆಳಗಾವಿ |
| 17 | ಬಿಜಿಎಂ–0029 | ಜೈ ಹಿಂದ ಸೌಹಾರ್ದ ಸಹಕಾರಿ ಸಂಘ ನಿ., | ಹುಕ್ಕೇರಿ | ಬೆಳಗಾವಿ |
| 18 | ಬಿಜಿಎಂ–0388 | ಶ್ರೀ ಅರಿಹಂತ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., | ಹುಕ್ಕೇರಿ | ಬೆಳಗಾವಿ |
| 19 | ಬಿಜಿಎಂ–0528 | ಶ್ರೀ ಬಾಲಾಜಿ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., | ಹುಕ್ಕೇರಿ | ಬೆಳಗಾವಿ |
| 20 | ಬಿಜಿಎಂ–0546 | ಅಣ್ಣಾ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | ಬೆಳಗಾವಿ |
| 21 | ಬಿಜಿಎಂ–0590 | ದಿ ಲಕ್ಷ್ಮೀಬಾಯಿ ಕುಂಬಾರ ಮಹಿಳಾ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., | ಚಿಕ್ಕೋಡಿ | ಬೆಳಗಾವಿ |
| 22 | ಬಿಜಿಎಂ–0870 | ಶ್ರೀ ಅಷ್ಟವಿನಾಯಕ ಅರ್ಬನ್ ಸೌಹಾರ್ದ ಸಹಕಾರಿ ಸಂಘ ನಿ., | ಹುಕ್ಕೇರಿ | ಬೆಳಗಾವಿ |
| 23 | ಬಿಜಿಎಂ–0879 | ಶ್ರೀ ಕಟಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿ ಸಂಘ ನಿ., | ಯರಗಟ್ಟಿ | ಬೆಳಗಾವಿ |
| 24 | ವಿಜೆಎನ್–0177 | ಇಟ್ಟಗಿ ಶ್ರೀ ಆಂಜನೇಯ ಸೌಹಾರ್ದ ಸಹಕಾರಿ ನಿ., | ಹೂವಿನಹಡಗಲಿ | ವಿಜಯನಗರ |

| | | | | |
|---|---|---|---|---|
| 25 | ವಿಜೆಎನ್–0205 | ಸಹಸ್ರ ಸೌಹಾರ್ದ ಪತ್ತಿನ ಸಹಕಾರ ಸಂಘ ನಿ., | ಕೊಟ್ಟೂರು | ವಿಜಯನಗರ |
| 26 | ಬಿಜಿಕೆ–0473 | ಜನ ಪ್ರಗತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., | ಗುಳೇದಗುಡ್ಡ | ಬಾಗಲಕೋಟ |
| 27 | ಎಚ್‌ವಿಆರ್–0043 | ಶ್ರೀ ಕೃಷ್ಣ ಕನಕ ಪತ್ತಿನ ಸೌಹಾರ್ದ ಸಹಕಾರಿ ನಿ., | ರಾಣೇಬೆನ್ನೂರು | ಹಾವೇರಿ |
| 28 | ಕೆಡಬ್ಲ್ಯೂಆರ್–0106 | ಮಾತೋಶ್ರೀ ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿ., | ಕುಮಟಾ | ಉತ್ತರ ಕನ್ನಡ |
| 29 | ಬಿಇಎಲ್–0134 | ಶ್ರೀ ಬಿಲ್ವಾ ಸೌಹಾರ್ದ ಪತ್ತಿನ ಸಹಕಾರಿ ನಿ., | ಕುರುಗೋಡು | ಬಳ್ಳಾರಿ |
| 30 | ಆರ್‌ಸಿಆರ್–0002 | ಜನತಾ ಸೌಹಾರ್ದ ಸಹಕಾರಿ ಸಂಘ ನಿ., | ಸಿಂಧನೂರು | ರಾಯಚೂರು |
| 31 | ಆರ್‌ಸಿಆರ್–0093 | ಆಸರೆ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., | ಸಿಂಧನೂರು | ರಾಯಚೂರು |
| 32 | ಆರ್‌ಸಿಆರ್–0350 | ಮಂದಾರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., | ರಾಯಚೂರು | ರಾಯಚೂರು |
| 33 | ಕೆಪಿಎಲ್–0040 | ಶ್ರೀ ದೊಡ್ಡಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., | ಕುಷ್ಟಗಿ | ಕೊಪ್ಪಳ |

ನಂತರ ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯ ವಿದ್ಯುಕ್ತ ಕಾರ್ಯಕಲಾಪಗಳು ಮಾನ್ಯ ಅಧ್ಯಕ್ಷರ ಭಾಷಣದೊಂದಿಗೆ ಪ್ರಾರಂಭವಾಯಿತು. ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಹಾಜರಿರುವ ಎಲ್ಲಾ ಸಹಕಾರಿ ಬಂಧುಗಳಿಗೆ, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಿಗೆ, ಈ ವಾರ್ಷಿಕ ಸಾಮಾನ್ಯ ಸಭೆಗೆ ಆಗಮಿಸಿರುವ ಸೌಹಾರ್ದ ಸಹಕಾರಿಗಳ ಮಾನ್ಯ ಅಧ್ಯಕ್ಷರು/ ಉಪಾಧ್ಯಕ್ಷರು/ ನಿರ್ದೇಶಕರುಗಳಿಗೆ, ಪತ್ರಿಕಾ ಮಿತ್ರರಿಗೆ ಮತ್ತೊಮ್ಮೆ ಸ್ವಾಗತವನ್ನು ಕೋರಿದರು. ನಂತರ ಸಂಯುಕ್ತ ಸಹಕಾರಿಯ 2024–25ನೇ ಸಾಲಿನ ಹಾಗೂ ಇಲ್ಲಿಯವರೆಗಿನ ಕಾರ್ಯಚಟುವಟಿಕೆಗಳ ಮತ್ತು ಮುಂದಿನ ಕಾರ್ಯ ಯೋಜನೆಗಳ ಕುರಿತು ವಿವರವಾದ ಭಾಷಣವನ್ನು ಮಾಡಿದರು. ಮಾನ್ಯ ಅಧ್ಯಕ್ಷರ ಭಾಷಣದ ಪ್ರತಿಯನ್ನು ಎಲ್ಲಾ ಗೌರವಾನ್ವಿತ ಮಾನ್ಯ ಸದಸ್ಯರಿಗೆ ಲಿಖಿತ ರೂಪದಲ್ಲಿ ಒದಗಿಸಲಾಗಿತ್ತು.

ನಂತರ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರ ಹಾಗೂ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಉಪಸ್ಥಿತರಿರುವ ಗೌರವಾನ್ವಿತ ಪ್ರತಿನಿಧಿಗಳ ಅನುಮತಿಯನ್ನು ಕೋರುತ್ತಾ ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸಿನನ್ವಯ ವಿಷಯಗಳನ್ನು ಮಂಡಿಸಲು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಯನ್ನು ಕೋರಿದರು. ನಂತರ ನೋಟೀಸಿನಲ್ಲಿ ನಮೂದಿಸಲಾಗಿರುವ ಅಜೆಂಡಾವಾರು ವಿಷಯಗಳ ಚರ್ಚೆಗಳು ಜರುಗಿತು.

24ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸಿನಲ್ಲಿ ನಮೂದಿಸಲಾಗಿರುವ ಅಜೆಂಡಾವಾರು ವಿಷಯಗಳ ಚರ್ಚೆಯು ಈ ಕೆಳಗಿನಂತಿದೆ.

**<u>ನಡವಳಿ ಮತ್ತು ನಿರ್ಣಯಗಳು</u> :**

**ವಿಷಯ 01 : 24ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡುವುದು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ ಸಂಖ್ಯೆ 6 ಸಿ (2) ರಂತೆ ಮತ್ತು ಸಂಯುಕ್ತ ಸಹಕಾರಿಯ ಉಪವಿಧಿ ಸಂಖ್ಯೆ 13 (2) ರಂತೆ ದಿನಾಂಕ 01 ಆಗಸ್ಟ್ 2025ರಂದು ಬಲ್ಕ್ ಪಾರ್ಸಲ್‌ನ ಮೂಲಕ ಕಳುಹಿಸಿದ ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲಿಸಲು ಸಭೆಯ ಅನುಮತಿಯನ್ನು ಕೋರಿದರು. ಹಾಗೆಯೇ, ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ ಸಂಖ್ಯೆ 6 ಸಿ (2) (ii) ರಂತೆ ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯ ಕುರಿತು ಸಂಕ್ಷಿಪ್ತ ಪ್ರಕಟಣೆಯನ್ನು ದಿನಾಂಕ 01 ಆಗಸ್ಟ್ 2025ರಂದು ವಿಜಯವಾಣಿ ಕನ್ನಡ ದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ. ನೋಟೀಸಿನ

ಪ್ರತಿಯನ್ನು ಆಗಸ್ಟ್ 2025ರ ಮಾಹೆಯ ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಕೆಯಲ್ಲಿ ಮತ್ತು ನೋಟೀಸು ಹಾಗೂ ಟಿಪ್ಪಣಿಯ ವಿವರಗಳನ್ನು ಸಂಯುಕ್ತ ಸಹಕಾರಿಯ www.souharda.coop ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ ಹಾಗೂ ಹೆಚ್ಚುವರಿಯಾಗಿ, ನೋಟೀಸು ಹಾಗೂ ಟಿಪ್ಪಣಿಯನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 6ಇ (2) (ಎ) ರಂತೆ ರಾಜ್ಯದ ಅರ್ಹ ಸೌಹಾರ್ದ ಸಹಕಾರಿಗಳಿಗೆ ಇ–ಮೇಲ್ ಮುಖಾಂತರ (ಲಭ್ಯವಿರುವ) ಕಳುಹಿಸಲಾಗಿದೆ ಎಂದು ತಿಳಿಸಿದರು.

ನಂತರ ಸಭೆಯಲ್ಲಿ ಮುಂದುವರೆದು ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಬಲ್ಕ್ ಪಾರ್ಸಲ್ ಮೂಲಕ ಕಳುಹಿಸಲಾಗಿದ್ದ ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯ ಪುಸ್ತಕಗಳಲ್ಲಿ ಸೌಹಾರ್ದ ಸಹಕಾರಿಯು ಸದರಿ ವಿಳಾಸದಲಿಲ್ಲದ ಕಾರಣ, ಸಂಪೂರ್ಣ ವಿಳಾಸವಿಲ್ಲದ ಕಾರಣ ಸೇರಿದಂತೆ ಇತರೆ ಕಾರಣದಿಂದಾಗಿ 87 ಪುಸ್ತಕಗಳು ಸಂಯುಕ್ತ ಸಹಕಾರಿಗೆ ಹಿಂತಿರುಗಿ ಬಂದಿರುತ್ತದೆ. ಸದರಿ ಪುಸ್ತಕಗಳು ಪ್ರಸ್ತುತ ಸೇವಾ ಕೇಂದ್ರದಲ್ಲಿ ಲಭ್ಯವಿರುತ್ತದೆ ಎಂದು ತಿಳಿಸಿದರು.

ನಂತರ ಸಭೆಯು, ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡಲು ಸರ್ವಾನುಮತದಿಂದ ಒಪ್ಪಿತು.

**ನಿರ್ಣಯ** : ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ ಸಂಖ್ಯೆ 6 ಸಿ (2) ರಂತೆ ಮತ್ತು ಸಂಯುಕ್ತ ಸಹಕಾರಿಯ ಉಪವಿಧಿ ಸಂಖ್ಯೆ 13 (2) ರಂತೆ ದಿನಾಂಕ 01 ಆಗಸ್ಟ್ 2025ರಂದು ಬಲ್ಕ್ ಪಾರ್ಸಲ್‌ನ ಮೂಲಕ ಕಳುಹಿಸಿದ ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು. ಹಾಗೆಯೇ, ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ ಸಂಖ್ಯೆ 6 ಸಿ (2) (ii) ರಂತೆ ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯ ಕುರಿತು ಸಂಕ್ಷಿಪ್ತ ಪ್ರಕಟಣೆಯನ್ನು ದಿನಾಂಕ 01 ಆಗಸ್ಟ್ 2025ರಂದು ವಿಜಯವಾಣಿ ಕನ್ನಡ ದಿನ ಪತ್ರಿಕೆಯಲ್ಲಿ ಪ್ರಕಟಿಸಿರುವುದಕ್ಕೆ ಮತ್ತು ನೋಟೀಸಿನ ಪ್ರತಿಯನ್ನು ಆಗಸ್ಟ್ 2025ರ ಮಾಹೆಯ ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಕೆಯಲ್ಲಿ ಮತ್ತು ನೋಟೀಸು ಹಾಗೂ ಟಿಪ್ಪಣಿಯ ವಿವರಗಳನ್ನು ಸಂಯುಕ್ತ ಸಹಕಾರಿಯ www.souharda.coop ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವುದಕ್ಕೆ ಹಾಗೂ ಹೆಚ್ಚುವರಿಯಾಗಿ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 6ಇ (2) (ಎ) ರಂತೆ ರಾಜ್ಯದ ಅರ್ಹ ಸೌಹಾರ್ದ ಸಹಕಾರಿಗಳಿಗೆ ಇ–ಮೇಲ್ ಮುಖಾಂತರ (ಲಭ್ಯವಿರುವ) ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು ಹಾಗೂ ಟಿಪ್ಪಣಿಯ ವಿವರಗಳನ್ನು ಕಳುಹಿಸಿರುವ ಮಾಹಿತಿಯನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು, ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 02 : 23ನೇ ವಾರ್ಷಿಕ ಸಾಮಾನ್ಯ ಸಭೆಯ ನಿರ್ಣಯಗಳನ್ನು ಓದಿ ದೃಢೀಕರಿಸುವುದು ಹಾಗೂ ಕೈಗೊಂಡ ಕ್ರಮಗಳನ್ನು ಅನುಮೋದಿಸುವುದು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ದಿನಾಂಕ 23 ಆಗಸ್ಟ್ 2024, ಶುಕ್ರವಾರದಂದು ಪ್ರಿನ್ಸೆಸ್ ಗಾಲ್ಫ್, ಗೇಟ್ ಸಂಖ್ಯೆ 09, ಅರಮನೆ ಮೈದಾನ, ರಮಣ ಮಹರ್ಷಿ ರಸ್ತೆ (ಬಳ್ಳಾರಿ ರಸ್ತೆ), ಬೆಂಗಳೂರು–560080 ಇಲ್ಲಿ ನಡೆದ ಸಂಯುಕ್ತ ಸಹಕಾರಿಯ 23ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯಗಳನ್ನು ದಿನಾಂಕ 21 ಸೆಪ್ಟೆಂಬರ್ 2024ರಂದು ಸದಸ್ಯ ಸಹಕಾರಿಗಳಿಗೆ ಬಲ್ಕ್ ಪಾರ್ಸಲ್‌ನ ಮೂಲಕ ಕಳುಹಿಸಲಾಗಿತ್ತು. ಈ ನಡವಳಿ ಮತ್ತು ನಿರ್ಣಯಗಳ ಕುರಿತು ಸೌಹಾರ್ದ ಸಹಕಾರಿಗಳಿಂದ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಂಯುಕ್ತ ಸಹಕಾರಿಗೆ ಸಲ್ಲಿಸಲು 1 ತಿಂಗಳ ಕಾಲಾವಕಾಶವನ್ನು ನೀಡಲಾಗಿತ್ತು. ಅದರಂತೆ, ಸಂಯುಕ್ತ ಸಹಕಾರಿಗೆ ಯಾವುದೇ ಆಕ್ಷೇಪಣೆಗಳು ಸಲ್ಲಿಕೆಯಾಗಿರುವುದಿಲ್ಲ. ದಿನಾಂಕ 23 ಆಗಸ್ಟ್ 2024ರಂದು ನಡೆದ ಸಂಯುಕ್ತ ಸಹಕಾರಿಯ 23ನೇ ವಾರ್ಷಿಕ ಸಾಮಾನ್ಯ ಸಭೆಯ ನಿರ್ಣಯಗಳನ್ನು ಹಾಗೂ

ನಿರ್ಣಯಗಳನ್ವಯ ಕೈಗೊಳ್ಳಲಾದ ಕ್ರಮಗಳನ್ನು ಸಭೆಗೆ ನೀಡಲಾಗಿದ್ದು, ಅದನ್ನು ಪರಿಶೀಲಿಸಿ ಅನುಮೋದಿಸಲು ಸಭೆಗೆ ಕೋರಿದರು.

ನಂತರ ಸಭೆಯು, ದಿನಾಂಕ 23 ಆಗಸ್ಟ್ 2024ರಂದು ನಡೆದ ಸಂಯುಕ್ತ ಸಹಕಾರಿಯ 23ನೇ ವಾರ್ಷಿಕ ಸಾಮಾನ್ಯ ಸಭೆಯ ನಿರ್ಣಯಗಳನ್ನು ಹಾಗೂ ಕೈಗೊಳ್ಳಲಾದ ಕ್ರಮಗಳನ್ನು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ** : ದಿನಾಂಕ 23 ಆಗಸ್ಟ್ 2024ರಂದು ನಡೆದ ಸಂಯುಕ್ತ ಸಹಕಾರಿಯ 23ನೇ ವಾರ್ಷಿಕ ಸಾಮಾನ್ಯ ಸಭೆಯ ನಿರ್ಣಯಗಳನ್ನು ಹಾಗೂ ಕೈಗೊಳ್ಳಲಾದ ಕ್ರಮಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 03 : 2024–25ನೇ ಸಾಲಿನ ವಾರ್ಷಿಕ ವರದಿಯನ್ನು ಅನುಮೋದಿಸುವುದು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯ 2024–25ನೇ ಸಾಲಿನ ವಿವರವಾದ ವಾರ್ಷಿಕ ವರದಿಯನ್ನು ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರು ಈಗಾಗಲೇ 24ನೇ ವಾರ್ಷಿಕ ಸಾಮಾನ್ಯ ಸಭೆಯ ಮುಂದೆ ಮಂಡಿಸಿದ್ದಾರೆ. ಹಾಗೆಯೇ, ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ವಿವರಗಳನ್ನು ಛಾಯಾಚಿತ್ರದೊಂದಿಗೆ ಸಭೆಗೆ ನೀಡಿದ್ದು, ಪರಿಶೀಲಿಸಿ ಅನುಮೋದಿಸಲು ಸಭೆಗೆ ಕೋರಿದರು. ನಂತರ ಸಭೆಯು, ಸಂಯುಕ್ತ ಸಹಕಾರಿಯ 2024–25ನೇ ಸಾಲಿನ ವಾರ್ಷಿಕ ವರದಿಯನ್ನು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ** : ಸಂಯುಕ್ತ ಸಹಕಾರಿಯ 2024–25ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

## 2024–25ನೇ ಸಾಲಿನ ಸಂಯುಕ್ತ ಸಹಕಾರಿಯ ವಾರ್ಷಿಕ ವರದಿ

### ಆಡಳಿತಾತ್ಮಕ ಕಾರ್ಯಚಟುವಟಿಕೆಗಳು

- **ನೋಂದಣಿ :** 2024–25ನೇ ಸಾಲಿನಲ್ಲಿ ಹೊಸದಾಗಿ 258 ಸೌಹಾರ್ದ ಸಹಕಾರಿಗಳು ನೋಂದಣಿಯಾಗಿರುತ್ತವೆ. 2024–25ನೇ ಸಾಲಿನಲ್ಲಿ 03 ಸೌಹಾರ್ದ ಸಹಕಾರಿಗಳು 1959ರ ಸಹಕಾರ ಸಂಘಗಳ ಕಾಯ್ದೆಗೆ ಪರಿವರ್ತಿತವಾಗಿವೆ. 02 ಸೌಹಾರ್ದ ಸಹಕಾರಿಗಳು 2002ರ ಬಹುರಾಜ್ಯ ಕಾಯ್ದೆಗೆ ಪರಿವರ್ತಿತವಾಗಿವೆ ಮತ್ತು 34 ಸೌಹಾರ್ದ ಸಹಕಾರಿಗಳ ನೋಂದಣಿ ರದ್ಧತಿಯಾಗಿರುತ್ತವೆ. ಈ ಎಲ್ಲಾ ಸೌಹಾರ್ದ ಸಹಕಾರಿಗಳ ಮಾಹಿತಿಯನ್ನು ದಾಖಲಿಸಿಕೊಳ್ಳುವುದರ ಜೊತೆಗೆ ಸದರಿ ಸಹಕಾರಿಗಳಿಗೆ ಸ್ವಾಗತ ಪತ್ರವನ್ನು ಕಳುಹಿಸುವುದು ಹಾಗೂ ಸಂಯುಕ್ತ ಸಹಕಾರಿಯ ಸಂಬಂಧಪಟ್ಟ ಪ್ರಾಂತೀಯ ಕಛೇರಿಯ ವಿಳಾಸ, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳ ವಿವರ, ಜಿಲ್ಲಾ ಸಂಪರ್ಕ ಕಛೇರಿಯ ವಿಳಾಸ, ಹಾಗೂ ಮಾರ್ಗದರ್ಶಕ ಕೈಪಿಡಿಯನ್ನು ಒದಗಿಸುವ ಕಾರ್ಯವನ್ನು ಮಾಡಲಾಗಿದೆ.
- ದಿನಾಂಕ 31/03/2025 ರಂತೆ ಒಟ್ಟು 6500 ಸೌಹಾರ್ದ ಸಹಕಾರಿಗಳು ಸೌಹಾರ್ದ ಸಹಕಾರಿ ಕಾಯ್ದೆಯಡಿ ನೋಂದಣಿಗೊಂಡಿರುತ್ತವೆ. ಅವುಗಳಲ್ಲಿ 5057 ಸೌಹಾರ್ದ ಸಹಕಾರಿಗಳು ಕಾರ್ಯನಿರತವಾಗಿರುತ್ತವೆ. 544 ಸೌಹಾರ್ದ ಸಹಕಾರಿಗಳು ಕಾರ್ಯಸ್ಥಗಿತಗೊಳಿಸಿರುತ್ತವೆ. 899 ಸೌಹಾರ್ದ ಸಹಕಾರಿಗಳು ಸಮಾಪನೆಗೆ ಶಿಫಾರಸ್ಸುಗೊಂಡಿರುತ್ತವೆ. ಒಟ್ಟು ಇಲ್ಲಿಯವರಗೆ 76 ಸೌಹಾರ್ದ ಸಹಕಾರಿಗಳ ನೋಂದಣಿ ರದ್ದತಿಗೊಂಡಿರುತ್ತದೆ. 2024–25ರ ಸಾಲಿನಲ್ಲಿ ಒಟ್ಟು 280 ಸೌಹಾರ್ದ ಸಹಕಾರಿಗಳು ನೂತನವಾಗಿ ನೊಂದಣಿಗೊಂಡಿರುತ್ತವೆ.
- ಹಾಗೆಯೇ, ಸೌಹಾರ್ದ ಸಹಕಾರಿಗಳ ಮಾಹಿತಿಗಳ ಇಂದೀಕರಣ ಕಾರ್ಯವನ್ನು ನಿರ್ವಹಿಸಲಾಗಿದೆ.
- 2024–25ನೇ ಸಾಲಿನಲ್ಲಿ ಹೆಸರಿನ ಸ್ಪಷ್ಟೀಕರಣದ ಕುರಿತು 440 ಪತ್ರಗಳನ್ನು ಕಳುಹಿಸಲಾಗಿದೆ.
- ಚುನಾವಣೆ ಕುರಿತು ಸದಸ್ಯ ಸಹಕಾರಿಗಳು ಕಳುಹಿಸಿದ ಪತ್ರಗಳಿಗೆ ಅಗತ್ಯ ಮಾಹಿತಿ/ ಮಾರ್ಗದರ್ಶನ ನೀಡಲಾಗುತ್ತಿದೆ. ನಿರ್ವಚನಾಧಿಕಾರಿಗಳು ನೇಮಕವಾಗಿ ಚುನಾವಣೆಗಳು ಸಕಾಲಕ್ಕೆ ಜರುಗುತಲಿವೆ.
- ಸಹಕಾರ ಇಲಾಖೆ, ಲೆಕ್ಕಪರಿಶೋಧನಾ ಇಲಾಖೆ, ಸಹಕಾರ ಚುನಾವಣಾ ಪ್ರಾಧಿಕಾರ, ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ನಿರ್ವಹಣೆಗಾಗಿ ಸಕ್ಷಮ ಪ್ರಾಧಿಕಾರ ನೇಮಕ ಮಾಡುವ ಕಂದಾಯ ಇಲಾಖೆ, ಸಿಐಡಿ ಸೇರಿದಂತೆ

ಇತರೇ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿಕೊಂಡು ಅಗತ್ಯ ಮಾಹಿತಿಯನ್ನು ಒದಗಿಸುವ ಹಾಗೂ ಪಡೆಯುವ ಕಾರ್ಯವನ್ನು ನಡೆಸಲಾಗುತ್ತಿದೆ.

- ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 6ಎಲ್ ಪ್ರಕಾರ 2024-25ನೇ ಸಾಲಿನಲ್ಲಿ 66 ಸೌಹಾರ್ದ ಸಹಕಾರಿಗಳ ನೇಮಕಾತಿ ಸಮಿತಿಗೆ ಸಂಯುಕ್ತ ಸಹಕಾರಿಯ ಪ್ರತಿನಿಧಿ ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ.
- ಒಂದು ಲಕ್ಷಕ್ಕಿಂತ ಹೆಚ್ಚಿನ ವೆಚ್ಚಗಳ ಉಂಟಾಗಬಹುದಾದ ಕಾರ್ಯಗಳು/ಖರೀದಿಗಳಿಗೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ಟೆಂಡರ್ ಕರೆಯುವ ಮೂಲಕ ನಡೆಸಲಾಗುತ್ತಿದ್ದು, ಅಂತಹ ಟೆಂಡರ್‌ಗಳಿಗೆ ಸಂಬಂಧಿಸಿದಂತೆ ಅಗತ್ಯ ಟೆಂಡರ್ ನೋಟಿಫಿಕೇಷನ್, ಪತ್ರಿಕಾ ಪ್ರಕಟಣೆ, ಬಿಡ್ ತೆರೆಯುವುದು, ದರಗಳ ತುಲನಾತ್ಮಕ ವರದಿ ಇತ್ಯಾದಿ ಕಾರ್ಯಗಳನ್ನು ನಿರ್ವಹಿಸಲಾಗಿದೆ.
- ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆ, ನಡವಳಿ, ವರ್ಷಾಂತ್ಯದ ಆರ್ಥಿಕ ಮಾಹಿತಿ, ಕಲಂ 34ರ ಸಂಗ್ರಹಗಳ ಕಾರ್ಯಗಳನ್ನು ನಿರ್ವಹಿಸಲಾಗಿದೆ.

## ಇ-ಸ್ಟ್ಯಾಂಪಿಂಗ್ ವಿಭಾಗದ ಕಾರ್ಯಚಟುವಟಿಕೆ ವರದಿ

2024-25ರ ವರ್ಷಾಂತ್ಯದಂತೆ ರಾಜ್ಯದ ಎಲ್ಲಾ ಜಿಲ್ಲೆಗಳು ಸೇರಿದಂತೆ ಒಟ್ಟು 1704 ಇ-ಸ್ಟ್ಯಾಂಪಿಂಗ್ ಕೇಂದ್ರಗಳು ಸೌಹಾರ್ದ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿವೆ. 2024-25ನೇ ಸಾಲಿನಲ್ಲಿ ಒಟ್ಟು 102 ಇ-ಸ್ಟಾಂಪಿಂಗ್ ಕೇಂದ್ರಗಳು ಹೊಸದಾಗಿ ವ್ಯವಹಾರವನ್ನು ಪ್ರಾರಂಭಿಸಿದ್ದು, 29 ಎಸಿಸಿಗಳು ಸ್ವ-ಇಚ್ಛೆಯಿಂದ ಇ-ಸ್ಟಾಂಪಿಂಗ್ ಕೇಂದ್ರಗಳನ್ನು ಸ್ಥಗಿತಗೊಳಿಸಿರುತ್ತವೆ. 2024-25ನೇ ಸಾಲಿನಲ್ಲಿ ರೂ.568,79,58,463 ಕೋಟಿಯಷ್ಟು ವ್ಯವಹಾರ ನಡೆದಿರುತ್ತದೆ.

## ಸೌಹಾರ್ದ ದಾವಾ ಪಂಚಾಯ್ತಿ ನ್ಯಾಯಾಲಯದ ಪ್ರಕರಣಗಳ ವಿವರ

2023-24ನೇ ಸಾಲಿನ ವರ್ಷಾಂತ್ಯಕ್ಕೆ 7251 ದಾವಾ ಪ್ರಕರಣಗಳು ಬಾಕಿ ಇದ್ದವು, 2024-25ನೇ ಸಾಲಿನಲ್ಲಿ ಹೊಸದಾಗಿ 5170 ದಾವಾ ಪ್ರಕರಣಗಳು ದಾಖಲಾಗಿವೆ. 2024-25ನೇ ಸಾಲಿನಲ್ಲಿ ಒಟ್ಟು 9500 ದಾವಾ ಪ್ರಕರಣಗಳು ಇತ್ಯರ್ಥಗೊಂಡಿವೆ. 2024-25ರ ವರ್ಷಾಂತ್ಯಕ್ಕೆ 2921 ದಾವಾ ಪ್ರಕರಣಗಳು ಬಾಕಿ ಇರುತ್ತವೆ.

ಅಮಲ್ಜಾರಿ ಪ್ರಕರಣಕ್ಕೆ ಸಂಬಂಧಿಸಿದಂತೆ 2023-24ರ ವರ್ಷಾಂತ್ಯಕ್ಕೆ 7216 ಪ್ರಕರಣಗಳಿದ್ದು, 2024-25ನೇ ಸಾಲಿನಲ್ಲಿ 2090 ಹೊಸ ಪ್ರಕರಣಗಳು ಸೇರ್ಪಡೆಯಾಗಿವೆ. ಪ್ರಸಕ್ತ ಸಾಲಿನಲ್ಲಿ 188 ಪ್ರಕರಣಗಳು ಮುಕ್ತಾಯಗೊಂಡಿದ್ದು, 2024-25ರ ವರ್ಷಾಂತ್ಯಕ್ಕೆ 9118 ಪ್ರಕರಣಗಳು ಜಾರಿಯಲ್ಲಿವೆ.

## ಶಾಸನಾತ್ಮಕ ಕಾರ್ಯಚಟುವಟಿಕೆಗಳು

- 2024-25ನೇ ಸಾಲಿನಲ್ಲಿ ಒಟ್ಟು 3596 ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಲಾಗಿರುತ್ತದೆ.
- 2024-25ನೇ ಸಾಲಿನಲ್ಲಿ ಕೇಂದ್ರ ಕಛೇರಿಯಿಂದ 83 ಹಾಗೂ ಪ್ರಾಂತೀಯ ಕಛೇರಿಯಿಂದ 127 ಹಾಗೂ ಪ್ರಾಂತೀಯ ಕಛೇರಿಯಿಂದ 254 ಒಟ್ಟು 381 ಸದಸ್ಯ ಸಹಕಾರಿಗಳಿಗೆ ಕಾನೂನು ನೆರವು, ಸಲಹೆ ಮತ್ತು ಮಾರ್ಗದರ್ಶ ನೀಡಲಾಗಿರುತ್ತದೆ.
- 2024-25ನೇ ಸಾಲಿನಲ್ಲಿ ಕೇಂದ್ರ ಕಛೇರಿಯಿಂದ 22 ಹಾಗೂ ಪ್ರಾಂತೀಯ ಕಛೇರಿಗಳಿಂದ 48 ಪರಿವೀಕ್ಷಣೆಯನ್ನು ಒಟ್ಟು 70 ಸಹಕಾರಿಗಳ ಪರಿವೀಕ್ಷಣೆ ನಡೆಸಲಾಗಿದೆ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 53 (7) (ಯು) ರ ಪರಿವೀಕ್ಷಣಾ ಆದೇಶದ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಗೆ ಸಲ್ಲಿಕೆಯಾಗಿರುವ ಪರಿವೀಕ್ಷಣಾ ವರದಿಯಲ್ಲಿ ಗಮನಿಸಿರುವ ಅಂಶಗಳ ಕುರಿತಂತೆ ಸಂಯುಕ್ತ ಸಹಕಾರಿಯಿಂದ ಸ್ಪಷ್ಟನೆ/ಮಾರ್ಗದರ್ಶನ/ನಿರ್ದೇಶನವನ್ನು ನೀಡಲಾಗಿರುತ್ತದೆ.
- ಸಂಯುಕ್ತ ಸಹಕಾರಿಯು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 23ಎ ರ ಅವಕಾಶದಂತೆ 2024-25ನೇ ಸಾಲಿನಲ್ಲಿ ಒಟ್ಟು 134 ಸಹಕಾರಿಗಳಿಂದ 330 ಶಾಖೆಗಳನ್ನು ಆರಂಭಿಸಲು ಪ್ರಸ್ತಾವನೆಗಳು ಸಲ್ಲಿಕೆಯಾಗಿದ್ದು, ಅದರಲ್ಲಿ 173 ಶಾಖೆಗಳು ಅನುಮೋದನೆಗೊಂಡಿರುತ್ತದೆ ಮತ್ತು 157 ಶಾಖೆಗಳ ಪ್ರಸ್ತಾವನೆಯನ್ನು ನಿರಾಕರಿಸಲಾಗಿರುತ್ತದೆ.

- ಇದುವರೆಗೆ ಕಾರ್ಯ ಸ್ಥಗಿತಗೊಳಿಸಿದ ಸೌಹಾರ್ದ ಸಹಕಾರಿಗಳ ಕುರಿತಂತೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು 899 ಸೌಹಾರ್ದ ಸಹಕಾರಿಗಳನ್ನು ಸಮಾಪನೆಗೆ ಶಿಫಾರಸ್ಸು ಮಾಡಲು ನಿರ್ಣಯಿಸಲಾಗಿದ್ದು, ನಿರ್ಣಯದನುಸಾರ ಸಂಬಂಧಿಸಿದ ನಿಬಂಧಕರಿಗೆ ಶಿಫಾರಸ್ಸು ಪತ್ರ ಕಳುಹಿಸಿ ಕ್ರಮವಿಡಲಾಗಿದ್ದು, ಅದರಲ್ಲಿ 338 ಸೌಹಾರ್ದ ಸಹಕಾರಿಗಳಿಗೆ ಸಮಾಪನಾಧಿಕಾರಿಗಳು ನೇಮಕಗೊಂಡಿದ್ದಾರೆ. 76 ಸೌಹಾರ್ದ ಸಹಕಾರಿಗಳ ನೋಂದಣಿ ರದ್ದತಿಯಾಗಿರುತ್ತದೆ.
- 2024–25ನೇ ಸಾಲಿನಲ್ಲಿ ಒಟ್ಟು 34 ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾರಿಗಳನ್ನು ನೇಮಕ ಮಾಡಲಾಗಿದೆ.
- 2024–25ನೇ ಸಾಲಿನಲ್ಲಿ ಒಟ್ಟು 03 ಸೌಹಾರ್ದ ಸಹಕಾರಿಗಳಿಂದ ಒಟ್ಟು 03 ನಿರ್ದೇಶಕರನ್ನು ನಿರ್ದೇಶಕರ ಸ್ಥಾನದಿಂದ ಕಾಯ್ದೆ ಕಲಂ 25(1)(ಇ)ರನ್ವಯ (ಸುಸ್ತಿ ಸಾಲ ಹಾಗೂ ಜಾಮೀನು ಸಾಲದ) ಪ್ರಕರಣದ ಹಿನ್ನಲೆಯಲ್ಲಿ ಸಂಯುಕ್ತ ಸಹಕಾರಿಯಿಂದ ಅನರ್ಹತೆಗೊಳಿಸಿ ಆದೇಶಿಸಲಾಗಿದೆ.
- ಸದಸ್ಯ ಸಹಕಾರಿಗಳ ಸದಸ್ಯರ/ ಸಾರ್ವಜನಿಕರ ದೂರುಗಳನ್ನು ಪರಿಶೀಲಿಸುವುದು, ದೂರುಗಳ ಆಧಾರದಲ್ಲಿ ಸ್ಪಷ್ಟನೆ ಕೋರುವುದು, ಪರಿವೀಕ್ಷಣೆಯನ್ನು ನಡೆಸುವುದು, ದೂರುಗಳ ವಿಲೇವಾರಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಮುಂತಾದ ಕಾರ್ಯವನ್ನು ನಿರಂತರವಾಗಿ ಕೇಂದ್ರ ಕಛೇರಿಯಿಂದ ಹಾಗೂ ಪ್ರಾಂತೀಯ ಕಛೇರಿಗಳಿಂದ ಮಾಡಲಾಗುತ್ತಿದೆ.
- ಕರ್ನಾಟಕ ಸರ್ಕಾರದ 2024–25ನೇ ಸಾಲಿನಲ್ಲಿ (ಜುಲೈ, ಡಿಸೆಂಬರ್ ಮತ್ತು ಫೆಬ್ರವರಿ) ಜರುಗಿದ ಮೂರು ಸದನಗಳ ಅಧಿವೇಶನದಲ್ಲಿ (ವಿಧಾನ ಸಭೆ/ವಿಧಾನ ಪರಿಷತ್) ಮಾನ್ಯ ಶಾಸಕರು/ಸದಸ್ಯರು ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಯ ಬಗ್ಗೆ ಕೇಳಲಾಗಿರುವ 06 ಪ್ರಶ್ನೆಗಳಲ್ಲಿನ 24 ಉಪ ಪ್ರಶ್ನೆಗಳಿಗೆ ಸಂಯುಕ್ತ ಸಹಕಾರಿಯಿಂದ ಉತ್ತರ ಕಳುಹಿಸಿ ಕ್ರಮವಿಡಲಾಗಿರುತ್ತದೆ.
- ಪ್ರಾಥಮಿಕ ಸೌಹಾರ್ದ ಸಹಕಾರಿಯಲ್ಲಿ ನಡೆಯುತ್ತಿರುವ ಅವ್ಯವಹಾರ/ಹಣ/ಅಧಿಕಾರ ದುರುಪಯೋಗ/ವಂಚನೆಗಳಗೆ ಸಂಬಂಧಿದಂತೆ "ಸಹಕಾರ ಇಲಾಖೆಯಿಂದ", "ಸಿ.ಐ.ಡಿ"ಯಿಂದ, ಸಹಕಾರಿಗಳಿಗೆ ನೇಮಕವಾಗಿರುವ "ಸಕ್ಷಮ ಪ್ರಾಧಿಕಾರ"ಗಳಿಂದ ಹಾಗೂ "ಪೊಲೀಸ್ ಠಾಣೆ"ಯಿಂದ ಸಹಕಾರಿಯ ಕುರಿತು ಕೇಳಲಾಗಿರುವ ಮಾಹಿತಿ/ದಾಖಲಾತಿಗಳನ್ನು ಒದಗಿಸಿ ಕ್ರಮವಿಡಲಾಗಿದೆ.

## ಟಾಸ್ಕ್‌ಫೋರ್ಸ್ ಕಾರ್ಯಚಟುವಟಿಕೆಗಳು

ಠೇವಣಿದಾರರಿಗೆ ವಂಚಿಸಿ, ಠೇವಣಿ ಹಣವನ್ನು ಮರುಪಾವತಿಸಲು ವಿಫಲವಾದ ಸೌಹಾರ್ದ ಸಹಕಾರಿಗಳಿಂದ ಠೇವಣಿ ಹಣವನ್ನು ಮರುಪಾವತಿಸಿ ಕೊಡಲು ಮತ್ತು ಕಾಯ್ದೆ/ನಿಯಮ/ಸಂಯುಕ್ತ ಸಹಕಾರಿಯ ಸುತ್ತೋಲೆಗಳನ್ನು ಉಲ್ಲಂಘಿಸಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳನ್ನು ಸರಿಪಡಿಸಿ ಕಾಯ್ದೆ/ನಿಯಮ/ಸಂಯುಕ್ತ ಸಹಕಾರಿಯ ಸುತ್ತೋಲೆಗಳನ್ನು ಪಾಲಿಸುವಂತೆ ಮಾಡಲು ರಚಿತವಾದ ವಿಶೇಷ ಕಾರ್ಯಪಡೆಯ ವಿಭಾಗವೇ ಟಾಸ್ಕ್‌ಫೋರ್ಸ್. ವಿಶೇಷ ಕಾರ್ಯಪಡೆಯು 2021ನೇ ಇಸವಿಯಲ್ಲಿ ರಚನೆಗೊಂಡು ಠೇವಣಿದಾರರಿಗೆ ನ್ಯಾಯ ಒದಗಿಸುವ ಕೆಲಸ ಮಾಡುತ್ತಿದೆ ಹಾಗೂ ಕಾಯ್ದೆಯ ಆಶಯದಂತೆ ಕಾರ್ಯನಿರ್ವಹಿಸಲು ಸಹಕಾರಿಗಳನ್ನು ನಿರಂತರ ಅನುಸರಣೆ ಮಾಡಲಾಗುತ್ತಿದೆ. ಪ್ರಸ್ತುತ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಟಾಸ್ಕ್‌ಫೋರ್ಸ್ ವಿಭಾಗದಲ್ಲಿ ಒಟ್ಟು 117 ಸೌಹಾರ್ದ ಸಹಕಾರಿಗಳಿದ್ದು, ಸದರಿ ಸಹಕಾರಿಗಳ ಸಮಸ್ಯೆಗೆ ಸಂಬಂಧಿಸಿದಂತೆ ಸೂಕ್ತ ಕ್ರಮಗಳು ಜಾರಿಯಲ್ಲಿವೆ. ನ್ಯೂನತೆಗಳನ್ನು ಸರಿಪಡಿಸಿಕೊಳ್ಳದ, ಸಂಯುಕ್ತ ಸಹಕಾರಿಯ ನಿರ್ದೇಶನಗಳನ್ನು ಪಾಲಿಸದಿರುವ 17 ಸೌಹಾರ್ದ ಸಹಕಾರಿಗಳ ವಿರುದ್ದ ಅಧಿಭಾರ ಪ್ರಕರಣ ದಾಖಲಿಸಲಾಗಿದೆ. ಠೇವಣಿದಾರರ ಠೇವಣಿ ಹಣ ಮರುಪಾವತಿಸದ 11 ಸೌಹಾರ್ದ ಸಹಕಾರಿಗಳ ವಿರುದ್ದ ಸಂಯುಕ್ತ ಸಹಕಾರಿಯಿಂದ ಎಫ್ಐಆರ್ ಮತ್ತು 03 ಖಾಸಗಿ ಫಿರ್ಯಾದುಗಳನ್ನು ದಾಖಲಿಸಲಾಗಿದೆ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಟಾಸ್ಕ್ ಫೋರ್ಸ್ ವಿಭಾಗದ ನಿರಂತರ ಪ್ರಯತ್ನದಿಂದ 19 ಸೌಹಾರ್ದ ಸಹಕಾರಿಗಳಿಗೆ ರಾಜ್ಯ ಸರ್ಕಾರವು ಕೆಪಿಐಡಿ ಕಾಯ್ದೆ ಅಡಿ ಸಕ್ಷಮ ಪ್ರಾಧಿಕಾರಿಗಳನ್ನು ನೇಮಕ ಮಾಡಿರುತ್ತದೆ. ಸಂಯುಕ್ತ ಸಹಕಾರಿಯು ಕಾಯ್ದೆ/ನಿಯಮ ಹಾಗೂ ಠೇವಣಿ ಹಣ ಮರುಪಾವತಿಸದ 15 ಸೌಹಾರ್ದ ಸಹಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ.

## ಶಿಕ್ಷಣ ಹಾಗೂ ತರಬೇತಿ ವಿಭಾಗದ ಕಾರ್ಯಕ್ರಮಗಳ ವರದಿ

2024–25ನೇ ಸಾಲಿನಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರುಗಳಿಗೆ, ನಿರ್ದೇಶಕರುಗಳಿಗೆ, ಮುಖ್ಯಕಾರ್ಯನಿರ್ವಾಹಕರುಗಳಿಗೆ, ಸಿಬ್ಬಂದಿಗಳಿಗೆ ಪ್ರತ್ಯೇಕ ತರಬೇತಿಗಳನ್ನು ರಾಜ್ಯ ಮಟ್ಟದಲ್ಲಿ, ಪ್ರಾಂತವಾರು ಹಾಗೂ ಜಿಲ್ಲಾವಾರು ಏರ್ಪಡಿಸಲಾಗಿದೆ.

ರಾಜ್ಯದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರುಗಳಿಗಾಗಿ, ನಿರ್ದೇಶಕರುಗಳಿಗಾಗಿ ಆಡಳಿತ ಪರಿಣಿತಿ ತರಬೇತಿ, ಸಮಾಲೋಚನಾ ಸಭೆಗಳು, ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು, ವಿಷಯಾಧಾರಿತ ತರಬೇತಿ, ಇ–ಸ್ಟಾಂಪಿಂಗ್ ತರಬೇತಿ, ಉನ್ನತ ಮಟ್ಟದ ತರಬೇತಿ, ಪ್ರವೇಶ ತರಬೇತಿ ಕುರಿತು ತರಬೇತಿಗಳನ್ನು ಆಯೋಜಿಸಲಾಗಿದೆ.

ಅಲದೇ, ರಾಜ್ಯದ ಸೌಹಾರ್ದ ಸಹಕಾರಿಗಳಿಗಾಗಿ ಲೆಕ್ಕಪತ್ರ ಅಂತಿಮಗೊಳಿಸುವಿಕೆ, ದಾಖಲಾತಿ ನಿರ್ವಹಣೆ, ಲೆಕ್ಕ ಪರಿಶೋಧನಾ ವರದಿಯ ಪೂರಕ ದಾಖಲೆಗಳ ತಯಾರಿಸುವ ವಿಧಾನಗಳ ಕುರಿತು ತರಬೇತಿ, ಮುಖ್ಯಕಾರ್ಯನಿರ್ವಾಹಕರ ಹಕ್ಕುಗಳು, ಕರ್ತವ್ಯಗಳು ಮತ್ತು ಜವಾಬ್ದಾರಿಗಳು, ಮಾರಾಟಾಧಿಕಾರಿಗಳಿಗೆ ತರಬೇತಿ, ಹತ್ತು ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ, 5 ದಿನಗಳ ಕಾರ್ಯಕ್ಷಮತೆ ಅಭಿವೃದ್ಧಿ ತರಬೇತಿ, 7 ದಿನಗಳ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್, ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಗಳು, ಸಾಲ ವಸೂಲಾತಿ ಕ್ರಮಗಳ ತರಬೇತಿ, ಪ್ರವೇಶ ತರಬೇತಿ, ಕ್ಲಸ್ಟರ್ ಮಟ್ಟದ ತರಬೇತಿ, ಆಡಳಿತ ಪರಿಣಿತಿ ತರಬೇತಿ, ಸಮಾಲೋಚನಾ ಸಭೆಗಳು, ಸಂಪರ್ಕ ಸಭೆಗಳನ್ನು ಆಯೋಜಿಸಲಾಗಿದೆ.

2024–25ನೇ ಸಾಲಿನಲ್ಲಿ ಒಟ್ಟು 165 ವಿವಿಧ ರೀತಿಯ ತರಬೇತಿ ಕಾರ್ಯಕ್ರಮಗಳು, 36 ಮುಖ್ಯ ಕಾರ್ಯನಿರ್ವಾಹಕರ ಸಭೆಗಳು, 27 ಸಂಪರ್ಕ ಸಭೆಗಳು, 5 ಯುವಜನ ಹಾಗೂ ಸಹಕಾರ ಸಂವಾದ ಕಾರ್ಯಕ್ರಮ, 10 ಡಿಸಿಬಿಎಂ ಕೋರ್ಸಿನ ಭೌತಿಕ ಸಂಪರ್ಕ ವರ್ಗ ಹಾಗೂ 65 ಆನ್‌ಲೈನ್ ಸಂಪರ್ಕ ವರ್ಗ ತರಗತಿಗಳನ್ನು ಆಯೋಜಿಸಲಾಗಿದೆ.

**ವಿಷಯ 04 : 2024–25ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮತ್ತು ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಗಳನ್ನು ಪರಿಗಣಿಸುವುದು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ನೋಟೀಸಿನೊಂದಿಗೆ ಸನ್ನದು ಲೆಕ್ಕಪರಿಶೋಧಕರಾದ ಮೆ. ಮಧುಕರ್ ಹೆಗಡೆ & ಕೋ., ಬೆಂಗಳೂರು ಇವರು ನೀಡಿರುವ ಸಂಯುಕ್ತ ಸಹಕಾರಿಯ 2024–25ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮತ್ತು ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಗಳನ್ನು ಯಥಾವತ್ತಾಗಿ (Scanned Copy) ಸಭೆಗೆ ನೀಡಲಾಗಿದ್ದು, ಅದನ್ನು ಪರಿಶೀಲಿಸಿ ಅನುಮೋದಿಸಲು ಸಭೆಗೆ ಕೋರಿದರು. ಸಂಯುಕ್ತ ಸಹಕಾರಿಯ 2024–25ನೇ ಸಾಲಿನ ಶಾಸನಬದ್ಧ ಸನ್ನದು ಲೆಕ್ಕಪರಿಶೋಧಕರಾದ ಮೆ. ಮಧುಕರ್ ಹೆಗಡೆ & ಕೋ., ಬೆಂಗಳೂರು ಇವರು ಸಹ ಸಭೆಯಲ್ಲಿ ಉಪಸ್ಥಿತರಿದ್ದಾರೆ ಎಂದು ತಿಳಿಸಿದರು.

ನಂತರ ಸಭೆಯು, ಸಂಯುಕ್ತ ಸಹಕಾರಿಯ 2024–25ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮತ್ತು ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಗಳನ್ನು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ** : ಸಂಯುಕ್ತ ಸಹಕಾರಿಯ 2024–25ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮತ್ತು ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 05 : 2024–25ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಅನುಮೋದಿಸುವುದು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸನ್ನದು ಲೆಕ್ಕಪರಿಶೋಧಕರು ನೀಡುವ ಸಲಹೆ, ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳುವುದು ಆಯಾ ಸಂಸ್ಥೆಗಳ ಜವಾಬ್ದಾರಿಯಾಗಿರುತ್ತದೆ. ಅದರಂತೆ, ಸಂಯುಕ್ತ ಸಹಕಾರಿಯ 2024–25ನೇ ಸಾಲಿನ ಶಾಸನಬದ್ಧ ಸನ್ನದು ಲೆಕ್ಕಪರಿಶೋಧಕರಾದ ಮೆ. ಮಧುಕರ್ ಹೆಗಡೆ & ಕೋ., ಬೆಂಗಳೂರು ಇವರು ನೀಡಿದ 2024–25ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿನ ನ್ಯೂನ್ಯತೆಗಳು/ ಸಲಹೆಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಒಪ್ಪಿ ಸಿದ್ಧಪಡಿಸಿ 24ನೇ ವಾರ್ಷಿಕ ಸಾಮಾನ್ಯ ಸಭೆಗೆ ಮಂಡಿಸಲು ಅನುಮತಿಸಿರುವ ಅನುಪಾಲನಾ ವರದಿಯನ್ನು ವಾರ್ಷಿಕ ಸಾಮಾನ್ಯ ಸಭೆಗೆ ನೀಡಲಾಗಿದ್ದು, ಅದನ್ನು ಪರಿಶೀಲಿಸಿ ಅನುಮೋದಿಸಲು ಸಭೆಗೆ ಕೋರಿದರು.

ನಂತರ ಸಭೆಯು, ಸಂಯುಕ್ತ ಸಹಕಾರಿಯ 2024–25ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ** : ಸಂಯುಕ್ತ ಸಹಕಾರಿಯ 2024–25ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 06 : 2024–25ನೇ ಸಾಲಿನಲ್ಲಿ ಆದ ಮುಂಗಡ ಪತ್ರಕ್ಕಿಂತ ಹೆಚ್ಚುವರಿ ಖರ್ಚುಗಳನ್ನು ಅನುಮೋದಿಸುವುದು.**

**ನಡವಳಿ** : ಸಂಯುಕ್ತ ಸಹಕಾರಿಯ 23ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮೋದನೆಯಾಗಿದ್ದ 2024–25ನೇ ಸಾಲಿನ ಮುಂಗಡ ಪತ್ರಕ್ಕಿಂತ ಯಾವುದೇ ವೆಚ್ಚಗಳು ಹೆಚ್ಚುವರಿ ವೆಚ್ಚಗಳು ಪ್ರಸ್ತುತ ಆಗಿರುವುದಿಲ್ಲ. ಸಂಯುಕ್ತ ಸಹಕಾರಿಯ 23ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮೋದನೆಯಾಗಿದ್ದ ಮುಂಗಡ ಪತ್ರದಲ್ಲಿನ ಖರ್ಚು–ವೆಚ್ಚಗಳ ಮಿತಿಯೊಳಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಎಲ್ಲಾ ಕೆಲಸಗಳನ್ನು ನಿರ್ವಹಿಸಿದೆ. ಈ ಮಾಹಿತಿಯನ್ನು ಅನುಮೋದಿಸಲು ಸಭೆಗೆ ಕೋರಿದರು.

ನಂತರ ಸಭೆಯು, ಸಂಯುಕ್ತ ಸಹಕಾರಿಯ 2024–25ನೇ ಸಾಲಿನ ಮುಂಗಡ ಪತ್ರಕ್ಕಿಂತ ಯಾವುದೇ ಶೀರ್ಷಿಕೆಗಳಡಿ ಹೆಚ್ಚುವರಿ ವೆಚ್ಚಗಳಾಗಿಲ್ಲದೇ ಇರುವ ಮಾಹಿತಿಯನ್ನು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ** : ಸಂಯುಕ್ತ ಸಹಕಾರಿಯ 2024–25ನೇ ಸಾಲಿನ ಮುಂಗಡ ಪತ್ರಕ್ಕಿಂತ ಯಾವುದೇ ಶೀರ್ಷಿಕೆಗಳಡಿ ಹೆಚ್ಚುವರಿ ವೆಚ್ಚಗಳಾಗಿಲ್ಲದೇ ಇರುವ ಮಾಹಿತಿಯನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 07 : 2025–26ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ ಸಂಖ್ಯೆ:8ಬಿ(6)ರನ್ವಯ ಸಂಯುಕ್ತ ಸಹಕಾರಿಯು ಸೇರಿದಂತೆ ಪ್ರತಿಯೊಂದು ಸೌಹಾರ್ದ ಸಹಕಾರಿಗಳು ತಮ್ಮ ವಾರ್ಷಿಕ ಸಾಮಾನ್ಯ ಸಭೆಯ ಅನುಮತಿಯೊಂದಿಗೆ ಮುಂದಿನ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧನೆಗೆ ಸನ್ನದು ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳಬೇಕು. ಅದರಂತೆ, ಮೆ. ಮಧುಕರ್ ಹೆಗಡೆ & ಕೋ., ಬೆಂಗಳೂರು ಇವರು ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಮಾರ್ಗದರ್ಶಕರಾಗಿ ಮತ್ತು ಆದಾಯ ತೆರಿಗೆ ಸಂಬಂಧಿತ ವಿಷಯಗಳಿಗೆ ಅಧಿಕೃತವಾಗಿ ಸಲಹೆಯನ್ನು ನೀಡುವಂತಹವರಾಗಿರುತ್ತಾರೆ. ಸೌಹಾರ್ದ ಸಹಕಾರಿ ಕಾಯ್ದೆ ಪ್ರಕಾರ ಮೆ. ಮಧುಕರ್ ಹೆಗಡೆ & ಕೋ., ಬೆಂಗಳೂರು ಇವರು ಸಂಯುಕ್ತ ಸಹಕಾರಿಯ ಒಂದು ವರ್ಷದ ಲೆಕ್ಕಪರಿಶೋಧನೆಯನ್ನು ಮಾತ್ರ ಮಾಡಿದ್ದು, ಇನ್ನೂ ಒಂದು ವರ್ಷ ಶಾಸನಬದ್ಧ ಲೆಕ್ಕಪರಿಶೋಧನೆಯನ್ನು ಮಾಡಲು ಅವಕಾಶವಿರುತ್ತದೆ. ಅದರಂತೆ, ಸದರಿಯವರನ್ನು ಮೊಟ್ಟ ಮೊದಲ ಆದ್ಯತೆಯಾಗಿ ಮುಂದಿನ ಅವಧಿಯ ಲೆಕ್ಕಪರಿಶೋಧನೆಗೆ ನೇಮಕ ಮಾಡಿಕೊಳ್ಳಲು ಆಡಳಿತ ಮಂಡಲಿಯು ಸಾಮಾನ್ಯ ಸಭೆಗೆ ಶಿಫಾರಸ್ಸು ಮಾಡಿರುತ್ತದೆ. ಈ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ 2025–26ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧನೆಗಾಗಿ ಮೆ. ಮಧುಕರ್ ಹೆಗಡೆ & ಕೋ., ಬೆಂಗಳೂರು ಇವರನ್ನು ನೇಮಕ ಮಾಡಿಕೊಳ್ಳುವ ಕುರಿತು ಮತ್ತು ಸದರಿಯವರಿಗೆ 2025–26ನೇ ಸಾಲಿನ ಲೆಕ್ಕಪರಿಶೋಧನಾ ಶುಲ್ಕವಾಗಿ ಸಂಭಾವನೆಯನ್ನು ನಿಗದಿಪಡಿಸುವ ಕುರಿತು ಸೂಕ್ತ ನಿರ್ಣಯಕ್ಕಾಗಿ ವಾರ್ಷಿಕ ಸಾಮಾನ್ಯ ಸಭೆಗೆ ವಿಷಯ ಮಂಡಿಸಿದೆ ಎಂದು ತಿಳಿಸಿದರು.

ನಂತರ ಸಭೆಯು, ಪ್ರಥಮ ಆದ್ಯತೆಯಾಗಿ ಸಭೆಗೆ ಮಂಡಿಸಲಾಗಿರುವ ಮೆ. ಮಧುಕರ್ ಹೆಗಡೆ & ಕೋ., ಬೆಂಗಳೂರು ಇವರನ್ನು ಸಂಯುಕ್ತ ಸಹಕಾರಿಯ 2025–26ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿಕೊಳ್ಳಲು ಹಾಗೂ ಸದರಿಯವರಿಗೆ ಶಾಸನಬದ್ಧ ಲೆಕ್ಕಪರಿಶೋಧನಾ ಶುಲ್ಕವಾಗಿ ರೂ.1,75,000/– (ವಾಸ್ತವಿಕ ಪ್ರಯಾಣ ವೆಚ್ಚಗಳು ಮತ್ತು ಅನ್ವಯಿಸುವ ತೆರಿಗೆಯನ್ನು ಹೊರತುಪಡಿಸಿ) + ಟ್ಯಾಕ್ಸ್ ಆಡಿಟ್ ಮೊತ್ತ ಸಂಭಾವನೆಯನ್ನು ನಿಗದಿಪಡಿಸಲು

ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು. ಒಂದು ವೇಳೆ, ಯಾವುದಾದರೂ ಕಾರಣಗಳಿಂದ ಸದರಿಯವರಿಗೆ ಸಾಧ್ಯವಾಗದಿದ್ದ ಪಕ್ಷದಲ್ಲಿ ಅನುಕ್ರಮವಾಗಿ ದ್ವಿತೀಯ ಆದ್ಯತೆಯಾಗಿ ಮಂಡಿಸಲಾಗಿರುವ ಮೆ. ಪಿ.ಎನ್.ಆರ್. & ಕೋ, ಬೆಂಗಳೂರು ಇವರನ್ನು ಮತ್ತು ತೃತೀಯ ಆದ್ಯತೆಯಾಗಿ ಮಂಡಿಸಲಾಗಿರುವ ಮೆ. ಎಸ್.ಕೆ.ಎ.ಬಿ. & ಅಸೋಸಿಯೇಟ್ಸ್, ಬೆಂಗಳೂರು ಇವರನ್ನು ನೇಮಕ ಮಾಡಿಕೊಳ್ಳಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ನಿರ್ಣಯ** : ಸಂಯುಕ್ತ ಸಹಕಾರಿಯ 2025-26ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ಪ್ರಥಮ ಆದ್ಯತೆಯಾಗಿ ಸಭೆಗೆ ಮಂಡಿಸಲಾಗಿರುವ ಮೆ. ಮಧುಕರ್ ಹೆಗಡೆ & ಕೋ., ಬೆಂಗಳೂರು ಇವರನ್ನು ನೇಮಕ ಮಾಡಿಕೊಳ್ಳಲು ಹಾಗೂ ಸದರಿಯವರಿಗೆ ಶಾಸನಬದ್ಧ ಲೆಕ್ಕಪರಿಶೋಧನಾ ಶುಲ್ಕವಾಗಿ ರೂ.1,75,000/- (ವಾಸ್ತವಿಕ ಪ್ರಯಾಣ ವೆಚ್ಚಗಳು ಮತ್ತು ಅನ್ವಯಿಸುವ ತೆರಿಗೆಯನ್ನು ಹೊರತುಪಡಿಸಿ) + ಟ್ಯಾಕ್ಸ್ ಆಡಿಟ್ ಮೊತ್ತ ಸಂಭಾವನೆಯನ್ನು ನಿಗದಿಪಡಿಸಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು. ಒಂದು ವೇಳೆ, ಯಾವುದಾದರೂ ಕಾರಣಗಳಿಂದ ಸದರಿಯವರಿಗೆ ಸಾಧ್ಯವಾಗದಿದ್ದ ಪಕ್ಷದಲ್ಲಿ ಅನುಕ್ರಮವಾಗಿ ದ್ವಿತೀಯ ಆದ್ಯತೆಯಾಗಿ ಮಂಡಿಸಲಾಗಿರುವ ಮೆ. ಪಿ.ಎನ್.ಆರ್. & ಕೋ, ಬೆಂಗಳೂರು ಇವರನ್ನು ಮತ್ತು ತೃತೀಯ ಆದ್ಯತೆಯಾಗಿ ಮಂಡಿಸಲಾಗಿರುವ ಮೆ. ಎಸ್.ಕೆ.ಎ.ಬಿ. & ಅಸೋಸಿಯೇಟ್ಸ್, ಬೆಂಗಳೂರು ಇವರನ್ನು ನೇಮಕ ಮಾಡಿಕೊಳ್ಳಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ 08 : 2026-27ನೇ ಸಾಲಿಗೆ ಆಂತರಿಕ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯಲ್ಲಿ ಆರ್ಥಿಕ ಚಟುವಟಿಕೆಗಳಿಲ್ಲದೇ ಇದ್ದರೂ ಸಹ ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿಗಳ ಮಾರ್ಗದರ್ಶಿ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿರುವ ಒಂದು ಅಪೆಕ್ಸ್ ಸಂಸ್ಥೆಯಾಗಿರುವ ಹಿನ್ನೆಲೆಯಲ್ಲಿ ತನ್ನ ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ ಆಂತರಿಕ ಲೆಕ್ಕಪರಿಶೋಧನೆಗೆ ಸನ್ನದು ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ. ಅದರಂತೆ, ಸಂಯುಕ್ತ ಸಹಕಾರಿಯ 2025-26ನೇ ಸಾಲಿನ ಆಂತರಿಕ ಲೆಕ್ಕಪರಿಶೋಧನೆಯನ್ನು ಮೆ. ಅನಂತ್ ಮುತಾಲಿಕ್ & ಕೋ., ಬೆಂಗಳೂರು ಇವರು ನಡೆಸುತ್ತಿದ್ದು, ಕಾಯ್ದೆ ಪ್ರಕಾರ ಸದರಿಯವರನ್ನು ಇನ್ನೂ ಒಂದು ವರ್ಷಗಳ ಕಾಲ ಮುಂದುವರೆಸಲು ಅವಕಾಶವಿದ್ದು, ಮುಂದಿನ ಸಾಲಿಗೆ ಸದರಿಯವರನ್ನೇ ಆಂತರಿಕ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿಕೊಳ್ಳಬಹುದೆಂದು ಆಡಳಿತ ಮಂಡಲಿಯು ಅಭಿಪ್ರಾಯಪಟ್ಟು ವಾರ್ಷಿಕ ಸಾಮಾನ್ಯ ಸಭೆಗೆ ಶಿಫಾರಸ್ಸು ಮಾಡಿರುತ್ತದೆ. ಈ ಕುರಿತು ಸೂಕ್ತವಾಗಿ ನಿರ್ಣಯಿಸಲು ಸಭೆಗೆ ಕೋರಿದರು.

ನಂತರ ಸಭೆಯು, ಸಂಯುಕ್ತ ಸಹಕಾರಿಯ 2026-27ನೇ ಸಾಲಿಗೆ ಆಂತರಿಕ ಲೆಕ್ಕಪರಿಶೋಧಕರಾಗಿ ಮೆ. ಅನಂತ್ ಮುತಾಲಿಕ್ & ಕೋ, ಬೆಂಗಳೂರು ಇವರನ್ನು ನೇಮಕ ಮಾಡಿಕೊಳ್ಳಲು ಹಾಗೂ ಆಂತರಿಕ ಲೆಕ್ಕಪರಿಶೋಧನಾ ಶುಲ್ಕವಾಗಿ ರೂ.2,10,000/- (ವಾಸ್ತವಿಕ ಪ್ರಯಾಣ ವೆಚ್ಚಗಳು ಮತ್ತು ತೆರಿಗೆಯನ್ನು ಹೊರತುಪಡಿಸಿ) ಸಂಭಾವನೆಯನ್ನು ನಿಗದಿಪಡಿಸಲು ಸರ್ವಾನುಮತದಿಂದ ಅನುಮೋದಿಸಿತು. ಒಂದು ವೇಳೆ, ಯಾವುದಾದರೂ ಕಾರಣಗಳಿಂದ ಸದರಿಯವರಿಗೆ ಸಾಧ್ಯವಾಗದಿದ್ದ ಪಕ್ಷದಲ್ಲಿ ಅನುಕ್ರಮವಾಗಿ ದ್ವಿತೀಯ ಆದ್ಯತೆಯಾಗಿ ಮಂಡಿಸಲಾಗಿರುವ ಮೆ. ಪಿ.ಎನ್.ಆರ್. & ಕೋ., ಬೆಂಗಳೂರು ಇವರನ್ನು ಹಾಗೂ ತೃತೀಯ ಆದ್ಯತೆಯಾಗಿ ಮಂಡಿಸಲಾಗಿರುವ ಚಿನ್ನಿ & ಕೋ., ಧಾರವಾಡ ಇವರನ್ನು ನೇಮಕ ಮಾಡಿಕೊಳ್ಳಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ** : ಸಂಯುಕ್ತ ಸಹಕಾರಿಯ 2026-27ನೇ ಸಾಲಿಗೆ ಆಂತರಿಕ ಲೆಕ್ಕಪರಿಶೋಧಕರಾಗಿ ಮೆ. ಅನಂತ್ ಮುತಾಲಿಕ್ & ಕೋ, ಬೆಂಗಳೂರು ಇವರನ್ನು ನೇಮಕ ಮಾಡಿಕೊಳ್ಳಲು ಹಾಗೂ ಆಂತರಿಕ ಲೆಕ್ಕಪರಿಶೋಧನಾ ಶುಲ್ಕವಾಗಿ ರೂ.2,10,000/- (ವಾಸ್ತವಿಕ ಪ್ರಯಾಣ ವೆಚ್ಚಗಳು ಮತ್ತು ತೆರಿಗೆಯನ್ನು ಹೊರತುಪಡಿಸಿ) ಸಂಭಾವನೆಯನ್ನು ನಿಗದಿಪಡಿಸಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. ಒಂದು ವೇಳೆ, ಯಾವುದಾದರೂ ಕಾರಣಗಳಿಂದ ಸದರಿಯವರಿಗೆ ಸಾಧ್ಯವಾಗದಿದ್ದ

ಪಕ್ಷದಲ್ಲಿ ಅನುಕ್ರಮವಾಗಿ ದ್ವಿತೀಯ ಆದ್ಯತೆಯಾಗಿ ಮಂಡಿಸಲಾಗಿರುವ ಮೆ. ಪಿ.ಎನ್.ಆರ್. & ಕೋ., ಬೆಂಗಳೂರು ಇವರನ್ನು ಹಾಗೂ ತೃತೀಯ ಆದ್ಯತೆಯಾಗಿ ಮಂಡಿಸಲಾಗಿರುವ ಚಿನ್ನಿ & ಕೋ., ಧಾರವಾಡ ಇವರನ್ನು ನೇಮಕ ಮಾಡಿಕೊಳ್ಳಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 09 : 2025–26ನೇ ಸಾಲಿನ ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಪ್ರತಿಯೊಂದು ಸೌಹಾರ್ದ ಸಹಕಾರಿಗಳು ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆ ಮತ್ತು ಮುಂಗಡ ಪತ್ರಗಳ ಅನುಮೋದನೆಗೆ ಸಂಬಂಧಿಸಿದಂತೆ, ಒಂದು ವರ್ಷದ ಮುಂಚಿತವಾಗಿಯೇ ಮುಂದಿನ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಮತ್ತು ಮುಂಗಡ ಪತ್ರಗಳನ್ನು ವಾರ್ಷಿಕ ಸಾಮಾನ್ಯ ಸಭೆಗೆ ಮಂಡಿಸಲು 2013ರಲ್ಲಿ ಕಾಯ್ದೆ ರೂಪದಲ್ಲಿ ಜಾರಿಗೊಂಡಿತು ಎಂದು ತಿಳಿಸಿದರು.

ಸಭೆಯಲ್ಲಿ ಮುಂದುವರೆದು ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯ 23ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮೋದಿತವಾಗಿದ್ದ 2025–26ನೇ ಸಾಲಿನ ಸಂಯುಕ್ತ ಸಹಕಾರಿಯ ವಾರ್ಷಿಕ ಕ್ರಿಯಾ ಯೋಜನೆಯನ್ನು ಸೌಹಾರ್ದ ಸಹಕಾರಿಗಳು ನೀಡಿರುವ ಸಲಹೆಗಳನ್ನೊಳಗೊಂಡಂತೆ ಸಂಯುಕ್ತ ಸಹಕಾರಿಯ ಕಾರ್ಯನಿರ್ವಹಣೆಯ ಅಗತ್ಯತೆಗಳಿಗನುಗುಣವಾಗಿ ಪರಿಷ್ಕರಿಸಲಾಗಿದ್ದು, ಅದರಂತೆ ಆಡಳಿತ, ನಿಯಂತ್ರಣ, ಶಿಕ್ಷಣ, ತರಬೇತಿ, ಪ್ರಚಾರ ಮತ್ತು ಅಭಿವೃದ್ಧಿ, ಸೇವಾ, ಸಂಶೋಧನೆ ಮತ್ತು ಅಭಿವೃದ್ಧಿ, ಸಾಮಾಜಿಕ ಕಳಕಳಿ ಈ ವಿಭಾಗಗಳಲ್ಲಿ ತಿಳಿಸಲಾಗಿರುವ ಕ್ರಿಯಾ ಯೋಜನೆಗಳನ್ನು ಪರಿಶೀಲಿಸಿ, ಇವುಗಳೊಂದಿಗೆ ತಮ್ಮ ಸಲಹೆಗಳೇನಾದರೂ ಇದ್ದಲ್ಲಿ ತಿಳಿಸಬೇಕೆಂದು ಸಭೆಗೆ ಕೋರಿದರು.

ಸಭೆಯಲ್ಲಿ ಮುಂದುವರೆದು ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯ 2025–26ನೇ ವಾರ್ಷಿಕ ಕ್ರಿಯಾ ಯೋಜನೆಯು ಬಹಳ ಪ್ರಾಮುಖ್ಯವಾಗಿದೆ ಏಕೆಂದರೆ ಈ ಬಾರಿ ಸೌಹಾರ್ದ ಸಹಕಾರಿ ಕಾಯ್ದೆಗೆ 25 ವರ್ಷಗಳ ಸಂಭ್ರಮವಾದರೆ ಮುಂದಿನ ವರ್ಷ ದಿನಾಂಕ 04.01.2026ಕ್ಕೆ ಸಂಯುಕ್ತ ಸಹಕಾರಿಯು 25 ವರ್ಷಗಳ ರಜತ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿದೆ. ಇಂತಹ ಸುಸಂದರ್ಭದಲ್ಲಿ ಸಭೆಗೆ ಮಂಡಿಸಲಾಗಿರುವ ಈ ಕ್ರಿಯಾ ಯೋಜನೆಯನ್ನು ಪರಿಶೀಲಿಸಿ, ಯಾವುದೇ ರೀತಿಯ ಸಲಹೆಗಳಿದ್ದಲ್ಲಿ ಆ ಸಲಹೆಗಳನ್ನು ನೀಡಬೇಕು. ಹಾಗೆಯೇ, ಸಂಯುಕ್ತ ಸಹಕಾರಿಯ 2025–26ನೇ ಸಾಲಿನ ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆಯನ್ನು ಪರಿಶೀಲಿಸಿ, ಅನುಮೋದಿಸಬೇಕೆಂದು ಸಭೆಗೆ ಕೋರಿದರು.

ನಂತರ ಸಭೆಯು, ಸಂಯುಕ್ತ ಸಹಕಾರಿಯ 2025–26ನೇ ಸಾಲಿನ ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆಯನ್ನು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ** : ಈ ಕೆಳಗಿನಂತೆ ಸಂಯುಕ್ತ ಸಹಕಾರಿಯ 2025–26ನೇ ಸಾಲಿನ ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

## 2025–26ನೇ ಸಾಲಿನ ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆ

ಸಂಯುಕ್ತ ಸಹಕಾರಿಯನ್ನು ಇನ್ನೂ ಹೆಚ್ಚು ವ್ಯವಸ್ಥಿತವಾಗಿ, ಪರಿಣಾಮಕಾರಿಯಾಗಿ, ಪ್ರಭಾವಶಾಲಿಯಾಗಿ ಮತ್ತು ನೂತನ ತಾಂತ್ರಿಕತೆಯೊಂದಿಗೆ ವೃತ್ತಿಪರತೆಯನ್ನು ಅಳವಡಿಸಿಕೊಂಡು ಮುನ್ನಡೆಸುವ ದೃಷ್ಠಿಯಿಂದ 2025–26ನೇ ಸಾಲಿನಲ್ಲಿ ಈ ಕೆಳಗಿನಂತೆ ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ.

**ಆಡಳಿತ ವಿಭಾಗ :**

- ಸದಸ್ಯ ಸಹಕಾರಿಗಳಿಗೆ ನೂತನ ಸಿಬ್ಬಂದಿಗಳ ನೇಮಕಾತಿಗೆ ಪ್ರತ್ಯೇಕವಾದ ನೇಮಕಾತಿ ಕೋಶ ಪ್ರಾರಂಭಿಸುವ ಮೂಲಕ ಮಾನವ ಸಂಪನ್ಮೂಲವನ್ನು ಸಂಘಟಿಸಿ ಅಭಿವೃದ್ಧಿಗೊಳಿಸುವುದು.
- ಸೌಹಾರ್ದ ಸಹಕಾರಿಗಳಿಗೆ ಉಪಯುಕ್ತ ತಂತ್ರಜ್ಞಾನಗಳಿಗೆ ಸಂಬಂಧಿಸಿದ ತಾಂತ್ರಿಕ ಮೇಳಗಳನ್ನು ಆಯೋಜಿಸುವುದು.
- ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳ ಕ್ರೀಡಾ ಚಟುವಟಿಕೆಗಳ ಆಯೋಜನೆ ಹಾಗೂ ಪ್ರೋತ್ಸಾಹ ಮಾಡುವುದು.
- ಸಹಕಾರಿ ಇಲಾಖಾಧಿಕಾರಿಗಳೊಡನೆ ಸಮನ್ವಯ ಮತ್ತು ಸಮಾಲೋಚನಾ ಸಭೆಗಳನ್ನು ಆಯೋಜಿಸುವುದು.

- ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಅಧ್ಯಕ್ಷರು/ವ್ಯವಸ್ಥಾಪಕ ನಿರ್ದೇಶಕರುಗಳ ಸಮನ್ವಯ ಸಭೆ ಆಯೋಜಿಸುವುದು.
- ನೋಂದಣಿ ಮಹಾಪರಿವೀಕ್ಷಕರ (IGR) ನೇತೃತ್ವದಲ್ಲಿ ಉಪನೋಂದಣಾಧಿಕಾರಿಗಳೊಂದಿಗೆ ಸಮನ್ವಯ ಸಭೆ ಆಯೋಜನೆ.
- ಸಂಯುಕ್ತ ಸಹಕಾರಿಯಿಂದ ಜಿಲ್ಲಾ ಕೇಂದ್ರಗಳಲ್ಲಿ ಸ್ವಂತ ನಿವೇಶನ ಖರೀದಿಸಲು ಕ್ರಮವಿಡುವುದು.
- ಸುಸಜ್ಜಿತ, ಆಧುನಿಕ ಸೌಹಾರ್ದ ಸಹಕಾರಿ ತರಬೇತಿ ಮತ್ತು ಸಂಶೋಧನಾ ಕೇಂದ್ರ ನಿರ್ಮಾಣಕ್ಕೆ ಜಮೀನು ಖರೀದಿಗೆ ಕ್ರಮವಿಡುವುದು.
- ಸೌಹಾರ್ದ ಸಹಕಾರಿಗಳಿಗೆ ಮೌಲ್ಯವರ್ಧನೆ ಸೇವೆಗಳನ್ನು ನೀಡಲು ಪೂರಕ ಸಂಸ್ಥೆಯನ್ನು ಪ್ರಾರಂಭಿಸಲು ಕ್ರಮವಿಡುವುದು.
- ಸೆಂಟರ್ ಫಾರ್ ಕೋ ಆಪರೇಟಿವ್ ಎಕ್ಸಲೆನ್ಸ್ ಪ್ರಾರಂಭಿಸುವುದು.
- ಸಂಯುಕ್ತ ಸಹಕಾರಿಯ ರಜತ ಮಹೋತ್ಸವ ಆಚರಣೆ.
- ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ಪತ್ರಿಕಾ ಗೋಷ್ಠಿಗಳನ್ನು ಆಯೋಜಿಸುವುದು.
- ಪ್ರತಿಯೊಂದು ಸೌಹಾರ್ದ ಸಹಕಾರಿಗಳ ಮಾಹಿತಿಯನ್ನು ಡಿಜಟಲೀಕರಣ ಮಾಡುವುದು.
- ಸೌಹಾರ್ದ ಮೊಬೈಲ್ ಅಪ್ಲಿಕೇಷನ್ ಅಭಿವೃದ್ಧಿಪಡಿಸುವುದು.

<u>**ನಿಯಂತ್ರಣ ವಿಭಾಗ :**</u>

- ಸದಸ್ಯ ಸಹಕಾರಿಗಳ ವಾರ್ಷಿಕ ವರದಿಗಳನ್ನು ಅವಲೋಕನ ಮಾಡುವುದರ ಮೂಲಕ ಕಾಯ್ದೆ/ ಉಪವಿಧಿ/ ಸುತ್ತೋಲೆಗಳ ಉಲ್ಲಂಘನೆಯನ್ನು ತಡೆಗಟ್ಟುವುದು.
- ಸದಸ್ಯ ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಹೆಚ್ಚಿಸುವುದು.
- ಸದಸ್ಯ ಸಹಕಾರಿಗಳಿಗೆ ಸುತ್ತೋಲೆಗಳನ್ನು ಮತ್ತು ಮಾರ್ಗದರ್ಶಿಗಳನ್ನು ಹೊರಡಿಸುವುದು.
- ಸಮಸ್ಯಾತ್ಮಕ ಸಹಕಾರಿಗಳಿಗೆ/ ಚುನಾವಣೆಗೆ ಕ್ರಮವಿಡದ ಸೌಹಾರ್ದ ಸಹಕಾರಿಗಳಿಗೆ/ ಕೋರಂ ಕೊರತೆ ಉಂಟಾದ ಸಹಕಾರಿಗಳಿಗೆ ವಿಶೇಷಾಧಿಕಾರಿಗಳನ್ನು ಮತ್ತು ಅವಶ್ಯಕತೆ ಇದ್ದಲ್ಲಿ ಆಡಳಿತಾಧಿಕಾರಿಗಳನ್ನು ನಿಯಮಾನುಸಾರ ನೇಮಿಸುವುದು.
- ಟಾಸ್ಕ್‌ಫೋರ್ಸ್ ತಂಡದ ಮೂಲಕ ಸಮಸ್ಯಾತ್ಮಕ ಸಹಕಾರಿಗಳ ದೂರುಗಳ ಪರಿಶೀಲನೆ ಮತ್ತು ವಿಲೇವಾರಿ ಮಾಡುವುದು.
- ದುರ್ಬಲ ಮತ್ತು ಕಾರ್ಯನಿರತವಲ್ಲದ ಸೌಹಾರ್ದ ಸಹಕಾರಿಗಳನ್ನು ಪುನಶ್ಚೇತನಗೊಳಿಸಲು ಪ್ರಯತ್ನಿಸಲಾಗುವುದು.
- ಕಾರ್ಯನಿರತವಲ್ಲದ ಸಹಕಾರಿಗಳ ಸಮಾಪನೆಗೆ ಕ್ರಮವಿಡಲಾಗುವುದು.
- ಸದಸ್ಯ ಸಹಕಾರಿಗಳಲ್ಲಿ ಕಾಯ್ದೆ ಮತ್ತು ನಿಯಮಗಳ ಅರಿವನ್ನು ತರಬೇತಿ/ ಪ್ರಚಾರ ಮೂಡಿಸುವುದು.
- ಸದಸ್ಯ ಸಹಕಾರಿಗಳ ಪರಿವೀಕ್ಷಣೆಯನ್ನು ಕೈಗೊಳ್ಳುವುದು. ಪರಿವೀಕ್ಷಣಾ ವರದಿಯಲ್ಲಿ ಕಂಡುಬಂದ ನ್ಯೂನ್ಯತೆಗಳ ಮೇಲೆ ಕ್ರಮವಿಡುವುದು.
- ಸದಸ್ಯ ಸಹಕಾರಿಗಳಲ್ಲಿ ಹಣದ ದುರ್ಬಳಕೆ, ಅಧಿಕಾರ ದುರುಪಯೋಗ ಸಾಬೀತುಗೊಂಡ ಪ್ರಕರಣಗಳಲ್ಲಿ ನಿರ್ದೇಶಕರಿಗೆ ಕಾರಣ ಕೇಳಿ ನೋಟೀಸ್ ನೀಡಿ ನಿಯಮಾನುಸಾರ ಅನರ್ಹಗೊಳಿಸುವುದು.
- ಸದಸ್ಯ ಸಹಕಾರಿಗಳಿಗೆ ಕಾಯ್ದೆ/ ನಿಯಮಗಳು/ ಸೌಹಾರ್ದ ಚಳುವಳಿಗೆ ಸಂಬಂಧಿಸಿದಂತೆ ಇರುವ ಸಮಸ್ಯೆ/ ನಿರ್ವಚನಗಳ ಕುರಿತು ಮಾನ್ಯ ನ್ಯಾಯಾಲಯದ ಮೊರೆ ಹೋಗಿ ಸಮಸ್ಯೆ ಬಗೆಹರಿಸಲು ಕ್ರಮವಿಡುವುದು.
- ಸಹಕಾರಿಗಳ ಆರ್ಥಿಕ ಅವ್ಯವಹಾರ ನಡೆಸಿರುವ ಸಹಕಾರಿಗಳ ವಿರುದ್ಧ ಕಾಯ್ದೆ ಕಲಂ 37ಎ ರಡಿಯಲ್ಲಿ ಅಧಿಭಾರ ಅರ್ಜಿ ದಾಖಲಿಸುವುದು. ತಪ್ಪಿತಸ್ಥರ ಆಸ್ತಿಗಳ ಮೇಲೆ ಆದೇಶ ಪೂರ್ವ ಜಪ್ತಿ ಪಡೆಯುವುದು.
- ಸದಸ್ಯ ಸಹಕಾರಿಗಳಲ್ಲಿ ಸಂಶಯಾತ್ಮಕ ಕಾರ್ಯಚಟುವಟಿಕೆ ಕಂಡು ಬಂದಲ್ಲಿ ಕಾಯ್ದೆ ಕಲಂ 35ರಡಿಯಲ್ಲಿ ಸಂಬಂಧಿಸಿದ ನಿಬಂಧಕರಿಗೆ ವಿಚಾರಣೆಗೆ ಶಿಫಾರಸ್ಸು ಮಾಡುವುದು ಹಾಗೂ ಕಲಂ 65ರಡಿಯಲ್ಲಿ ಸಂಯುಕ್ತ ಸಹಕಾರಿಯಿಂದ ವಿಚಾರಣೆಗೆ ಕ್ರಮವಿಡುವುದು.
- ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನಾ ವರದಿಗಳನ್ನು ಅವಲೋಕಿಸುವುದು. ಅದರಲ್ಲಿ ಕಂಡು ಬಂದ ನ್ಯೂನ್ಯತೆಗಳ ಆಧಾರದ ಮೇಲೆ ಕ್ರಮವಿಡುವುದು.

**<u>ಶಿಕ್ಷಣ ವಿಭಾಗ</u> :**

**ಕಾರ್ಯಕ್ರಮಗಳು/ ಸೆಮಿನಾರ್‌ಗಳು:**

- ಸಂಯುಕ್ತ ಸಹಕಾರಿಯ ವತಿಯಿಂದ ಸಹಕಾರ ಮತ್ತು ಬ್ಯಾಂಕಿಂಗ್ ವಿಷಯದ ಕುರಿತು ಅಲ್ಪಾವಧಿಯ ಡಿಪ್ಲೋಮಾ/ ಪಿ.ಜಿ. ಡಿಪ್ಲೋಮಾ/ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸುವುದು.
- ರಾಜ್ಯ/ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸೆಮಿನಾರ್ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ಸಹಯೋಗ ನೀಡುವುದು ಹಾಗೂ ಸೌಹಾರ್ದ ಸಹಕಾರಿ ಚಳುವಳಿ ಮತ್ತು ತತ್ವಗಳನ್ನು ಪ್ರಚಾರ ಮಾಡುವುದು.
- ಅಗತ್ಯಕ್ಕನುಗುಣವಾಗಿ ರಾಜ್ಯ ಮಟ್ಟದ/ ವಿಭಾಗ ಮಟ್ಟದ/ ಜಿಲ್ಲಾ ಮಟ್ಟದ ಸಹಕಾರ ಸಮಾವೇಶಗಳ ಆಯೋಜನೆ.
- ಸ್ವಾಯತ್ತ ಕಾಯ್ದೆಗಳ ಅಧ್ಯಯನ ನಡೆಸುವುದು ಹಾಗೂ ರಾಷ್ಟ್ರೀಯ ಸಮಾವೇಶವನ್ನು ಆಯೋಜಿಸುವುದು.
- ಕಾಯ್ದೆ ಮತ್ತು ನಿಯಮಗಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ ಹಾಗೂ ಸೆಮಿನಾರ್‌ಗಳನ್ನು ಆಯೋಜಿಸುವುದು.
- ಸಹಕಾರ ಕ್ಷೇತ್ರದ ಜನಪ್ರತಿನಿಧಿಗಳೊಂದಿಗೆ ಸಂವಾದ/ ಚಿಂತನ/ ಮಾರ್ಗದರ್ಶನ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಸಹಕಾರ ಕ್ಷೇತ್ರದ ಧುರೀಣರ/ ಪ್ರಮುಖರ ಜೊತೆ ಸಂವಾದ ಕಾರ್ಯಕ್ರಮ ಆಯೋಜಿಸುವುದು.
- ಪದವಿ ಕಾಲೇಜು/ ವಿಶ್ವವಿದ್ಯಾಲಯ ಮಟ್ಟದಲ್ಲಿ ವಿದ್ಯಾರ್ಥಿಗಳಿಗಾಗಿ ಸಹಕಾರ ವಿಷಯದ ಕುರಿತು ಕಾರ್ಯಕ್ರಮಗಳ ಆಯೋಜನೆ.
- ಕಾಯ್ದೆಯ ರಜತ ಮಹೋತ್ಸವದ ಅಂಗವಾಗಿ ವಿಭಾಗೀಯ ಸಮಾವೇಶಗಳು ಹಾಗೂ ರಾಜ್ಯ ಮಟ್ಟದ ಸಮಾವೇಶ.
- ಯುವ/ ಮಹಿಳಾ/ ವೃತ್ತಿಪರರ ಪ್ರತ್ಯೇಕ ರಾಜ್ಯ ಮಟ್ಟದ/ ಜಿಲ್ಲಾ/ ವಿಭಾಗೀಯ ಮಟ್ಟದ ಕಾರ್ಯಾಗಾರಗಳನ್ನು/ ಸಮಾವೇಶಗಳನ್ನು ಆಯೋಜಿಸುವುದು.
- ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಕ್ರೀಡೋತ್ಸವ, ಜಾಗೃತಿ ಅಭಿಯಾನ/ ಜಾಥಾ, ಬೀದಿ ನಾಟಕಗಳ ಆಯೋಜನೆ ಮಾಡುವ ಮೂಲಕ ಸೌಹಾರ್ದ ಸಹಕಾರಿ ಚಳುವಳಿಯ ಕುರಿತು ಅರಿವು ಮೂಡಿಸುವುದು.
- ಸಹಕಾರ ಕ್ಷೇತ್ರದ ಕುರಿತು ಜನ ಜಾಗೃತಿ ಅಭಿಯಾನ ಕೈಗೊಳ್ಳುವುದು.
- ಸೌಹಾರ್ದ ಸಹಕಾರಿ ಚಳುವಳಿ ಬೆಳೆದು ಬಂದ ದಾರಿ ಹಾಗೂ ಅವಕಾಶಗಳ ಕುರಿತು ರಾಜ್ಯ ಮತ್ತು ರಾಷ್ಟ್ರ ಮಟ್ಟದ ವಿಚಾರ ಸಂಕಿರಣ ಮತ್ತು ಸಮಾವೇಶಗಳನ್ನು ಹಮ್ಮಿಕೊಳ್ಳುವುದು.
- ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ ಸಾಮಾನ್ಯ ಸೇವಾ ಕೇಂದ್ರದ (ಸಿಎಸ್‌ಸಿ) ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸುವುದು.

**<u>ತರಬೇತಿ</u> :**

- ಕಾಯ್ದೆಯ ರಜತ ಮಹೋತ್ಸವ ಅಂಗವಾಗಿ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಜಿಲ್ಲಾ ಅಥವಾ ತಾಲ್ಲೂಕುವಾರು ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಆಯೋಜಿಸುವುದು.
- ಇ–ಸ್ಟಾಂಪಿಂಗ್ ವ್ಯವಹಾರ ನಡೆಸುತ್ತಿರುವ ಸೌಹಾರ್ದ ಸಹಕಾರಿಗಳಿಗೆ ಕಾರ್ಯಾಗಾರ ಆಯೋಜಿಸುವುದು.
- ಸೌಹಾರ್ದ ಸಹಕಾರಿಗಳ ರಾಜ್ಯ/ ಅಂತರರಾಜ್ಯ ಸಹಕಾರಿ ಅಧ್ಯಯನ ಪ್ರವಾಸಕ್ಕೆ ವ್ಯವಸ್ಥೆ ಮಾಡುವುದು.
- ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಮತ್ತು ಸಿಬ್ಬಂದಿಯವರಿಗೆ ತರಬೇತಿ ಆಯೋಜಿಸುವುದು.
- ಪ್ರತಿ ಜಿಲ್ಲೆಗಳಲ್ಲಿ ಅಗತ್ಯತೆಯ ವಿಷಯಗಳ ಬಗ್ಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಗ್ರಾಮ/ ವಲಯ ಮಟ್ಟದಲ್ಲಿ ಸಮನ್ವಯ ಸಭೆ, ಕ್ಲಸ್ಟರ್ ತರಬೇತಿಗಳನ್ನು ಆಯೋಜಿಸುವುದು.
- ಸೌಹಾರ್ದ ಸಹಕಾರಿಗಳ ಸದಸ್ಯರ ತರಬೇತಿ/ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಸದಸ್ಯ ಸಹಕಾರಿಗಳ ನಿರ್ದೇಶಕರುಗಳಿಗಾಗಿ ತರಬೇತಿ ಮತ್ತು ಶಿಕ್ಷಣ ನೀಡುವುದು.
- ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ನೂತನ ಸಿಬ್ಬಂದಿಗಳಿಗಾಗಿ ಏಳು ದಿನಗಳ ಪ್ರಾರಂಭಿಕ ತರಬೇತಿ (Basic Foundation Course) ಆಯೋಜಿಸುವುದು.
- ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಸಾಲ ನಿರ್ವಹಣಾ ಅಧಿಕಾರಿಗಳಿಗಾಗಿ ಎರಡು ದಿನಗಳ ತರಬೇತಿ ಆಯೋಜನೆ.
- ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಹಾಗೂ ಅಧ್ಯಕ್ಷರು, ನಿರ್ದೇಶಕರುಗಳಿಗಾಗಿ ಎರಡು ದಿನಗಳ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.

- ತರಬೇತುದಾರರ ಸಭೆ ಹಾಗೂ ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸುವುದು.
- ಸದಸ್ಯ ಸಹಕಾರಿಗಳಿಗಾಗಿ ಐದು ದಿನದ ಹಾಗೂ 10 ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸುವುದು.
- ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಮಾಧ್ಯಮದವರಿಗೆ ಮತ್ತು ಪತ್ರಕರ್ತರಿಗೆ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಯುವ ಜನತೆ ಹಾಗೂ ಮಹಿಳಾ ಸಹಕಾರಿಗಳ ರಾಜ್ಯಮಟ್ಟದ ಕಾರ್ಯಾಗಾರ ಆಯೋಜನೆ.
- ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ, 1959ರ ಕಾಯ್ದೆಯಲ್ಲಿರುವ ಸಹಕಾರ ಸಂಘಗಳಿಗೆ/ ಬ್ಯಾಂಕುಗಳಿಗೆ ಸೌಹಾರ್ದ ಸಹಕಾರಿ ಕಾಯ್ದೆ ಕುರಿತು ವ್ಯಾಪಕ ಪ್ರಚಾರ ಕಾರ್ಯಕ್ರಮಗಳನ್ನು, ತರಬೇತಿಗಳನ್ನು ಹಮ್ಮಿಕೊಳ್ಳುವುದು.
- ಸಹಕಾರ ಕ್ಷೇತ್ರದ ಆಸಕ್ತರಿಗೆ ಅನುಕೂಲವಾಗುವಂತೆ ಆಡಿಯೋ/ ವಿಡಿಯೋ ಮೂಲಕ ತರಬೇತಿ ಆಯೋಜಿಸುವುದು.
- ಆಭರಣ ಸಾಲ ನೀಡುತ್ತಿರುವ ಸೌಹಾರ್ದ ಸಹಕಾರಿಗಳಿಗಾಗಿ ಚಿನ್ನ ಮೌಲ್ಯಮಾಪನ ಹಾಗೂ ಆಭರಣ ಸಾಲ ಕುರಿತು ತರಬೇತಿ ಆಯೋಜಿಸುವುದು.

**<u>ಪ್ರಚಾರ ಮತ್ತು ಅಭಿವೃದ್ಧಿ</u> :**

- ಜನಪ್ರತಿನಿಧಿಗಳಿಗೆ/ ಸಾರ್ವಜನಿಕರಿಗೆ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಪ್ರಚಾರ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಸೌಹಾರ್ದ ಸಹಕಾರಿಗಳು ಸೇರಿ ಸಹೋದ್ಯಮ ನಡೆಸಲು, ಒಕ್ಕೂಟ ಸಹಕಾರಿಗಳ ರಚನೆಗೆ & ನೂತನ/ ವಿನೂತನ ಸೌಹಾರ್ದ ಸಹಕಾರಿಗಳ ರಚನೆಗೆ ಪ್ರೋತ್ಸಾಹ ನೀಡುವುದು.
- ಸೌಹಾರ್ದ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಹಾಗೂ ಸಹಕಾರಿಗಳ ದೈನಂದಿನ ಕಾರ್ಯಚಟುವಟಿಕೆಗೆ ಪೂರಕವಾಗುವಂತಹ ನೂತನ ಪ್ರಕಟಣೆಗಳ ಮುದ್ರಣ.
- ಕೋ–ಆಪರೇಟಿವ್ ಕಮ್ಯುನಿಟಿ ರೇಡಿಯೋ ಕೇಂದ್ರದ ಸ್ಥಾಪನೆಗೆ ಕ್ರಮವಿಡುವುದು ಹಾಗೂ ರೆಡಿಯೋ, ಟೆಲಿವಿಷನ್ ಮಾಧ್ಯಮದ ಮೂಲಕ ಪ್ರಚಾರ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ವೆಬ್‌ಸೈಟ್, ಇ ಮೇಲ್, ಎಸ್‌ಎಂಎಸ್, ಸಾಮಾಜಿಕ ಜಾಲತಾಣಗಳ ನಿರ್ವಹಣೆಯಂತಹ ವಿವಿಧ ಸೇವೆಗಳನ್ನು ಸೌಹಾರ್ದ ಸಹಕಾರಿಗಳಿಗೆ ಕಲ್ಪಿಸಲು ಅಗತ್ಯ ಕಾರ್ಯ ನಿರ್ವಹಿಸುವುದು.
- ವಿವಿಧ ವಿಷಯಗಳನ್ನಾಧರಿಸಿ ಡಾಕ್ಯುಮೆಂಟರಿ ಫಿಲಂ, ಸಾಕ್ಷ್ಯ ಚಿತ್ರಗಳನ್ನು ಪುನರ್ ನಿರ್ಮಾಣ ಮಾಡುವುದು ಹಾಗೂ ಆಸಕ್ತ ಸಹಕಾರಿಗಳಿಗೆ ಸಾಕ್ಷ್ಯ ಚಿತ್ರ ನಿರ್ಮಾಣಕ್ಕೆ ಅಗತ್ಯ ಮಾರ್ಗದರ್ಶಕ ಸೇವೆಗಳನ್ನು ನೀಡುವುದು.
- ಸೌಹಾರ್ದ ಸಹಕಾರ ಕ್ಷೇತ್ರದ ಬಗ್ಗೆ ಜಾಹೀರಾತುಗಳನ್ನು ನೀಡುವುದು ಹಾಗೂ ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಪತ್ರಿಕಾ ಗೋಷ್ಠಿಗಳನ್ನು ನಡೆಸುವುದು.
- ಪತ್ರಿಕೆಯಲ್ಲಿ ಸಹಕಾರ ಕ್ಷೇತ್ರದ ಕುರಿತು ಅಂಕಣಗಳನ್ನು ಬರುವಂತೆ ಮಾಡುವುದು.
- ಸಹಕಾರಿಗಳಿಗೆ ಸಾಮಾಜಿಕ ಜಾಲತಾಣಗಳ ಸದ್ಬಳಕೆ ಕುರಿತು ಅರಿವು ಮೂಡಿಸುವುದು.
- ಯೂಟ್ಯೂಬ್ ಚಾನಲ್‌ನ ಮೂಲಕ ಸಹಕಾರ ಕ್ಷೇತ್ರದ ಪ್ರಚಲಿತ ವಿದ್ಯಮಾನಗಳ ಮಾಹಿತಿ ನೀಡುವುದು.
- ಟಿ.ವಿ. ಮಾಧ್ಯಮದಲ್ಲಿ ಸಹಕಾರ ಕ್ಷೇತ್ರದ ಕುರಿತು ಸಂವಾದ ಕಾರ್ಯಕ್ರಮಗಳ ಆಯೋಜನೆ ಮಾಡಲು ಕ್ರಮವಿಡುವುದು.

**<u>ಸೇವಾ ವಿಭಾಗ</u> :**

- 'ಸೌಹಾರ್ದ ರಕ್ತದಾನಿಗಳ ಮಾಹಿತಿ ಕೇಂದ್ರ'ದ ಸ್ಥಾಪನೆ & ನಿರ್ವಹಣೆ.
- ಎನ್‌ಸಿಡಿಸಿ ಹಾಗೂ ನಬಾರ್ಡ್ ಸೇವೆಗಳನ್ನು ಸದಸ್ಯ ಸಹಕಾರಿಗಳಿಗೆ ಲಭ್ಯವಾಗುವಂತೆ ಪ್ರಯತ್ನಿಸುವುದು.
- ಸಹಕಾರಿಗಳು ಮಾಹಿತಿ ಕಿಯೋಸ್ಕ್ ಸ್ಥಾಪಿಸಲು ಅಗತ್ಯ ಮಾಗದರ್ಶನ ನೀಡುವುದು.
- ಕರ್ನಾಟಕ ಸರಕಾರದ ಇ–ಗರ್ವನೆನ್ಸ್ ಇಲಾಖೆಯೊಂದಿಗೆ ಸಂಪರ್ಕ ಮಾಡಿ, ಒಪ್ಪಂದ ಮಾಡಿಕೊಳ್ಳುವ ಮೂಲಕ ಸೌಹಾರ್ದ ಸಹಕಾರಿಗಳು ತಮ್ಮ ಸದಸ್ಯರಿಗೆ ವಿವಿಧ ರೀತಿಯ ಇ–ಸೇವೆಗಳನ್ನು ಒದಗಿಸಲು ಸಹಕರಿಸುವುದು.
- ಸೌಹಾರ್ದ ಸಹಕಾರ ಕ್ಷೇತ್ರದ ಸಿಬ್ಬಂದಿಗಳ ಕಲ್ಯಾಣ ಯೋಜನೆಗಳನ್ನು ರೂಪಿಸಿ ಜಾರಿಗೆ ತರುವುದು.

**<u>ಸಂಶೋಧನೆ ಮತ್ತು ಅಭಿವೃದ್ಧಿ</u> :**

- ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳನ್ನು ಪ್ರಚುರಪಡಿಸಲು ಸಾಮಾಜಿಕ ಜಾಲತಾಣಗಳ ಬಳಕೆಯನ್ನು ವ್ಯಾಪಕಗೊಳಿಸುವುದು.

- ಸದಸ್ಯ ಸಹಕಾರಿಗಳಲ್ಲಿ ಸದಸ್ಯರು ಇಟ್ಟಿರುವ ಠೇವಣಿಗಳಿಗೆ ಠೇವಣಿ ಖಾತರಿ ಯೋಜನೆ ಜಾರಿ ಮಾಡಲು ಕ್ರಮವಹಿಸುವುದು.
- ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗಾಗಿ ಪಿಂಚಣಿ ಯೋಜನೆ, ಆರೋಗ್ಯ ವಿಮಾ ಯೋಜನೆಗಳ ಜಾರಿ ಕುರಿತು ಅಧ್ಯಯನ ನಡೆಸಿ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸುವುದು.
- ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಸಹಕಾರ ವಿಷಯವನ್ನು ಪಠ್ಯಪುಸ್ತಕಕ್ಕೆ ಅಳವಡಿಸುವ ಕುರಿತು ಪ್ರಯತ್ನ.
- ರಾಜ್ಯ ಮಟ್ಟದಲ್ಲಿ ಸಹಕಾರಿಗಳಿಗೆ ಮರು ಹಣಕಾಸು ಒದಗಿಸಬಹುದಾದ ಹಾಗೂ ಸಹಕಾರಿಗಳ ಹೆಚ್ಚುವರಿ ಹಣ ಠೇವಣಿಗಳ ಹೂಡಿಕೆಗೆ ಅವಕಾಶ ಒದಗಿಸುವ ರಾಜ್ಯ ಸೌಹಾರ್ದ ಸಹಕಾರಿಗಳ ಕೇಂದ್ರೀಯ ಸಂಸ್ಥೆ ಪ್ರಾರಂಭಿಸುವುದಕ್ಕೆ ಪ್ರಯತ್ನಿಸುವುದು.
- ವಿವಿಧ ರಾಜ್ಯಗಳ ಸಹಕಾರ ಕಾಯ್ದೆ ಹಾಗೂ ಸಹಕಾರ ಕ್ಷೇತ್ರದ ಅಧ್ಯಯನ ನಡೆಸುವುದು.
- ಸದಸ್ಯ ಸಹಕಾರಿಗಳ ಕೋರಿಕೆಯ ಮೇರೆಗೆ SWOT Analysis & GAP Analysis ಮಾಡುವ ವ್ಯವಸ್ಥೆ.
- ಸೌಹಾರ್ದ ಸಹಕಾರಿಗಳಲ್ಲಿನ ತಂತ್ರಜ್ಞಾನ ಬಳಕೆಗೆ ಪ್ರೋತ್ಸಾಹಿಸುವುದು.
- ಸೌಹಾರ್ದ ಸಹಕಾರಿಗಳಲ್ಲಿನ ಸೇವಾ ಕಾರ್ಯಚಟುವಟಿಕೆಗಳ ಮಾಹಿತಿ ಸಂಗ್ರಹ ಹಾಗೂ ಸಾಮಾಜಿಕ ಕಾರ್ಯಗಳ ಬಗ್ಗೆ ಜಾಗೃತಿ ಮೂಡಿಸುವುದು.
- ಬ್ಯಾಂಕುಗಳ ಸಾಲ ಸುಸ್ತಿ ಸಾಲ ವಸೂಲಾತಿಗೆ ಇರುವಂತೆ Asset Reconstruction Company ಗಳ ಮಾದರಿಯಲ್ಲಿ ಸೌಹಾರ್ದಗಳಿಗೂ ಒಂದು ಸಂಸ್ಥೆಯನ್ನು ಪ್ರಾರಂಭಿಸುವುದು.
- ಸಹಕಾರ ಕ್ಷೇತ್ರದ ಮೂಲಕ ಹೊಸ ಉದ್ಯಮಗಳ ಅನ್ವೇಷಣೆ ಹಾಗೂ ಕಾರ್ಯಾಗಾರ ಆಯೋಜನೆ.

**ಸಾಮಾಜಿಕ ಕಳಕಳಿ :**

- ಪರಿಸರ ಸಂರಕ್ಷಣೆ ಹಾಗೂ ತಾಪಮಾನ ಬದಲಾವಣೆಗಾಗಿ ಎಲ್ಲಾ ಸಹಕಾರಿಗಳು ಬದ್ಧರಾಗಲು ಮತ್ತು ಪ್ರತಿ ವರ್ಷಕ್ಕೆ ಒಂದು ಸಹಕಾರಿಯು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಕನಿಷ್ಠ 10 ಗಿಡಗಳನ್ನು ನೆಡುವುದರೊಂದಿಗೆ ಅವುಗಳನ್ನು ಪಾಲನೆ ಪೋಷಣೆ ಮಾಡಿ, ಮರವಾಗಿ ಬೆಳೆಸುವಂತೆ ಪ್ರೇರೇಪಿಸುವುದು.
- ಸೌಹಾರ್ದ ಸಹಕಾರಿಗಳು ನಡೆಸುವ ಸಾಮಾಜಿಕ ಕಾರ್ಯಚಟುವಟಿಕೆಗಳ ಮಾಹಿತಿ ಸಂಗ್ರಹ ಹಾಗೂ ಅವುಗಳಿಗೆ ಪ್ರಚಾರ ನೀಡುವ ಮೂಲಕ ಸಾಮಾಜಿಕ ಕಳಕಳಿ ತತ್ವವನ್ನು ಪ್ರಚುರಪಡಿಸುವುದು.
- ಸ್ವದೇಶಿ ವಸ್ತುಗಳ ಬಳಕೆಯನ್ನು ಉತ್ತೇಜಿಸುವುದು, ಸ್ಥಳೀಯ ಉತ್ಪನ್ನ ಹಾಗೂ ಸೇವೆಗಳ ಬಳಕೆಗೆ ಆದ್ಯತೆ ನೀಡುವುದು.
- ಸಹಕಾರಿಗಳ ಮೂಲಕ ಮಹಿಳಾ ಆರ್ಥಿಕ ಸಬಲೀಕರಣ.
- ಸದಸ್ಯ ಸಹಕಾರಿಗಳ ಮೂಲಕ ಕೇಂದ್ರ ಸಹಕಾರ ಸಚಿವಾಲಯದ ಯೋಜನೆಯ "ಕೆಮಿಕಲ್ ಫ್ರೀ ವಿಲೇಜ್" ರಸಾಯನಿಕ ರಹಿತ ಗ್ರಾಮ ನಿರ್ಮಾಣ.
- ಸದಸ್ಯ ಸಹಕಾರಿಗಳ ಮೂಲಕ ಪ್ರತಿ ಗ್ರಾಮದಲ್ಲಿ ಜಾನುವಾರುಗಳಿಗೆ ಕೇಂದ್ರ ಸಹಕಾರ ಸಚಿವಾಲಯದ ಯೋಜನೆಯ "ಅಮೃತ ಸರೋವರ" ನಿರ್ಮಾಣ.

**ವಿಷಯ 10 : 2025–26ನೇ ಸಾಲಿನ ಪರಿಷ್ಕೃತ ಮುಂಗಡ ಪತ್ರವನ್ನು ಅನುಮೋದಿಸುವುದು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯ 23ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮೋದಿತವಾದ 2025–26ನೇ ಸಾಲಿನ ಮುಂಗಡ ಪತ್ರವನ್ನು 2024–25ನೇ ಸಾಲಿನ ಆರ್ಥಿಕ ವರದಿಗಳು ಹಾಗೂ 2025–26ನೇ ಸಾಲಿನ ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆಯ ಆಧಾರದಲ್ಲಿ ಪರಿಷ್ಕರಿಸಿ, ಸಭೆಗೆ ಮಂಡಿಸಲಾಗಿದ್ದು, ಪರಿಶೀಲಿಸಿ, ಮೊತ್ತಗಳಲ್ಲಿ ಏನಾದರೂ ವ್ಯತ್ಯಾಸಗಳಿದ್ದಲ್ಲಿ ತಿಳಿಸಿ, ಅನುಮೋದಿಸಲು ಸಭೆಗೆ ಕೋರಿದರು. ನಂತರ ಸಭೆಯು, ಸಂಯುಕ್ತ ಸಹಕಾರಿಯ 2025–26ನೇ ಸಾಲಿನ ಪರಿಷ್ಕೃತ ಮುಂಗಡ ಪತ್ರವನ್ನು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ** : ಈ ಕೆಳಗಿನಂತೆ ಸಂಯುಕ್ತ ಸಹಕಾರಿಯ 2025–26ನೇ ಸಾಲಿನ ಪರಿಷ್ಕೃತ ಮುಂಗಡ ಪತ್ರವನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು**

**ಕ್ರೋಢೀಕೃತ ಬಜೆಟ್ – 2025–26**

| ವೆಚ್ಚಗಳು | | | | | ಆದಾಯಗಳು | | | | |
|---|---|---|---|---|---|---|---|---|---|
| | ಅನುಮೋದಿತ | | ಪರಿಷ್ಕೃತ | | | ಅನುಮೋದಿತ | | ಪರಿಷ್ಕೃತ | |
| | ವ್ಯಯ | ಒಟ್ಟು | ವ್ಯಯ | ಒಟ್ಟು | | ಆಯ | ಒಟ್ಟು | ಆಯ | ಒಟ್ಟು |
| **ಶಿಕ್ಷಣ ನಿಧಿ ವೆಚ್ಚಗಳು** | | **13,01,69,000** | | **13,01,69,000** | **ಶಿಕ್ಷಣ ನಿಧಿ ಆದಾಯಗಳು** | | **13,85,50,000** | | **13,85,50,000** |
| ಕೇಂದ್ರ ಕಛೇರಿ | 7,54,45,000 | | 7,58,45,000 | | ಶಿಕ್ಷಣ ನಿಧಿ | 13,50,00,000 | | 13,50,00,000 | |
| ಬೆಳಗಾವಿ ವಿಭಾಗ | 1,91,46,000 | | 1,87,76,000 | | ಪ್ರತಿನಿಧಿ ಶುಲ್ಕ | 2,50,000 | | 2,50,000 | |
| ಕಲಬುರಗಿ ವಿಭಾಗ | 1,35,80,000 | | 1,34,00,000 | | ಬಡ್ಡಿ ಆದಾಯ | 25,00,000 | | 25,00,000 | |
| ಬೆಂಗಳೂರು ವಿಭಾಗ | 1,16,23,000 | | 1,16,23,000 | | ಪ್ರಕಟಣೆಗಳ ಮಾರಾಟ | 2,00,000 | | 2,00,000 | |
| ಮೈಸೂರು ವಿಭಾಗ | 1,03,75,000 | | 1,05,25,000 | | ಇತರೆ ಆದಾಯ | 6,00,000 | | 6,00,000 | |
| | | | | | | | | | |
| **ಆಡಳಿತ ವೆಚ್ಚಗಳು** | | **9,72,24,000** | | **9,72,68,000** | **ಆಡಳಿತ ಆದಾಯಗಳು** | | **7,30,00,000** | | **7,30,00,000** |
| ಕೇಂದ್ರ ಕಛೇರಿ | 6,17,14,000 | | 6,22,70,000 | | ವಾರ್ಷಿಕ ವಂತಿಗೆ | 7,00,00,000 | | 7,00,00,000 | |
| ಬೆಳಗಾವಿ ವಿಭಾಗ | 1,24,21,000 | | 1,20,25,000 | | ಬಡ್ಡಿ ಮತ್ತು ಇತರೆ | 30,00,000 | | 30,00,000 | |
| ಕಲಬುರಗಿ ವಿಭಾಗ | 92,30,000 | | 89,85,000 | | | | | | |
| ಬೆಂಗಳೂರು ವಿಭಾಗ | 76,36,000 | | 76,40,000 | | **ಇ – ಸ್ಟಾಂಪಿಂಗ್ ಆದಾಯಗಳು** | | **1,08,00,000** | | **1,18,00,000** |
| ಮೈಸೂರು ವಿಭಾಗ | 62,23,000 | | 63,48,000 | | ಬಡ್ಡಿ ಆದಾಯ | 1,05,00,000 | | 1,15,00,000 | |
| | | | | | ನಿರ್ವಹಣಾ ಶುಲ್ಕ | 3,00,000 | | 3,00,000 | |
| **ಇ – ಸ್ಟಾಂಪಿಂಗ್ ವೆಚ್ಚಗಳು** | | **79,20,000** | | **75,60,000** | | | | | |
| **ಸಹಕಾರ ನ್ಯಾಯಾಲಯ ಸಂಬಂಧಿತ ವೆಚ್ಚಗಳು** | | **1,70,25,000** | | **1,74,25,000** | **ಸಹಕಾರ ನ್ಯಾಯಾಲಯ ಸಂಬಂಧಿತ ಆದಾಯಗಳು** | | **3,60,00,000** | | **3,75,00,000** |
| **ವೆಚ್ಚಕ್ಕೆ ಮೀರಿದ ಆದಾಯ** | | **60,12,000** | | **84,28,000** | **ಆದಾಯಕ್ಕೆ ಮೀರಿದ ವೆಚ್ಚ** | | – | | – |
| **ಒಟ್ಟು** | | **25,83,50,000** | | **26,08,50,000** | **ಒಟ್ಟು** | | **25,83,50,000** | | **26,08,50,000** |
| | | | | | | | | | |
| **ಬಂಡವಾಳ ವೆಚ್ಚ** | | **ಮೊತ್ತ** | | **ಮೊತ್ತ** | | | | | |
| ಪೀಠೋಪಕರಣಗಳು | | 2,00,00,000 | | 2,00,00,000 | | | | | |
| ವಾಹನ | | – | | 60,00,000 | | | | | |
| ಕಂಪ್ಯೂಟರ್/ಕಛೇರಿ ಸಲಕರಣೆಗಳ | | 25,00,000 | | 60,00,000 | | | | | |
| ಕಟ್ಟಡ | | 2,00,00,000 | | 3,00,00,000 | | | | | |
| | | **4,25,00,000** | | **6,20,00,000** | | | | | |

## ಆಡಳಿತ ವಿಭಾಗ ಪರಿಷ್ಕೃತ ಬಜೆಟ್ – 2025–26

| ಕ್ರ. ಸಂ. | ವಿವರ | ಕೇಂದ್ರ ಕಛೇರಿ | | ಬೆಳಗಾವಿ ಪ್ರಾಂತ | | ಕಲಬುರಗಿ ಪ್ರಾಂತ | | ಬೆಂಗಳೂರು ಪ್ರಾಂತ | | ಮೈಸೂರು ಪ್ರಾಂತ | | ಒಟ್ಟು ಬಜೆಟ್ ಮೊತ್ತ | |
|---|---|---|---|---|---|---|---|---|---|---|---|---|---|
| | | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ |
| 1 | ಬಾಡಿಗೆ | – | – | – | – | – | – | – | – | 2,50,000 | 4,00,000 | 2,50,000 | 4,00,000 |
| 2 | ಕಛೇರಿ ನಿರ್ವಹಣೆ | 4,00,000 | 6,00,000 | 2,00,000 | 1,00,000 | 2,50,000 | 1,00,000 | 85,000 | 85,000 | 1,30,000 | 1,00,000 | 10,65,000 | 9,85,000 |
| 3 | ಕಂಪ್ಯೂಟರ್ ನಿರ್ವಹಣೆ | 2,80,000 | 2,80,000 | 1,50,000 | 1,50,000 | 1,50,000 | 1,50,000 | 50,000 | 50,000 | 60,000 | 60,000 | 6,90,000 | 6,90,000 |
| 4 | ತಂತ್ರಾಂಶ ನಿರ್ವಹಣೆ | 6,50,000 | 6,50,000 | 70,000 | 70,000 | 60,000 | 60,000 | 35,000 | 35,000 | 50,000 | 50,000 | 8,65,000 | 8,65,000 |
| 5 | ಜಲ ಮತ್ತು ವಿದ್ಯುತ್ | 10,00,000 | 8,00,000 | 6,00,000 | 3,00,000 | 2,50,000 | 1,50,000 | 60,000 | 60,000 | 55,000 | 55,000 | 19,65,000 | 13,65,000 |
| 6 | ಸಿಬ್ಬಂದಿ ಕಲ್ಯಾಣ | 4,50,000 | 4,50,000 | 1,00,000 | 1,00,000 | 60,000 | 60,000 | 50,000 | 50,000 | 55,000 | 55,000 | 7,15,000 | 7,15,000 |
| 7 | ಸ್ಥಳೀಯ ಓಡಾಟ | 2,40,000 | 2,40,000 | 60,000 | 60,000 | 35,000 | 35,000 | 30,000 | 30,000 | 28,000 | 28,000 | 3,93,000 | 3,93,000 |
| 8 | ಪೂಜಾ ವೆಚ್ಚಗಳು | 1,20,000 | 1,20,000 | 60,000 | 60,000 | 45,000 | 45,000 | 25,000 | 25,000 | 25,000 | 25,000 | 2,75,000 | 2,75,000 |
| 9 | ಬ್ಯಾಂಕ್ ವೆಚ್ಚಗಳು | 24,000 | 30,000 | 6,000 | 10,000 | 5,000 | 10,000 | 6,000 | 10,000 | 5,000 | 10,000 | 46,000 | 70,000 |
| 10 | ವಿಮೆ | 5,50,000 | 5,50,000 | 2,50,000 | 2,50,000 | 35,000 | 35,000 | 35,000 | 35,000 | 3,00,000 | 3,00,000 | 11,70,000 | 11,70,000 |
| 11 | ಸವಕಳಿ | 85,00,000 | 1,00,00,000 | – | – | – | – | – | – | – | – | 85,00,000 | 1,00,00,000 |
| 12 | ಮುದ್ರಣ ಮತ್ತು ಲೇಖನ ಸಾಮಗ್ರಿ | 20,00,000 | 15,00,000 | 2,50,000 | 2,50,000 | 1,20,000 | 1,20,000 | 1,20,000 | 1,20,000 | 75,000 | 75,000 | 25,65,000 | 20,65,000 |
| 13 | ಅಂಚೆ ವೆಚ್ಚ | 3,00,000 | 3,50,000 | 1,50,000 | 1,50,000 | 1,20,000 | 1,20,000 | 1,00,000 | 1,00,000 | 45,000 | 45,000 | 7,15,000 | 7,65,000 |
| 14 | ಕಾನೂನು/ವೃತ್ತಿ ನೈಪುಣ್ಯ ಶುಲ್ಕ | 16,00,000 | 16,00,000 | – | – | – | – | – | – | – | – | 16,00,000 | 16,00,000 |
| 15 | ಸಿಬ್ಬಂದಿ ವೆಚ್ಚಗಳು | 2,00,00,000 | 2,00,00,000 | 80,00,000 | 80,00,000 | 60,00,000 | 60,00,000 | 55,00,000 | 55,00,000 | 35,00,000 | 35,00,000 | 4,30,00,000 | 4,30,00,000 |
| 16 | ಪ್ರಯಾಣ ವೆಚ್ಚಗಳು | 8,00,000 | 8,00,000 | 1,20,000 | 1,20,000 | 70,000 | 70,000 | 70,000 | 70,000 | 60,000 | 60,000 | 11,20,000 | 11,20,000 |
| 17 | ದೂರವಾಣಿ ಇತ್ಯಾದಿ | 6,00,000 | 6,00,000 | 85,000 | 85,000 | 80,000 | 80,000 | 70,000 | 70,000 | 55,000 | 55,000 | 8,90,000 | 8,90,000 |
| 18 | ಪರಿವೀಕ್ಷಣೆ, ಭೇಟಿ ಇತ್ಯಾದಿ | 4,00,000 | 4,00,000 | 3,20,000 | 3,20,000 | 2,30,000 | 2,30,000 | 2,20,000 | 2,20,000 | 1,80,000 | 1,80,000 | 13,50,000 | 13,50,000 |
| 19 | ಆಡಳಿತ ಮಂಡಲಿ ವೆಚ್ಚಗಳು | 50,00,000 | 60,00,000 | – | – | – | – | – | – | – | – | 50,00,000 | 60,00,000 |
| 20 | ಉಪ ಸಮಿತಿ ವೆಚ್ಚಗಳು | 5,00,000 | 20,00,000 | 2,50,000 | 2,50,000 | 2,20,000 | 2,20,000 | 1,80,000 | 1,80,000 | 1,30,000 | 1,30,000 | 12,80,000 | 27,80,000 |
| 21 | ಸಾಮಾನ್ಯ ಸಭೆ ವೆಚ್ಚಗಳು | 65,00,000 | 65,00,000 | – | – | – | – | – | – | – | – | 65,00,000 | 65,00,000 |
| 22 | ಸಮಾಪನೆ ಸಂಬಂಧಿತ ವೆಚ್ಚಗಳು | 30,00,000 | 30,00,000 | – | – | – | – | – | – | – | – | 30,00,000 | 30,00,000 |
| 23 | ಕಟ್ಟಡ ನಿರ್ವಹಣೆ | 25,00,000 | 20,00,000 | 6,00,000 | 6,00,000 | 5,50,000 | 5,50,000 | 2,30,000 | 2,30,000 | 5,50,000 | 5,50,000 | 44,30,000 | 39,30,000 |
| 24 | ಜಿಲ್ಲಾ ಕಛೇರಿ ವೆಚ್ಚಗಳು | – | – | 8,00,000 | 8,00,000 | 6,50,000 | 6,50,000 | 6,20,000 | 6,20,000 | 5,50,000 | 5,50,000 | 26,20,000 | 26,20,000 |
| 25 | ವಾಹನ ಮತ್ತು ನಿರ್ವಹಣೆ | 20,00,000 | 15,00,000 | 3,50,000 | 3,50,000 | 3,00,000 | 3,00,000 | 1,50,000 | 1,50,000 | 1,20,000 | 1,20,000 | 29,20,000 | 24,20,000 |
| 26 | ಜಿಎಸ್‌ಟಿ ಇನ್‌ಎಲಿಜಿಬಲ್ ಟ್ಯಾಕ್ಸ್ | 30,00,000 | 10,00,000 | – | – | – | – | – | – | – | – | 30,00,000 | 10,00,000 |
| 27 | ಇತರೆ | 13,00,000 | 13,00,000 | – | – | – | – | – | – | – | – | 13,00,000 | 13,00,000 |
| | **ಒಟ್ಟು** | **6,17,14,000** | **6,22,70,000** | **1,24,21,000** | **1,20,25,000** | **92,30,000** | **89,85,000** | **76,36,000** | **76,40,000** | **62,23,000** | **63,48,000** | **9,72,24,000** | **9,72,68,000** |

## ಶಿಕ್ಷಣ ವಿಭಾಗ ಬಜೆಟ್ – 2025–26

| ಕ್ರ.ಸಂ. | ವಿವರ | ಕೇಂದ್ರ ಕಛೇರಿ | | ಬೆಳಗಾವಿ ಪ್ರಾಂತ | | ಕಲಬುರಗಿ ಪ್ರಾಂತ | | ಬೆಂಗಳೂರು ಪ್ರಾಂತ | | ಮೈಸೂರು ಪ್ರಾಂತ | | ಒಟ್ಟು ಬಜೆಟ್ ಮೊತ್ತ | |
|---|---|---|---|---|---|---|---|---|---|---|---|---|---|
| | | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ |
| 1 | ತರಬೇತಿ ಕಾರ್ಯಕ್ರಮಗಳು(ರಜತ ಮಹೋತ್ಸವ ಕಾರ್ಯಕ್ರಮಗಳು ಸೇರಿದಂತೆ) | 1,20,00,000.00 | 1,20,00,000.00 | 50,00,000.00 | 50,00,000.00 | 35,00,000.00 | 35,00,000.00 | 30,00,000.00 | 30,00,000.00 | 22,00,000.00 | 22,00,000.00 | 2,57,00,000.00 | 2,57,00,000.00 |
| 2 | ಅವಲೋಕನ/ಸಂಪರ್ಕ ಸಭೆಗಳು | – | – | 7,00,000.00 | 7,00,000.00 | 5,00,000.00 | 5,00,000.00 | 4,00,000.00 | 4,00,000.00 | 4,00,000.00 | 4,00,000.00 | 20,00,000.00 | 20,00,000.00 |
| 3 | ಪ್ರಚಾರ/ಪ್ರಸಿದ್ಧಿ/ಪ್ರೋತ್ಸಾಹಕ ಚಟುವಟಿಕೆಗಳು | 60,00,000.00 | 60,00,000.00 | 6,00,000.00 | 6,00,000.00 | 4,00,000.00 | 4,00,000.00 | 3,00,000.00 | 3,00,000.00 | 2,50,000.00 | 2,50,000.00 | 75,50,000.00 | 75,50,000.00 |
| 4 | ಸ್ವಾಭಿಮಾನಿ ಸಹಕಾರಿ | 20,00,000.00 | 20,00,000.00 | – | – | – | – | – | – | – | – | 20,00,000.00 | 20,00,000.00 |
| 5 | ಸಹಕಾರ ಸಪ್ತಾಹ | 30,00,000.00 | 30,00,000.00 | – | – | – | – | – | – | – | – | 30,00,000.00 | 30,00,000.00 |
| 6 | ಸಂಶೋಧನೆ ಮತ್ತು ಅಭಿವೃದ್ಧಿ | 20,00,000.00 | 20,00,000.00 | – | – | – | – | – | – | – | – | 20,00,000.00 | 20,00,000.00 |
| 7 | ಸಮಿತಿ/ಮಂಡಲಿ ಸಭೆ ವೆಚ್ಚಗಳು | 35,00,000.00 | 35,00,000.00 | – | – | – | – | – | – | – | – | 35,00,000.00 | 35,00,000.00 |
| 8 | ಆಡಳಿತಾತ್ಮಕ ವೆಚ್ಚಗಳು | 2,69,45,000.00 | 2,73,45,000.00 | 48,46,000.00 | 44,76,000.00 | 31,80,000.00 | 30,00,000.00 | 24,23,000.00 | 24,23,000.00 | 23,25,000.00 | 24,75,000.00 | 3,97,19,000.00 | 3,97,19,000.00 |
| 9 | ಸಿಬ್ಬಂದಿ ವೆಚ್ಚಗಳು | 2,00,00,000.00 | 2,00,00,000.00 | 80,00,000.00 | 80,00,000.00 | 60,00,000.00 | 60,00,000.00 | 55,00,000.00 | 55,00,000.00 | 45,00,000.00 | 45,00,000.00 | 4,40,00,000.00 | 4,40,00,000.00 |
| 10 | ಪೂಜಾ/ಕಟ್ಟಡ ಪೂಜಾ ವೆಚ್ಚಗಳು | – | – | – | – | – | – | – | – | 7,00,000.00 | 7,00,000.00 | 7,00,000.00 | 7,00,000.00 |
| | **ಒಟ್ಟು** | **7,54,45,000.00** | **7,58,45,000.00** | **1,91,46,000.00** | **1,87,76,000.00** | **1,35,80,000.00** | **1,34,00,000.00** | **1,16,23,000.00** | **1,16,23,000.00** | **1,03,75,000.00** | **1,05,25,000.00** | **13,01,69,000.00** | **13,01,69,000.00** |

**ಶಿಕ್ಷಣ ನಿಧಿಯ ಆಡಳಿತಾತ್ಮಕ ವೆಚ್ಚ– 2025–26**

| ಕ್ರ.ಸಂ. | ವಿವರ | ಕೇಂದ್ರ ಕಛೇರಿ | | ಬೆಳಗಾವಿ | | ಕಲಬುರಗಿ | | ಬೆಂಗಳೂರು | | ಮೈಸೂರು | | ಒಟ್ಟು ಬಜೆಟ್ ಮೊತ್ತ | |
|---|---|---|---|---|---|---|---|---|---|---|---|---|---|
| | | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ | ಅನುಮೋದಿತ | ಪರಿಷ್ಕೃತ |
| 1 | ಬಾಡಿಗೆ | – | – | – | – | – | – | – | – | 2,50,000.00 | 4,00,000.00 | 2,50,000.00 | 4,00,000.00 |
| 2 | ಕಛೇರಿ ನಿರ್ವಹಣೆ | 5,50,000.00 | 3,00,000.00 | 2,50,000.00 | 2,00,000.00 | 2,50,000.00 | 2,00,000.00 | 1,00,000.00 | 1,00,000.00 | 75,000.00 | 75,000.00 | 12,25,000.00 | 8,75,000.00 |
| 3 | ಕಂಪ್ಯೂಟರ್ ನಿರ್ವಹಣೆ | 2,50,000.00 | 2,50,000.00 | 1,80,000.00 | 1,80,000.00 | 1,20,000.00 | 1,20,000.00 | 60,000.00 | 60,000.00 | 30,000.00 | 30,000.00 | 6,40,000.00 | 6,40,000.00 |
| 4 | ಜೆರಾಕ್ಸ | 80,000.00 | 80,000.00 | 35,000.00 | 35,000.00 | 25,000.00 | 25,000.00 | 15,000.00 | 15,000.00 | – | – | 1,55,000.00 | 1,55,000.00 |
| 5 | ತಂತ್ರಾಂಶ ನಿರ್ವಹಣೆ | 4,50,000.00 | 4,50,000.00 | 50,000.00 | 50,000.00 | 40,000.00 | 40,000.00 | 20,000.00 | 20,000.00 | 20,000.00 | 20,000.00 | 5,80,000.00 | 5,80,000.00 |
| 6 | ಜಲ ಮತ್ತು ವಿದ್ಯುತ್ | 6,50,000.00 | 5,00,000.00 | 3,20,000.00 | 2,50,000.00 | 3,20,000.00 | 2,50,000.00 | 1,00,000.00 | 1,00,000.00 | 60,000.00 | 60,000.00 | 14,50,000.00 | 11,60,000.00 |
| 7 | ಸಿಬ್ಬಂದಿ ಕಲ್ಯಾಣ | 2,00,000.00 | 2,00,000.00 | 1,50,000.00 | 1,50,000.00 | 1,00,000.00 | 1,00,000.00 | 65,000.00 | 65,000.00 | 50,000.00 | 50,000.00 | 5,65,000.00 | 5,65,000.00 |
| 8 | ಸಾರ್ವಜನಿಕ ಸಂಪರ್ಕ/ಅತಿಥಿ ಉಪಚಾರ | 6,50,000.00 | 6,50,000.00 | 1,20,000.00 | 1,20,000.00 | 1,20,000.00 | 1,20,000.00 | 35,000.00 | 35,000.00 | 40,000.00 | 40,000.00 | 9,65,000.00 | 9,65,000.00 |
| 9 | ಸ್ಥಳೀಯ ಓಡಾಟ | 1,00,000.00 | 1,00,000.00 | 65,000.00 | 65,000.00 | 55,000.00 | 55,000.00 | 60,000.00 | 60,000.00 | 60,000.00 | 60,000.00 | 3,40,000.00 | 3,40,000.00 |
| 10 | ಬ್ಯಾಂಕ್ ವೆಚ್ಚಗಳು | 20,000.00 | 20,000.00 | 6,000.00 | 6,000.00 | 5,000.00 | 5,000.00 | 5,000.00 | 5,000.00 | 5,000.00 | 5,000.00 | 41,000.00 | 41,000.00 |
| 11 | ವಿಮೆ | 3,00,000.00 | 3,00,000.00 | 25,000.00 | 25,000.00 | 10,000.00 | 10,000.00 | 10,000.00 | 10,000.00 | 10,000.00 | 10,000.00 | 3,55,000.00 | 3,55,000.00 |
| 12 | ಸವಕಳಿ | 85,00,000.00 | 1,00,00,000.00 | – | – | – | – | – | – | – | – | 85,00,000.00 | 1,00,00,000.00 |
| 13 | ಮುದ್ರಣ ಮತ್ತು ಲೇಖನ ಸಾಮಗ್ರಿ | 6,50,000.00 | 6,50,000.00 | 3,50,000.00 | 3,50,000.00 | 3,00,000.00 | 3,00,000.00 | 2,20,000.00 | 2,20,000.00 | 1,50,000.00 | 1,50,000.00 | 16,70,000.00 | 16,70,000.00 |
| 14 | ಅಂಚೆವೆಚ್ಚ | 3,50,000.00 | 3,50,000.00 | 2,00,000.00 | 2,00,000.00 | 1,00,000.00 | 1,00,000.00 | 1,20,000.00 | 1,20,000.00 | 75,000.00 | 75,000.00 | 8,45,000.00 | 8,45,000.00 |
| 15 | ನಿಯತಕಾಲಿಕಗಳು | 55,000.00 | 55,000.00 | 35,000.00 | 35,000.00 | 30,000.00 | 30,000.00 | 20,000.00 | 20,000.00 | 20,000.00 | 20,000.00 | 1,60,000.00 | 1,60,000.00 |
| 16 | ಪುಸ್ತಕಗಳು(ಲೈಬ್ರರಿ) | 40,000.00 | 40,000.00 | 20,000.00 | 20,000.00 | 15,000.00 | 15,000.00 | 18,000.00 | 18,000.00 | 15,000.00 | 15,000.00 | 1,08,000.00 | 1,08,000.00 |
| 17 | ದೂರವಾಣಿ ಇತ್ಯಾದಿ | 3,00,000.00 | 3,00,000.00 | 1,35,000.00 | 1,35,000.00 | 1,00,000.00 | 1,00,000.00 | 75,000.00 | 75,000.00 | 50,000.00 | 50,000.00 | 6,60,000.00 | 6,60,000.00 |
| 18 | ಪ್ರಯಾಣ ವೆಚ್ಚಗಳು | 2,50,000.00 | 2,50,000.00 | 1,20,000.00 | 1,20,000.00 | 1,00,000.00 | 1,00,000.00 | 1,20,000.00 | 1,20,000.00 | 85,000.00 | 85,000.00 | 6,75,000.00 | 6,75,000.00 |
| 19 | ನಿರ್ದೇಶಕರ ಪ್ರಯಾಣ ವೆಚ್ಚ | 2,00,000.00 | 2,00,000.00 | 75,000.00 | 75,000.00 | 50,000.00 | 50,000.00 | 60,000.00 | 60,000.00 | 60,000.00 | 60,000.00 | 4,45,000.00 | 4,45,000.00 |
| 20 | ವಾಹನ ನಿರ್ವಹಣೆ ಮತ್ತು ಇಂಧನ | 8,00,000.00 | 5,00,000.00 | 3,00,000.00 | 2,00,000.00 | 2,00,000.00 | 2,00,000.00 | 2,00,000.00 | 2,00,000.00 | 1,50,000.00 | 1,50,000.00 | 16,50,000.00 | 12,50,000.00 |
| 21 | ವೃತ್ತಿ ಶುಲ್ಕ | 12,00,000.00 | 12,00,000.00 | – | – | – | – | – | – | – | – | 12,00,000.00 | 12,00,000.00 |
| 22 | ಪೂಜಾ ವೆಚ್ಚ | 1,50,000.00 | 1,50,000.00 | 60,000.00 | 60,000.00 | 30,000.00 | 30,000.00 | 20,000.00 | 20,000.00 | 20,000.00 | 20,000.00 | 2,80,000.00 | 2,80,000.00 |
| 23 | ಕಟ್ಟಡ ನಿರ್ವಹಣೆ | 12,00,000.00 | 8,00,000.00 | 3,50,000.00 | 2,00,000.00 | 2,10,000.00 | 1,50,000.00 | 1,00,000.00 | 1,00,000.00 | 1,00,000.00 | 1,00,000.00 | 19,60,000.00 | 13,50,000.00 |
| 24 | ರಜತಮಹೋತ್ಸವ | 50,00,000.00 | 50,00,000.00 | 20,00,000.00 | 20,00,000.00 | 10,00,000.00 | 10,00,000.00 | 10,00,000.00 | 10,00,000.00 | 10,00,000.00 | 10,00,000.00 | 1,00,00,000.00 | 1,00,00,000.00 |
| 25 | ರಜತಮಹೋತ್ಸವ–ನೆನಪಿನ ಕಾಣಿಕೆ | 50,00,000.00 | 50,00,000.00 | | | | | | | | | 50,00,000.00 | 50,00,000.00 |
| | **ಒಟ್ಟು** | **2,69,45,000.00** | **2,73,45,000.00** | **48,46,000.00** | **44,76,000.00** | **31,80,000.00** | **30,00,000.00** | **24,23,000.00** | **24,23,000.00** | **23,25,000.00** | **24,75,000.00** | **3,97,19,000.00** | **3,97,19,000.00** |

| ಇ ಸ್ಟಾಂಪಿಂಗ್ ವಿಭಾಗ | | | |
|---|---|---|---|
| ವೆಚ್ಚಗಳು 2025–26 | | | |
| ಕ್ರ.ಸಂ. | ವಿವರ | ಮೊತ್ತ | ಪರಿಷ್ಕೃತ ಬಜೆಟ್ |
| 1 | ಕಂಪ್ಯೂಟರ್ ನಿರ್ವಹಣೆ | 2,00,000.00 | 1,00,000.00 |
| 2 | ಕಟ್ಟಡ ನಿರ್ವಹಣೆ | 2,00,000.00 | 2,00,000.00 |
| 3 | ಜಲ ಮತ್ತು ವಿದ್ಯುತ್ | 2,00,000.00 | 2,00,000.00 |
| 4 | ಸಿಬ್ಬಂದಿ ಕಲ್ಯಾಣ | 75,000.00 | 75,000.00 |
| 5 | ಸ್ಥಳೀಯ ಓಡಾಟ | 65,000.00 | 65,000.00 |
| 6 | ಕಛೇರಿ ನಿರ್ವಹಣೆ | 2,00,000.00 | 1,00,000.00 |
| 7 | ಅಂಚೆ ವೆಚ್ಚ | 2,00,000.00 | 1,00,000.00 |
| 8 | ಮುದ್ರಣ ಮತ್ತು ಲೇಖನ ಸಾಮಗ್ರಿ | 1,50,000.00 | 1,50,000.00 |
| 9 | ಸಿಬ್ಬಂದಿ ವೆಚ್ಚಗಳು | 55,00,000.00 | 55,00,000.00 |
| 10 | ವೃತ್ತಿ ನೈಪುಣ್ಯ ಶುಲ್ಕ | 2,00,000.00 | 1,00,000.00 |
| 11 | ಸಾರ್ವಜನಿಕ ಸಂಪರ್ಕ | 60,000.00 | 60,000.00 |
| 12 | ದೂರವಾಣಿ | 2,00,000.00 | 2,00,000.00 |
| 13 | ತರಬೇತಿ | 5,00,000.00 | 5,00,000.00 |
| 14 | ಪ್ರಯಾಣ ವೆಚ್ಚಗಳು | 80,000.00 | 80,000.00 |
| 15 | ಪೂಜಾ ವೆಚ್ಚಗಳು | 30,000.00 | 30,000.00 |
| 16 | ಇತರೆ | 60,000.00 | 1,00,000.00 |
| | **ಒಟ್ಟು** | **79,20,000.00** | **75,60,000.00** |

| ದಾವಾ ನ್ಯಾಯಾಲಯ ವಿಭಾಗ | | |
|---|---|---|
| ವೆಚ್ಚಗಳು 2025–26 | | |
| ವಿವರ | ಮೊತ್ತ | ಪರಿಷ್ಕೃತ ಬಜೆಟ್ |
| ಕಂಪ್ಯೂಟರ್ ನಿರ್ವಹಣೆ | 1,00,000.00 | 1,00,000.00 |
| ಜಲ ಮತ್ತು ವಿದ್ಯುತ್ | 1,20,000.00 | 1,20,000.00 |
| ಸಿಬ್ಬಂದಿ ಕಲ್ಯಾಣ | 1,00,000.00 | 1,00,000.00 |
| ಸ್ಥಳೀಯ ಓಡಾಟ | 1,00,000.00 | 1,00,000.00 |
| ಕಛೇರಿ ನಿರ್ವಹಣೆ | 2,50,000.00 | 2,00,000.00 |
| ಅಂಚೆ ವೆಚ್ಚ | 7,00,000.00 | 12,00,000.00 |
| ಮುದ್ರಣ ಮತ್ತು ಲೇಖನ ಸಾಮಗ್ರಿ | 3,50,000.00 | 3,50,000.00 |
| ಸಿಬ್ಬಂದಿ ವೆಚ್ಚಗಳು | 1,40,00,000.00 | 1,40,00,000.00 |
| ಸಾರ್ವಜನಿಕ ಸಂಪರ್ಕ | 1,00,000.00 | 1,00,000.00 |
| ದೂರವಾಣಿ | 80,000.00 | 80,000.00 |
| ಪ್ರಯಾಣ ವೆಚ್ಚಗಳು | 60,000.00 | 60,000.00 |
| ಕಟ್ಟಡ ನಿರ್ವಹಣೆ | 65,000.00 | 65,000.00 |
| ವಾಹನ/ ಪ್ರಯಾಣ ವೆಚ್ಚ | 5,00,000.00 | 5,00,000.00 |
| ವೃತ್ತಿ ನೈಪುಣ್ಯ ಶುಲ್ಕ | 2,50,000.00 | 2,50,000.00 |
| ಪೂಜಾ ವೆಚ್ಚಗಳು | 1,50,000.00 | 1,00,000.00 |
| ಇತರೆ | 1,00,000.00 | 1,00,000.00 |
| **ಒಟ್ಟು** | **1,70,25,000.00** | **1,74,25,000.00** |

**ವಿಷಯ 11 : 2026–27ನೇ ಸಾಲಿನ ಕರಡು ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ವಿಶೇಷವಾದ ವಿನೂತವಾದ ರಾಜ್ಯ ಮಟ್ಟದ, ರಾಷ್ಟ್ರ ಮಟ್ಟದ ಕಾರ್ಯಕ್ರಮಗಳನ್ನು ಆಯೋಜಿಸಲು ಸಂಯುಕ್ತ ಸಹಕಾರಿಯು ಯೋಜಿಸಿದೆ. ಸಂಯುಕ್ತ ಸಹಕಾರಿಯ 2026–27ನೇ ಸಾಲಿನ ಕರಡು ವಾರ್ಷಿಕ ಕ್ರಿಯಾ ಯೋಜನೆಯನ್ನು ಸಭೆಗೆ ನೀಡಿದ್ದು, ಪರಿಶೀಲಿಸಿ, ಮಾನ್ಯ ಸದಸ್ಯರು ನೀಡುವ ಸಲಹೆಗಳನ್ನು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯಲ್ಲಿ ಪುನಃ ಮಂಡನೆ ಮಾಡಿ, ಪರಿಷ್ಕರಿಸಿ, ಮುಂದಿನ ವಾರ್ಷಿಕ ಸಾಮಾನ್ಯ ಸಭೆಗೆ ಮಂಡಿಸಿ, ಅನುಮೋದನೆ ಪಡೆದುಕೊಂಡು, ಅದರಂತೆ ಕಾರ್ಯರೂಪಕ್ಕೆ ತರಲಾಗುತ್ತದೆ. ಈ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ 2026–27ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ, ಸಭೆಗೆ ಮಂಡಿಸಲಾಗಿದ್ದು, ಅನುಮೋದಿಸಲು ಸಭೆಗೆ ಕೋರಿದರು.

ನಂತರ ಸಭೆಯು, 2026–27ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಸರ್ವಾನುಮತದಿಂದ ಅನುಮೋದಿಸಿ, ಈ ಕ್ರಿಯಾ ಯೋಜನೆಗೆ ಸೌಹಾರ್ದ ಸಹಕಾರಿಗಳು ನೀಡುವ ಸಲಹೆಗಳನ್ನು ಪರಿಗಣಿಸಿ, ಪರಿಷ್ಕರಣೆ ಮಾಡಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಅಧಿಕಾರ ನೀಡಿತು.

**ನಿರ್ಣಯ** : 2026–27ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿ, ಈ ಕ್ರಿಯಾ ಯೋಜನೆಗೆ ಸೌಹಾರ್ದ ಸಹಕಾರಿಗಳು ನೀಡುವ ಸಲಹೆಗಳನ್ನು ಪರಿಗಣಿಸಿ, ಪರಿಷ್ಕರಣೆ ಮಾಡಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಸಭೆಯು ಅಧಿಕಾರ ನೀಡಿತು.

**ವಿಷಯ 12 : 2026–27ನೇ ಸಾಲಿನ ಕರಡು ಮುಂಗಡ ಪತ್ರವನ್ನು ಅನುಮೋದಿಸುವುದು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯ 2026–27ನೇ ಸಾಲಿನ ಕರಡು ಮುಂಗಡ ಪತ್ರವನ್ನು ಸಭೆಗೆ ನೀಡಿದ್ದು, ಪರಿಶೀಲಿಸಿ ಅನುಮೋದಿಸಲು ಸಭೆಗೆ ಕೋರಿದರು.

ನಂತರ ಸಭೆಯು, 2026–27ನೇ ಸಾಲಿನ ಮುಂಗಡ ಪತ್ರವನ್ನು ಸರ್ವಾನುಮತದಿಂದ ಅನುಮೋದಿಸಿ, ಈ ಮುಂಗಡ ಪತ್ರಕ್ಕೆ ಸೌಹಾರ್ದ ಸಹಕಾರಿಗಳು ನೀಡುವ ಸಲಹೆಗಳನ್ನು ಪರಿಗಣಿಸಿ, ಪರಿಷ್ಕರಣೆ ಮಾಡಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಅಧಿಕಾರ ನೀಡಿತು.

**ನಿರ್ಣಯ** : 2026–27ನೇ ಸಾಲಿನ ಮುಂಗಡ ಪತ್ರವನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿ, ಈ ಮುಂಗಡ ಪತ್ರಕ್ಕೆ ಸೌಹಾರ್ದ ಸಹಕಾರಿಗಳು ನೀಡುವ ಸಲಹೆಗಳನ್ನು ಪರಿಗಣಿಸಿ, ಪರಿಷ್ಕರಣೆ ಮಾಡಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಸಭೆಯು ಅಧಿಕಾರ ನೀಡಿತು.

**ವಿಷಯ 13 : ಮೈಸೂರಿನಲ್ಲಿರುವ ಸಂಯುಕ್ತ ಸಹಕಾರಿಯ ಸ್ವಂತ ಕೈಗಾರಿಕಾ ನಿವೇಶನದಲ್ಲಿ ಮೈಸೂರು ಪ್ರಾಂತದ ಕಛೇರಿ ಹಾಗೂ ಕೈಗಾರಿಕಾ ತರಬೇತಿ ಕೇಂದ್ರ ಕಟ್ಟಡ ನಿರ್ಮಿಸುವ ಕುರಿತು ಆಗಿರುವ ಬೆಳವಣಿಗೆಗಳ ಬಗ್ಗೆ.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯ ಕಳೆದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮತಿ ನೀಡಿರುವಂತೆ ಮೈಸೂರಿನಲ್ಲಿರುವ ಸಂಯುಕ್ತ ಸಹಕಾರಿಯ ಸ್ವಂತ ಕೈಗಾರಿಕಾ ನಿವೇಶನದಲ್ಲಿ ಮೈಸೂರು ಪ್ರಾಂತೀಯ ಕಛೇರಿ ಹಾಗೂ ತರಬೇತಿ ಕೇಂದ್ರ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪಾರದರ್ಶಕ ನಿಯಮಗಳನ್ನು ಪಾಲನೆ ಮಾಡುವುದರ ಮೂಲಕ ಟೆಂಡರ್ ಕರೆಯಲಾಗಿತ್ತು. ಪತ್ರಿಕಾ ಪ್ರಕಟಣೆಯನ್ನು ನೀಡುವುದರ ಮೂಲಕ ರಾಜ್ಯದ ಬೇರೆ ಬೇರೆ ಭಾಗಗಳಿಂದ ಈ ಟೆಂಡರ್ ಪ್ರಕ್ರಿಯೆಯಲ್ಲಿ ಒಟ್ಟು 07 ಸಂಸ್ಥೆಗಳು ಭಾಗವಹಿಸಿದ್ದು, ಈ ಟೆಂಡರ್ ಪ್ರಕ್ರಿಯೆಯಲ್ಲಿ 02 ಸಂಸ್ಥೆಗಳು ಅರ್ಹರಾಗಿದ್ದು, ರೂ.2,13,20,815/–ಗಳನ್ನು (ಜಿಎಸ್‌ಟಿ ಹೊರತುಪಡಿಸಿ) ನಮೂದಿಸಿ, ಎಲ್1 ಸ್ಥಾನದಲ್ಲಿ ಬಂದ ದೈವಿಕ್ ಕನ್ಸ್‌ಟ್ರಕ್ಷನ್ಸ್, ಬೆಂಗಳೂರು ಇವರಿಗೆ ಮೈಸೂರು ಕಟ್ಟಡ ನಿರ್ಮಾಣ ಕಾರ್ಯಗಳನ್ನು ನಿರ್ವಹಿಸಲು ಕಾರ್ಯಾದೇಶ ನೀಡಲಾಗಿದೆ. ಮೈಸೂರು ಕಟ್ಟಡ ನಿರ್ಮಾಣ ಕಾರ್ಯಕ್ಕೆ ಒಳಾಂಗಣ ವಿನ್ಯಾಸವನ್ನು ಹೊರತುಪಡಿಸಿ ರೂ.3 ಕೋಟಿಗಳು, ಒಳಾಂಗಣ ವಿನ್ಯಾಸಕ್ಕೆ ರೂ.2 ಕೋಟಿಗಳು ಸೇರಿದಂತೆ ಒಟ್ಟಾರೆಯಾಗಿ ಮೈಸೂರು ಕಟ್ಟಡ ನಿರ್ಮಾಣ ಕಾರ್ಯಕ್ಕೆ ರೂ.5 ಕೋಟಿಗಳ ಬಜೆಟ್‌ಗೆ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮತಿ ನೀಡಲಾಗಿರುತ್ತದೆ. ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯಲ್ಲಿ ರಚಿತವಾಗಿರುವ

ಮೈಸೂರು ಪ್ರಾಂತೀಯ ಕಛೇರಿಯ ಕಟ್ಟಡ ನಿರ್ಮಾಣದ ಉಪ ಸಮಿತಿಯ ಉಸ್ತುವಾರಿಯಲ್ಲಿ ನಿರ್ಮಾಣ ಕಾರ್ಯಗಳನ್ನು ಪ್ರಾರಂಭಿಸಲಾಗಿದೆ. ನಿರ್ಮಾಣ ಕಾರ್ಯ ಪ್ರಾರಂಭಕ್ಕೂ ಪೂರ್ವದಲ್ಲಿ ಭೂಮಿ ಪೂಜೆಯನ್ನು ದಿನಾಂಕ 18 ಆಗಸ್ಟ್ 2025ರಂದು ನೆರವೇರಿಸಲಾಗಿದೆ. ಈ ವಿವರಗಳನ್ನು ಪರಿಶೀಲಿಸಿ, ಅನುಮತಿಸಲು ಸಭೆಗೆ ಕೋರಿದರು.

ಸಭೆಯಲ್ಲಿ ಮುಂದುವರೆದು ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ರಾಜ್ಯದ ಎಲ್ಲಾ ಭಾಗಗಳಿಂದ ಬರುವ ಸೌಹಾರ್ದ ಸಹಕಾರಿಗಳಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲು ಉನ್ನತ ಮಟ್ಟದ ತರಬೇತಿ ಕೇಂದ್ರವನ್ನು ಹಾಗೂ ಪ್ರಾಂತೀಯ ಕಛೇರಿಯನ್ನು ಮೈಸೂರಿನಲ್ಲಿರುವ ಸಂಯುಕ್ತ ಸಹಕಾರಿಯ ಕೈಗಾರಿಕಾ ನಿವೇಶನದಲ್ಲಿ ನಿರ್ಮಾಣ ಮಾಡಲು ಆಡಳಿತ ಮಂಡಲಿಯು ಚರ್ಚಿಸಿ, ವಾರ್ಷಿಕ ಸಾಮಾನ್ಯ ಸಭೆಯ ಅನುಮತಿಯನ್ನು ತೆಗೆದುಕೊಂಡು ನಿಯಮಾನುಸಾರ ಮೈಸೂರು ಮಹಾನಗರ ಪಾಲಿಕೆ ಮತ್ತು ಸಂಬಂಧಿಸಿದ ಇತರ ಪ್ರಾಧಿಕಾರಗಳಿಂದ ಅನುಮತಿ ಪಡೆದುಕೊಂಡು ಕಟ್ಟಡ ನಿರ್ಮಾಣ ಮಾಡುವ ವಿಷಯವನ್ನು ಮಂಡಿಸಲಾಗಿದೆ. ಈ ಕುರಿತು ವಾರ್ಷಿಕ ಸಾಮಾನ್ಯ ಸಭೆಯು ಕೈಗಾರಿಕಾ ನಿವೇಶನದಲ್ಲಿ ಮೈಸೂರು ಪ್ರಾಂತೀಯ ಕಛೇರಿ ಹಾಗೂ ತರಬೇತಿ ಕೇಂದ್ರ ಮತ್ತು ಅತಿಥಿ ಗೃಹವನ್ನು ನಿರ್ಮಿಸಲು ಸೂಕ್ತವಾಗಿ ಚರ್ಚಿಸಿ, ನಿರ್ಣಯಿಸಲು ವಿಷಯವನ್ನು ವಾರ್ಷಿಕ ಸಾಮಾನ್ಯ ಸಭೆಗೆ ಮಂಡಿಸಲಾಗಿದೆ ಎಂದು ತಿಳಿಸಿದರು. ಮುಂದುವರೆದು, ಮೈಸೂರು ಮಹಾನಗರ ಪಾಲಿಕೆಯಿಂದ ಕೈಗಾರಿಕಾ ಉದ್ದೇಶಕ್ಕೆ ಕಟ್ಟಡ ನಿರ್ಮಾಣ ಮಾಡಲು ಪರವಾನಗಿ ಮಂಜೂರಾಗಿದ್ದು, ಪಾಲಿಕೆಯಿಂದ ಅನುಮೋದಿತವಾಗಿರುವ ಡ್ರಾಯಿಂಗ್ಸ್‌ಗಳನುಸಾರ ಕೈಗಾರಿಕಾ ತರಬೇತಿ ಕೇಂದ್ರ ಈ ಹೆಸರಿನಲ್ಲಿಯೇ ಕಟ್ಟಡವನ್ನು ನಿರ್ಮಾಣ ಮಾಡಲು ಆಡಳಿತ ಮಂಡಲಿಯು ಶಿಫಾರಸ್ಸು ಮಾಡಿದ್ದು, ಈ ಕುರಿತು ಅನುಮತಿಗಾಗಿ ವಿಷಯವನ್ನು ಸಭೆಗೆ ಮಂಡಿಸಿದೆ ಎಂದು ತಿಳಿಸಿದರು.

ಈ ವಿಷಯದ ಕುರಿತು ಮಾನ್ಯ ಸಹಕಾರಿಗಳು ಒಮ್ಮತದಿಂದ ಒಪ್ಪಿಗೆ ನೀಡಿ, ಮೈಸೂರು ಜಿಲ್ಲೆಯು ಸಾಂಸ್ಕೃತಿಕ/ ಪ್ರವಾಸಿ ಹಾಗೂ ಶೈಕ್ಷಣಿಕ ತಾಣವಾಗಿರುವುದರಿಂದ ಉತ್ತಮವಾಗಿರುವ ತರಬೇತಿ ಕೇಂದ್ರ ಹಾಗೂ ಅತಿಥಿ ಗೃಹ ಮತ್ತು ಮೈಸೂರು ಪ್ರಾಂತೀಯ ಕಛೇರಿಯನ್ನು ನಿರ್ಮಾಣ ಮಾಡುವುದು ಅವಶ್ಯಕವಾಗಿದ್ದು, ಸದರಿ ನಿವೇಶನವು ಕೈಗಾರಿಕಾ ನಿವೇಶನವಾದರೂ ಸಹ ನಿಯಮಾನುಸಾರ ಸಂಬಂಧಿಸಿದ ಪ್ರಾಧಿಕಾರದಿಂದ ಕಟ್ಟಡ ಪರವಾನಗಿ ಅನುಮತಿಯನ್ನು ಪಡೆದುಕೊಂಡು ಕಟ್ಟಡವನ್ನು ಕಟ್ಟಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು ಮತ್ತು ಪ್ರಸ್ತುತ ಸಂಯುಕ್ತ ಸಹಕಾರಿಯು ಮೈಸೂರು ಮಹಾನಗರ ಪಾಲಿಕೆಯಿಂದ ಮೌಖಿಕವಾಗಿ ಸೂಚಿಸಿರುವ ಇಂಜಿನಿಯರ್ ಕಡೆಯಿಂದ ಸಿದ್ಧಪಡಿಸಿರುವ ಡ್ರಾಯಿಂಗ್ಸ್‌ಗಳನ್ನು ಸಭೆಯು ಸರ್ವಾನುಮತದಿಂದ ಒಪ್ಪಿತು.

**ನಿರ್ಣಯ** : ಮೈಸೂರಿನಲ್ಲಿರುವ ಸಂಯುಕ್ತ ಸಹಕಾರಿಯ ಸ್ವಂತ ಕೈಗಾರಿಕಾ ನಿವೇಶನದಲ್ಲಿ ಮೈಸೂರು ಪ್ರಾಂತದ ಕಛೇರಿ ಹಾಗೂ ಕೈಗಾರಿಕಾ ತರಬೇತಿ ಕೇಂದ್ರ ಕಟ್ಟಡ ನಿರ್ಮಿಸುವ ಕುರಿತಂತೆ ಆಗಿರುವ ಬೆಳವಣಿಗೆಗಳನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಈ ಕೆಳಗಿನಂತೆ ಸರ್ವಾನುಮತದಿಂದ ಅನುಮೋದಿಸಿತು;

1. ಮೈಸೂರು ಪ್ರಾಂತದ ಕಛೇರಿ ಹಾಗೂ ತರಬೇತಿ ಕೇಂದ್ರ ಕಟ್ಟಡ ನಿರ್ಮಿಸುವ ಕುರಿತಂತೆ ಕರೆಯಲಾಗಿದ್ದ ಟೆಂಡರ್‌ನಲ್ಲಿ ರೂ.2,13,20,815/–ಗಳನ್ನು (ಜಿಎಸ್‌ಟಿ ಹೊರತುಪಡಿಸಿ) ನಮೂದಿಸಿ, ಎಲ್1 ಸ್ಥಾನದಲ್ಲಿ ಬಂದ ದೈವಿಕ್ ಕನ್ಸ್‌ಟ್ರಕ್ಷನ್ಸ್, ಬೆಂಗಳೂರು ಇವರಿಗೆ ಮೈಸೂರು ಕಟ್ಟಡ ನಿರ್ಮಾಣ ಕಾರ್ಯಗಳನ್ನು ನಿರ್ವಹಿಸಲು ಕಾರ್ಯಾದೇಶ ನೀಡಿರುವುದಕ್ಕೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು;
2. ಮೈಸೂರು ಜಿಲ್ಲೆಯು ಸಾಂಸ್ಕೃತಿಕ/ ಪ್ರವಾಸಿ ಹಾಗೂ ಶೈಕ್ಷಣಿಕ ತಾಣವಾಗಿರುವುದರಿಂದ ಉತ್ತಮವಾಗಿರುವ ತರಬೇತಿ ಕೇಂದ್ರ ಹಾಗೂ ಅತಿಥಿ ಗೃಹ ಮತ್ತು ಮೈಸೂರು ಪ್ರಾಂತೀಯ ಕಛೇರಿಯನ್ನು ನಿರ್ಮಾಣ ಮಾಡುವುದು ಅವಶ್ಯಕವಾಗಿದ್ದು, ಸದರಿ ನಿವೇಶನವು ಕೈಗಾರಿಕಾ ನಿವೇಶನವಾದರೂ ಸಹ ನಿಯಮಾನುಸಾರ ಸಂಬಂಧಿಸಿದ ಪ್ರಾಧಿಕಾರದಿಂದ ಕಟ್ಟಡ ಪರವಾನಗಿ ಅನುಮತಿಯನ್ನು ಪಡೆದುಕೊಂಡು ಕಟ್ಟಡವನ್ನು ಕಟ್ಟಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು ಮತ್ತು ಪ್ರಸ್ತುತ ಸಂಯುಕ್ತ ಸಹಕಾರಿಯು ಮೈಸೂರು ಮಹಾನಗರ ಪಾಲಿಕೆಯಿಂದ

ಮೌಖಿಕವಾಗಿ ಸೂಚಿಸಿರುವ ಇಂಜಿನಿಯರ್ ಕಡೆಯಿಂದ ಸಿದ್ಧಪಡಿಸಿರುವ ಡ್ರಾಯಿಂಗ್ಸ್‌ಗಳನ್ನು ಸಭೆಯು ಸರ್ವಾನುಮತದಿಂದ ಒಪ್ಪಿತು;

3. ಮೈಸೂರು ಕಟ್ಟಡ ನಿರ್ಮಾಣ ಕಾರ್ಯಕ್ಕೆ ಒಳಾಂಗಣ ವಿನ್ಯಾಸವನ್ನು ಹೊರತುಪಡಿಸಿ ರೂ.3 ಕೋಟಿಗಳು, ಒಳಾಂಗಣ ವಿನ್ಯಾಸಕ್ಕೆ ರೂ.2 ಕೋಟಿಗಳು ಸೇರಿದಂತೆ ಒಟ್ಟಾರೆಯಾಗಿ ಮೈಸೂರು ಕಟ್ಟಡ ನಿರ್ಮಾಣ ಕಾರ್ಯಕ್ಕೆ ರೂ.5 ಕೋಟಿಗಳ ಬಜೆಟ್‌ಗೆ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಈಗಾಗಲೇ ಅನುಮತಿ ನೀಡಿರುವಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

**ವಿಷಯ 14 : ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ (ಡಿಸಿಬಿಎಂ) ಕೋರ್ಸಿನ ಕುರಿತು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ವಿಶಿಷ್ಠವಾಗಿ ವಿನೂತನವಾಗಿ ಸರ್ಕಾರದ ಜೊತೆಗೂಡಿ ಅನೇಕ ಕಾರ್ಯಕ್ರಮಗಳನ್ನು ಸಂಯುಕ್ತ ಸಹಕಾರಿಯು ನಿರ್ವಹಿಸಿದ್ದು, ಅದರಂತೆ, ವಿನೂತ ಪ್ರಯತ್ನವಾಗಿ ಸರ್ಕಾರದ ಜೊತೆಗೂಡಿ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸನ್ನು ಮಹಾತ್ಮಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ), ಗದಗ ಈ ವಿಶ್ವವಿದ್ಯಾಲಯದೊಂದಿಗೆ ಸಂಯುಕ್ತ ಸಹಕಾರಿಯು ಒಡಂಬಡಿಕೆ ಮಾಡಿಕೊಂಡು ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸನ್ನು ನಡೆಸಲಾಗುತ್ತಿದೆ. ಸಂಯುಕ್ತ ಸಹಕಾರಿಯ ವತಿಯಿಂದಲೂ ಸಹ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸನ್ನು ಈ ಹಿಂದೆ ನಡೆಸಲಾಗುತ್ತಿತ್ತು. ಸದರಿ ಕೋರ್ಸು 6 ತಿಂಗಳ ಅವಧಿಯ ಕೋರ್ಸಾಗಿತ್ತು. ವಿಶ್ವವಿದ್ಯಾಲಯದ ಮಟ್ಟದಲ್ಲಿ ಈ ಕೋರ್ಸಿಗೆ ಯುಜಿಸಿ ಮಾನ್ಯತೆಯ ಪ್ರಮಾಣ ಪತ್ರವು ಕೋರ್ಸನ್ನು ಅಧ್ಯಯನ ನಡೆಸುವ ಅಭ್ಯರ್ಥಿಗಳಿಗೆ ದೊರಕಬೇಕಾದಲ್ಲಿ ಸದರಿ ಕೋರ್ಸಿನ ಅವಧಿಯು ಕನಿಷ್ಠ 9 ತಿಂಗಳಿನಿಂದ 1 ವರ್ಷದ್ದಾಗಿರಬೇಕು ಎಂದು ತಿಳಿಸಿದ ಹಿನ್ನೆಲೆಯಲ್ಲಿ ಅದರಂತೆ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಒಂದು ವರ್ಷದ ಅವಧಿಯ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸನ್ನು ನಡೆಸಲಾಗುತ್ತಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ನಡೆಸಲಾಗುತ್ತಿರುವ ಈ ಕೋರ್ಸಿನ ಪ್ರವೇಶಾತಿಯ ಸಂಖ್ಯೆಯಲ್ಲಿ ಗಣನೀಯವಾಗಿ ಇಳಿಕೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಈ ವಿಷಯದ ಕುರಿತು ಚರ್ಚಿಸಿರುವಂತೆ, ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸನ್ನು ಸಂಯುಕ್ತ ಸಹಕಾರಿಯ ಮೂಲಕ ನಡೆಸಬೇಕೇ ಅಥವಾ ಉತ್ತಮ ಪ್ರವೇಶಾತಿಯೊಂದಿಗೆ ಹೆಚ್ಚಿನ ಗುಣಮಟ್ಟದೊಂದಿಗೆ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ನಡೆಸಬೇಕೇ ಎಂಬುದರ ಕುರಿತಂತೆ ಸೌಹಾರ್ದ ಸಹಕಾರಿಗಳಿಂದ ಸಲಹೆ ಪಡೆದುಕೊಳ್ಳಲು ವಾರ್ಷಿಕ ಸಾಮಾನ್ಯ ಸಭೆಗೆ ವಿಷಯ ಮಂಡಿಸಲಾಗಿದೆ. 6500 ಸೌಹಾರ್ದ ಸಹಕಾರಿಗಳಿಂದ 75,000 ದಿಂದ 1,00,000 ಸಂಖ್ಯೆಯ ಸಿಬ್ಬಂದಿಗಳಾಗಲಿದ್ದು, ಸೌಹಾರ್ದ ಸಹಕಾರಿ ಕಾಯ್ದೆ ಪ್ರಕಾರ ಸೌಹಾರ್ದ ಸಹಕಾರಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಯಶಸ್ವಿಯಾಗಿ ಈ ಕೋರ್ಸನ್ನು ಮುಕ್ತಾಯಗೊಳಿಸಿದಲ್ಲಿ ಪದೋನ್ನತಿಗೆ ಅರ್ಹತೆಯನ್ನು ಹೊಂದಿರುತ್ತಾರೆ ಎಂದು ಸೌಹಾರ್ದ ಸಹಕಾರಿಗಳ ನಿಯಮಗಳಲ್ಲಿ ತಿಳಿಸಿದೆ. ಕಾಯ್ದೆ ಪ್ರಕಾರ ಸಂಯುಕ್ತ ಸಹಕಾರಿಗೂ ಸಹ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸನ್ನು ನಡೆಸಲು ಅವಕಾಶವಿರುತ್ತದೆ. ಸಂಯುಕ್ತ ಸಹಕಾರಿಯಿಂದ ಸದರಿ ಕೋರ್ಸನ್ನು ಮಾಡಬಹುದಾಗಿರುತ್ತದೆ. ಆದರೆ, ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಮಾಡಲು ಪ್ರಸ್ತುತ ಅವಕಾಶ ನೀಡಲಾಗಿದ್ದು, ಒಂದು ವೇಳೆ ವಿಶ್ವವಿದ್ಯಾಲಯದಿಂದ ಸೂಕ್ತವಾದ ಸಹಕಾರ, ಸಹಯೋಗ ದೊರೆಯದೇ ಇದ್ದಲ್ಲಿ ಸಂಯುಕ್ತ ಸಹಕಾರಿಯ ಮೂಲಕ ಸ್ವಂತವಾಗಿ ನಡೆಸಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಯೋಚನೆ ಬಂದಿರುತ್ತದೆ. ವಿಶ್ವವಿದ್ಯಾಲಯದ ಮಾನ್ಯ ಉಪಕುಲಪತಿಗಳೊಂದಿಗೆ ಚರ್ಚಿಸಿ, ವಿಶ್ವವಿದ್ಯಾಲಯದಿಂದ ಕೋರ್ಸನ್ನು ನಿಗದಿತ ಸಮಯದೊಳಗೆ ನಡೆಸುವುದಾದಲ್ಲಿ ಮಾತ್ರ ಸದರಿ ಕೋರ್ಸನ್ನು ಮುಂದುವರೆಸಲಾಗುವುದು. ವಿಶ್ವವಿದ್ಯಾಲಯದಿಂದ ಸದರಿ ಕೋರ್ಸಿನ ಮೂರನೇಯ ತಂಡವು

ಪ್ರಾರಂಭವಾಗಿ 6 ತಿಂಗಳುಗಳಾಗಿದ್ದು, ಇನ್ನೂ ಸಹ ಪಠ್ಯಪುಸ್ತಕಗಳ ಮುದ್ರಿತ ಪ್ರತಿಯನ್ನು ನೀಡಿರುವುದಿಲ್ಲ. ಸಾಫ್ಟ್ ಪ್ರತಿಯನ್ನು ಮಾತ್ರ ನೀಡಿರುತ್ತಾರೆ. ಪ್ರಸ್ತುತ ಸೆಪ್ಟೆಂಬರ್ 2025ರಲ್ಲಿ ಕೋರ್ಸಿನ ಮೊದಲನೆಯ ಸೆಮಿಸ್ಟರ್‌ನ ಪರೀಕ್ಷೆಗಳನ್ನು ನಡೆಸಲಾಗುವುದು ಎಂದು ವಿಶ್ವವಿದ್ಯಾಲಯದಿಂದ ತಿಳಿಸಿರುವ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿಗಳ ನಿರ್ದೇಶಕರು ಈ ಕುರಿತು ಕರೆ ಮಾಡಿ ವಿಶ್ವವಿದ್ಯಾಲಯದಿಂದ ಮುದ್ರಿತ ಪಠ್ಯ ಪುಸ್ತಕಗಳನ್ನು ನೀಡದೇ ಪರೀಕ್ಷೆಯನ್ನು ನಡೆಸಿದರೆ ಹೇಗೆ ಎಂದು ಕೇಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯ ಹಾಗೂ ಸರ್ಕಾರದ ವ್ಯವಸ್ಥೆಯಲ್ಲಿ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ್ನು ಯಶಸ್ವಿಯಾಗಿ ನಡೆಸಲು ಸಾಧ್ಯವಾಗದೇ ಇದ್ದಲ್ಲಿ ಸಂಯುಕ್ತ ಸಹಕಾರಿಯ ಮೂಲಕವೇ ಸದರಿ ಕೋರ್ಸ್‌ನ್ನು ನಡೆಸಲು ವಾರ್ಷಿಕ ಸಾಮಾನ್ಯ ಸಭೆಯು ಅವಕಾಶ ನೀಡಿದಲ್ಲಿ ಅದರಂತೆ ಕ್ರಮವಹಿಸಲಾಗುವುದು ಎಂದು ತಿಳಿಸಿದರು. ಇದಕ್ಕೆ ಸಭೆಯು ಸಹಮತ ವ್ಯಕ್ತಪಡಿಸಿತು.

**ನಿರ್ಣಯ** : ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ್ನು ಮಹಾತ್ಮಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಸಹಯೋಗದೊಂದಿಗೆ ನಡೆಸುವುದಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದ ಮಾನ್ಯ ಉಪಕುಲಪತಿಗಳೊಂದಿಗೆ ಚರ್ಚಿಸಿ, ಸದರಿ ಕೋರ್ಸ್‌ನ್ನು ನಿಗದಿತ ಸಮಯದೊಳಗೆ ನಡೆಸಲು ವಿಶ್ವವಿದ್ಯಾಲಯದಿಂದ ಸೂಕ್ತವಾದ ಸಹಕಾರ, ಸಹಯೋಗ ದೊರೆಯದೇ ಇದ್ದಲ್ಲಿ ಮತ್ತು ವಿಶ್ವವಿದ್ಯಾಲಯ ಹಾಗೂ ಸರ್ಕಾರದ ವ್ಯವಸ್ಥೆಯಲ್ಲಿ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ್ನು ಯಶಸ್ವಿಯಾಗಿ ನಡೆಸಲು ಸಾಧ್ಯವಾಗದೇ ಇದ್ದಲ್ಲಿ ಮುಂದಿನ ವರ್ಷದಿಂದ ಸಂಯುಕ್ತ ಸಹಕಾರಿಯ ಮೂಲಕವೇ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ್ನು ನಡೆಸುವ ಕುರಿತು ಸೂಕ್ತವಾಗಿ ನಿರ್ಣಯಿಸಲು ಅಧಿಕಾರವನ್ನು ಆಡಳಿತ ಮಂಡಲಿಗೆ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ 15 : ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರ ಹಾಗೂ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರ ವಿದೇಶ ಅಧ್ಯಯನ ಪ್ರವಾಸದ ವರದಿಯ ಕುರಿತು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯ ಹಿಂದಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮತಿ ನೀಡಿದಂತೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರ ಹಾಗೂ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರ ವಿದೇಶ ಅಧ್ಯಯನ ಪ್ರವಾಸವನ್ನು ಅತ್ಯಂತ ಪಾರದರ್ಶಕವಾಗಿ ಯಾವ ದೇಶಗಳಿಗೆ, ಯಾವ ಸಂಸ್ಥೆಗಳಿಗೆ, ಯಾವ ಸಹಕಾರ ಸಂಸ್ಥೆಗಳಿಗೆ ಭೇಟಿ ನೀಡಿ ಅಧ್ಯಯನ ನಡೆಸಲಾಗುತ್ತದೆ ಎಂಬುದರ ಕುರಿತಂತೆ ಮುಂಚಿತವಾಗಿಯೇ ಉಲ್ಲೇಖಿಸಿ, ಪತ್ರಿಕಾ ಪ್ರಕಟಣೆಯನ್ನು ನೀಡುವುದರ ಮೂಲಕ ಟೆಂಡರ್ ಕರೆಯಲಾಗಿತ್ತು. ಈ ಟೆಂಡರ್‌ನಲ್ಲಿ 05 ಸಂಸ್ಥೆಗಳು ಭಾಗವಹಿಸಿದ್ದು, ಉತ್ತಮ ಸೇವೆ ಒದಗಿಸುವ ಹಾಗೂ ಕಡಿಮೆ ಮೊತ್ತವನ್ನು ನಮೂದಿಸಿದ್ದ ವೇ ಟು ವರ್ಲ್ಡ್ ಸಂಸ್ಥೆಯ ಮೂಲಕ ವಿದೇಶ ಅಧ್ಯಯನ ಪ್ರವಾಸವನ್ನು ಕೈಗೊಳ್ಳಲಾಗಿತ್ತು. ವಿದೇಶ ಅಧ್ಯಯನ ಪ್ರವಾಸದ ಸಂದರ್ಭದಲ್ಲಿ ರಾಜ್ಯ ಮಟ್ಟದ, ಪ್ರಾಥಮಿಕ ಹಾಗೂ ಅಪೆಕ್ಸ್ ಸಂಸ್ಥೆಗಳಾದ ಒಂದು ಅರ್ಬನ್ ಕೋಆಪರೇಟಿವ್ ಬ್ಯಾಂಕು, ಕ್ರೆಡಿಟ್ ಸೊಸೈಟಿ, ನ್ಯಾಷನಲ್ ಕನ್ಸೂಮರ್ ಫೆಡರೇಷನ್ ಸಂಸ್ಥೆಗಳನ್ನು ಮತ್ತು ಅದರ ವ್ಯವಸ್ಥೆಗಳನ್ನು ವಿದೇಶ ಅಧ್ಯಯನ ಪ್ರವಾಸದ ಸಂದರ್ಭದಲ್ಲಿ ಅಧ್ಯಯನ ಮಾಡಲಾಗಿದೆ. ವಾರ್ಷಿಕ ಸಾಮಾನ್ಯ ಸಭೆಯ ಅನುಮತಿಯೊಂದಿಗೆ ಕೈಗೊಳ್ಳಲಾಗಿದ್ದ ಈ ವಿದೇಶ ಅಧ್ಯಯನ ಪ್ರವಾಸವನ್ನು ಅತ್ಯಂತ ಯಶಸ್ವಿಯಾಗಿ ಹಾಗೂ ಸುರಕ್ಷಿತವಾಗಿ ಮುಕ್ತಾಯಗೊಳಿಸಲಾಗಿದೆ. ಹಾಗೆಯೇ, ವಾರ್ಷಿಕ ಸಾಮಾನ್ಯ ಸಭೆಯು ಒಪ್ಪಿಗೆ ನೀಡಿದ್ದ ಬಜೆಟ್ ಮೊತ್ತಕ್ಕಿಂತ ಇನ್ನೂ ಕಡಿಮೆ ಮೊತ್ತದಲ್ಲಿಯೇ ವಿದೇಶ ಅಧ್ಯಯನ ಪ್ರವಾಸವು ಮುಕ್ತಾಯಗೊಂಡಿದೆ. ಈ ವಿದೇಶ ಅಧ್ಯಯನ ಪ್ರವಾಸದ ವರದಿಯನ್ನು ಛಾಯಾ ಚಿತ್ರಗಳೊಂದಿಗೆ ಸಭೆಗೆ ನೀಡಲಾಗಿದ್ದು, ಈ ವರದಿಯನ್ನು ಪರಿಶೀಲಿಸಿ ಅನುಮತಿಸಲು ಸಭೆಗೆ ಕೋರಿದರು.

ನಂತರ ಸಭೆಯು, ದಿನಾಂಕ 14 ರಿಂದ 29 ಏಪ್ರಿಲ್ 2025ರವರೆಗೆ ಯು.ಕೆ. ಮತ್ತು ಯುರೋಪ್ ರಾಷ್ಟ್ರಗಳಿಗೆ ಕೈಗೊಳ್ಳಲಾಗಿದ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರ ಹಾಗೂ ಶಿಕ್ಷಣ ನಿಧಿ

ಸಲಹಾ ಸಮಿತಿ ಸದಸ್ಯರ ವಿದೇಶ ಅಧ್ಯಯನ ಪ್ರವಾಸದ ವರದಿಯನ್ನು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು ಮತ್ತು ಈ ವಿದೇಶ ಅಧ್ಯಯನ ಪ್ರವಾಸ ಕೈಗೊಳ್ಳಲು ಸಂಯುಕ್ತ ಸಹಕಾರಿಯ 23ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಗರಿಷ್ಠ ರೂ.1.25 ಕೋಟಿಗಳ ಮೊತ್ತಕ್ಕೆ ಅನುಮತಿ ನೀಡಿದ್ದು, ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರನ್ನೊಳಗೊಂಡಂತೆ 22 ಸದಸ್ಯರಿಗೆ ಒಟ್ಟು ರೂ.91,81,439/–ಗಳು ವೆಚ್ಚವಾಗಿದ್ದು, ಈ ವಿದೇಶ ಅಧ್ಯಯನ ಪ್ರವಾಸಕ್ಕೆ ಸಂಯುಕ್ತ ಸಹಕಾರಿಯ 23ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮೋದನೆಯಾಗಿದ್ದ ಬಜೆಟ್ ಮಿತಿಯೊಳಗೆ ಪ್ರವಾಸವನ್ನು ಮುಗಿಸಿರುವ ಮಾಹಿತಿಯನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ** : ದಿನಾಂಕ 14 ರಿಂದ 29 ಏಪ್ರಿಲ್ 2025ರವರೆಗೆ ಯು.ಕೆ. ಮತ್ತು ಯುರೋಪ್ ರಾಷ್ಟ್ರಗಳಿಗೆ ಕೈಗೊಳ್ಳಲಾಗಿದ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರ ಹಾಗೂ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರ ವಿದೇಶ ಅಧ್ಯಯನ ಪ್ರವಾಸದ ವರದಿಯನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು ಮತ್ತು ಈ ವಿದೇಶ ಅಧ್ಯಯನ ಪ್ರವಾಸ ಕೈಗೊಳ್ಳಲು ಸಂಯುಕ್ತ ಸಹಕಾರಿಯ 23ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಗರಿಷ್ಠ ರೂ.1.25 ಕೋಟಿಗಳ ಮೊತ್ತಕ್ಕೆ ಅನುಮತಿ ನೀಡಿದ್ದು, ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರನ್ನೊಳಗೊಂಡಂತೆ 22 ಸದಸ್ಯರಿಗೆ ಒಟ್ಟು ರೂ. 91,81,439/–ಗಳು ವೆಚ್ಚವಾಗಿದ್ದು, ಈ ವಿದೇಶ ಅಧ್ಯಯನ ಪ್ರವಾಸಕ್ಕೆ ಸಂಯುಕ್ತ ಸಹಕಾರಿಯ 23ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮೋದನೆಯಾಗಿದ್ದ ಬಜೆಟ್ ಮಿತಿಯೊಳಗೆ ಪ್ರವಾಸವನ್ನು ಮುಗಿಸಿರುವ ಮಾಹಿತಿಯನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 16** : **ಸಂಯುಕ್ತ ಸಹಕಾರಿಯಿಂದ ಈಗಾಗಲೇ ಹೊರಡಿಸಿರುವ ಹಾಗೂ ಹೊರಡಿಸಬೇಕಾಗಿರುವ ಸುತ್ತೋಲೆಗಳನ್ನು ಪರಿಷ್ಕರಿಸಿ, ಹೊರಡಿಸಲು ಅನುಮತಿಸುವ ಕುರಿತು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯಿಂದ ಈಗಾಗಲೇ ಹೊರಡಿಸಿರುವ ಹಾಗೂ ಹೊರಡಿಸಬೇಕಾಗಿರುವ ಸುತ್ತೋಲೆಗಳನ್ನು ಪರಿಶೀಲಿಸಿ, ಪರಿಷ್ಕರಿಸಿ, ಹೊರಡಿಸಲು ಅನುಮತಿ ನೀಡಲು ಸಭೆಗೆ ಕೋರಿದರು. ಮುಂದುವರೆದು, ಈ ಪ್ರತಿಯೊಂದು ಸುತ್ತೋಲೆಯು ಸಹ ಸೌಹಾರ್ದ ಸಹಕಾರಿಗಳ ವ್ಯವಹಾರದ ದೃಷ್ಟಿಯಿಂದ, ಆರ್ಥಿಕ ಶಿಸ್ತು ಪಾಲನೆ ಮಾಡುವ ಉದ್ದೇಶದಿಂದ ಈ ಸುತ್ತೋಲೆಗಳನ್ನು ಹೊರಡಿಸಲಾಗುತ್ತಿದೆ. ಇದರಲ್ಲಿ ಎರಡು ಸುತ್ತೋಲೆಗಳಾದ ಸೌಹಾರ್ದ ಸಹಕಾರಿಗಳಲ್ಲಿ ಜರುಗುವ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆ ಕುರಿತು ಸಿದ್ಧಪಡಿಸಿರುವ ನೂತನ ಮಾರ್ಗದರ್ಶಿಗಳು, ಸೌಹಾರ್ದ ಸಹಕಾರಿಗಳ ನಿರ್ದೇಶಕರ ಅನರ್ಹತೆ ಮತ್ತು /ಅಥವಾ ಸಹ ಆಯ್ಕೆಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಪ್ರಕ್ರಿಯೆ ಮತ್ತು ಮಾರ್ಗದರ್ಶಿಗಳನ್ನು ಸಂಯುಕ್ತ ಸಹಕಾರಿಯ 23ನೇ ವಾರ್ಷಿಕ ಸಾಮಾನ್ಯ ಸಭೆಗೆ ಮಂಡಿಸಲಾಗಿದ್ದು, ಈ ಸುತ್ತೋಲೆಗಳಿಗೆ ಸೌಹಾರ್ದ ಸಹಕಾರಿಗಳಿಂದ ಸ್ವೀಕೃತವಾದ ಸಲಹೆಗಳ ಆಧಾರ ಮೇಲೆ ಪರಿಷ್ಕರಿಸಲಾಗಿದ್ದು, ಇದನ್ನು ಸಭೆಗೆ ಮಂಡಿಸಲಾಗಿದ್ದು, ಪರಿಶೀಲಿಸಿ, ಅಗತ್ಯ ಸಲಹೆಗಳನ್ನು ನೀಡುವುದರೊಂದಿಗೆ ಸದರಿ ಸುತ್ತೋಲೆಗಳನ್ನು ಹೊರಡಿಸಲು ಸಭೆಯ ಅನುಮತಿ ಕೋರಿದರು.

ಹಾಗೆಯೇ, ಸಂಯುಕ್ತ ಸಹಕಾರಿಯಿಂದ ಈಗಾಗಲೇ ಹೊರಡಿಸಲಾಗಿದ್ದ ಶಾಖಾ ಅನುಮತಿ ನೀಡುವಾಗ ಪರಿಗಣಿಸಬೇಕಾದ ಮಾನದಂಡಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳ ಕುರಿತಾದ ಸುತ್ತೋಲೆಯನ್ನು, ಆರ್ಥಿಕ ಸಬಲತೆಯ ಮಾನದಂಡಗಳ ಸುತ್ತೋಲೆಯನ್ನು, ಸೌಹಾರ್ದ ಸಹಕಾರಿಗಳು ಪಡೆಯುವ ಠೇವಣಿಗಳಿಗೆ ಮತ್ತು ವಿತರಿಸುವ ಸಾಲಗಳಿಗೆ ಬಡ್ಡಿದರ ನಿಗದಿಪಡಿಸುವ ಸುತ್ತೋಲೆಯನ್ನು ಪರಿಷ್ಕರಿಸಿ, ಸಭೆಗೆ ಮಂಡಿಸಲಾಗಿದ್ದು, ಅಗತ್ಯ ಸಲಹೆಗಳನ್ನು ನೀಡುವುದರೊಂದಿಗೆ ಹೊರಡಿಸಲು ಅನುಮತಿಗಾಗಿ ಸಭೆಗೆ ಮಂಡಿಸಿದ್ದು, ಅನುಮತಿಸಲು ಸಭೆಯ ಕೋರಿದರು.

ಸಭೆಯಲ್ಲಿ ಮುಂದುವರೆದು ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಈ ಸುತ್ತೋಲೆಗಳನ್ನು ಇಡೀ ರಾಜ್ಯಕ್ಕೆ ಸೌಹಾರ್ದ ಸಹಕಾರಿಗಳಿಗೆ ಅನ್ವಯವಾಗುವಂತೆ ಹೊರಡಿಸಬೇಕಿರುವುದರಿಂದ ತಾವುಗಳು ಪರಿಶೀಲಿಸಿ, ಅನುಮತಿಸಿದಲ್ಲಿ ಅದರಂತೆ ಹೊರಡಿಸಲಾಗುವುದು. ಈ ವಿಷಯದ ಕುರಿತಂತೆ ಸಂಪರ್ಕ ಸಭೆಯ ಸಂದರ್ಭದಲ್ಲಿ ಅನೇಕ ಪ್ರಶ್ನೆಗಳನ್ನು ಈಗಾಗಲೇ ಕೇಳಲಾಗಿರುತ್ತದೆ. ಹಾಗೆಯೇ, ಪ್ರಸ್ತುತವೂ ಸಹ ಸದರಿ ವಿಷಯದ ಕುರಿತಂತೆ ಮಾನ್ಯ ಅಧ್ಯಕ್ಷರೊಂದಿಗೆ ಚರ್ಚಿಸಬಹುದಾಗಿರುತ್ತದೆ ಎಂದು ತಿಳಿಸಿದರು.

**ನಿರ್ಣಯ** : ಈ ಕೆಳಗಿನಂತಿರುವ 1) ಸೌಹಾರ್ದ ಸಹಕಾರಿಗಳ ಸಿಬ್ಬಂದಿ ನೇಮಕಾತಿಗೆ ಸಂಬಂಧಿಸಿದಂತೆ ಮಾರ್ಗದರ್ಶಿಗಳು, 2) ಸೌಹಾರ್ದ ಸಹಕಾರಿಗಳ ನಿರ್ದೇಶಕರ ಅನರ್ಹತೆ ಮತ್ತು /ಅಥವಾ ಸಹ ಆಯ್ಕೆಗೆ ಸಂಬಂಧಿಸಿದಂತೆ ಮಾರ್ಗದರ್ಶಿಗಳು, 3) ಶಾಖಾ ಅನುಮತಿ ನೀಡುವಾಗ ಪರಿಗಣಿಸಬೇಕಾದ ಮಾನದಂಡಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳ ಕುರಿತ ಸುತ್ತೋಲೆ, 4) ಆರ್ಥಿಕ ಸಬಲತೆಯ ಮಾನದಂಡಗಳ ಸುತ್ತೋಲೆ, 5) ಸೌಹಾರ್ದ ಸಹಕಾರಿಗಳು ಪಡೆಯುವ ಠೇವಣಿಗಳಿಗೆ ಮತ್ತು ವಿತರಿಸುವ ಸಾಲಗಳಿಗೆ ಬಡ್ಡಿದರ ನಿಗದಿಪಡಿಸುವ ಸುತ್ತೋಲೆ ಈ 5 ಸುತ್ತೋಲೆಗಳಿಗೆ ಸೌಹಾರ್ದ ಸಹಕಾರಿಗಳು ನೀಡಿರುವ ಸಲಹೆಗಳನ್ನೊಂಡಂತೆ ಸೂಕ್ತವಾಗಿ ಪರಿಷ್ಕರಿಸಿ, ಹೊರಡಿಸಲು ಸಭೆಯು ಸರ್ವಾನುಮತದಿಂದ ಅನುಮತಿ ನೀಡಿತು ಮತ್ತು ಕಾಲ ಕಾಲಕ್ಕೆ ಈ ಸುತ್ತೋಲೆಗಳನ್ನು ಪರಿಷ್ಕರಿಸುವ ಅಧಿಕಾರವನ್ನು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಸಭೆಯು ನೀಡಿತು.


**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**

ಶಾಸನಬದ್ಧ ಸಹಕಾರಿ ಸಂಸ್ಥೆ

ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ,

ಬೆಂಗಳೂರು–560055, Ph : 080-23378375-80, website : www.souharda.coop

Email : souharda@souharda.coop


## ಸೌಹಾರ್ದ ಸಹಕಾರಿಗಳ ನೇಮಕಾತಿಗೆ ಸಂಬಂಧಿಸಿದಂತೆ ಮಾರ್ಗದರ್ಶಿಗಳು

### ಪ್ರಸ್ತಾವನೆ

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ರಡಿ ನೋಂದಣಿಯಾದ ಸೌಹಾರ್ದ ಸಹಕಾರಿಗಳಿಗೆ ಸಿಬ್ಬಂದಿಗಳ ನೇಮಕಾತಿಗೆ ಸಂಬಂಧಿಸಿದಂತೆ ಆಡಳಿತ ಮಂಡಲಿ ಮತ್ತು ಸಾಮಾನ್ಯ ಸಭೆಗಳಿಗೆ ಕಲಂ 31 ರಲ್ಲಿ ಅಧಿಕಾರ ನೀಡಿದೆ. ರಾಜ್ಯದಲ್ಲಿ 6500 ಕ್ಕೂ ಹೆಚ್ಚು ಸಹಕಾರಿಗಳು ನೋಂದಣಿಯಾಗಿದ್ದು, 50,000 ಕ್ಕೂ ಹೆಚ್ಚು ಸಿಬ್ಬಂದಿಗಳು ನೇಮಕಾತಿ ಹೊಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕರ್ನಾಟಕ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004 ಇದರಲ್ಲಿ ನಿಯಮ 6ಎಲ್ 2015 ರಲ್ಲಿ ಸೇರ್ಪಡೆಯಾಗಿದ್ದು, ದಿನಾಂಕ 20.06.2015 ರಿಂದ ಜಾರಿಗೆ ಬಂದಿರುತ್ತದೆ. ಆದರೆ ಅನೇಕ ಸಹಕಾರಿಗಳು ಇದನ್ನು ಸರಿಯಾಗಿ ಪಾಲನೆ ಮಾಡುತ್ತಿಲ್ಲದಿರುವುದು ಕಂಡುಬಂದಿದೆ. ಆಯಾ ಸಹಕಾರಿಯ ಮಂಡಲಿ ಸಭೆಯಲ್ಲೇ ನಿರ್ಣಯ ಮಾಡಿ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದಾರೆ. ನಿಯಮ ಪಾಲನೆ ಮಾಡುತ್ತಿರುವ ಸಹಕಾರಿಗಳೂ ಸಹ, ಸಂಯುಕ್ತ ಸಹಕಾರಿಯ ಪ್ರತಿನಿಧಿಯನ್ನು ಸಮಿತಿಗೆ ಆಹ್ವಾನಿಸದೇ, ಸಂದರ್ಶನದ ದಿನ ಕಳುಹಿಸುವಂತೆ ಕೋರಿಕೆ ಕಳುಹಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ, ಸದಸ್ಯ ಸಹಕಾರಿಗಳ ನೇಮಕಾತಿ ಕುರಿತು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಚರ್ಚಿಸಿ, ಮಾರ್ಗದರ್ಶಿಗಳನ್ನು ರಚಿಸಿರುತ್ತದೆ. ಅದು ಈ ಕೆಳಗಿನಂತಿದೆ.

### ಸೌಹಾರ್ದ ಸಹಕಾರಿಗಳ ನೇಮಕಾತಿಗೆ ಸಂಬಂಧಿಸಿದಂತೆ ಮಾರ್ಗದರ್ಶಿಗಳು

ಕ.ಸೌ.ಸ. ಅಧಿನಿಯಮ, 1997ರ ಕಲಂ 53 (7) (ಎ) ಕ.ಸೌ.ಸ. ನಿಯಮಗಳು, 2004ರ ನಿಯಮ 6ಎಲ್ ಅಡಿ

ಸಂಖ್ಯೆ : ಸಂಸ/ಆಸು-**/2025-26 ದಿನಾಂಕ: **.**.*****

1. ಸಾಮಾನ್ಯ ನಿಕಾಯದ ಅನುಮೋದನೆಗೆ ಒಳಪಟ್ಟು ಸಹಕಾರಿಯ ಆಡಳಿತ ಮಂಡಲಿಯು ಕಾಲಕಾಲಕ್ಕೆ ಸಹಕಾರಿಯ ಕಾರ್ಯಭಾರ ಮತ್ತು ವ್ಯವಹಾರದ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು, ಸಹಕಾರಿಯ ಸಿಬ್ಬಂದಿಯ ವೃಂದ ಬಲವನ್ನು ಮತ್ತು ಸೌಹಾರ್ದ ಸಹಕಾರಿಯ ಆರ್ಥಿಕ ಸ್ಥಿತಿಯನ್ನು ಆಧರಿಸಿ ಅದರ ಪ್ರತಿಯೊಬ್ಬ ಸಿಬ್ಬಂದಿಗೆ ಲಭ್ಯವಾಗತಕ್ಕ ವೇತನ ಶ್ರೇಣಿ ಮತ್ತು ಇನ್ನಿತರ ಭತ್ಯೆಗಳನ್ನು ನಿರ್ಧರಿಸತಕ್ಕದ್ದು.

2. ನೇರ ನೇಮಕಾತಿ ಮಾಡುವಾಗ ಸಹಕಾರಿಯ ಉಪವಿಧಿ/ ಸಿಬ್ಬಂದಿ ಸೇವಾ ನಿಯಮಗಳೊಂದಿಗೆ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಮತ್ತು ನಿಯಮಗಳನ್ನು ಅನುಸರಿಸತಕ್ಕದ್ದು.
3. ಸಾಮಾನ್ಯ ನಿಕಾಯದಿಂದ ಅನುಮೋದನೆಯಾದ ವೃಂದ ಸಂಖ್ಯೆಯ ಮಿತಿಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ನಿಯಮ 6ಎಲ್ ರಂತೆ ಸಮಿತಿ ರಚನೆ ಮಾಡಿ ಸಮಿತಿಯ ಉಸ್ತುವಾರಿಯಲ್ಲಿ ನೇಮಕಾತಿ ಪ್ರಕ್ರಿಯೆ ನಡೆಸತಕ್ಕದ್ದು. ಈ ಕುರಿತು ಆಡಳಿತ ಮಂಡಲಿ ಸಭೆಗೆ ವಿಷಯ ಮಂಡಿಸಿ, ನಿರ್ಣಯಿಸಿ, ಸಮಿತಿಯನ್ನು ರಚಿಸತಕ್ಕದ್ದು. ಸದರಿ ನಿರ್ಣಯದಲ್ಲಿ ಸಮಿತಿಗೆ ಬಾಹ್ಯ ತಜ್ಞರ ಹೆಸರು, ನೇಮಕವಾಗಬೇಕಾದ ವೃಂದಶಃ ಸಿಬ್ಬಂದಿಗಳ ಸಂಖ್ಯೆ, ನೇಮಕಾತಿಯ ವಿಧಾನ, ಕಾಲಮಿತಿ ಇತ್ಯಾದಿಗಳು ಇರತಕ್ಕದ್ದು.
4. ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ನಿಯಮ 6ಎಲ್ ರಂತೆ ಸಮಿತಿ ರಚನೆ ಈ ಕೆಳಗಿನಂತೆ ಇರತಕ್ಕದ್ದು,
   I. ಸಹಕಾರಿಯ ಅಧ್ಯಕ್ಷರು - ಅಧ್ಯಕ್ಷರು
   II. ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಆಯ್ಕೆ ಮಾಡಿಕೊಂಡ ಒಬ್ಬ ಸದಸ್ಯರು - ಸದಸ್ಯರು
   III. ಸಂಯುಕ್ತ ಸಹಕಾರಿಯ ಒಬ್ಬ ಪ್ರತಿನಿಧಿ - ಸದಸ್ಯರು
   IV. ಸಹಕಾರಿಯಿಂದ ನಾಮಕರಣಗೊಂಡ ಸಹಕಾರ ಕ್ಷೇತ್ರದಲ್ಲಿ ಅನುಭವ ಹೊಂದಿರುವ ಬಾಹ್ಯ ತಜ್ಞರು - ಸದಸ್ಯರು
   v. ಸಹಾರಿಯ ಮುಖ್ಯಕಾರ್ಯನಿರ್ವಾಹಕ - ಸದಸ್ಯ ಕಾರ್ಯದರ್ಶಿ

   ಸಮಿತಿಯ ಸಭೆಗೆ ಅವಶ್ಯ ಕೋರಂ ಕನಿಷ್ಠ ಮೂರು ಇರತಕ್ಕದ್ದು.
5. ಮಂಡಲಿ ಸಭೆ ಕರೆಯುವ/ ನಡೆಸುವ ಕಾರ್ಯವಿಧಾನವು ಸಮಿತಿ ಸಭೆ ಕರೆಯಲು/ ನಡೆಸಲು ಯಥೋಚಿತ ವ್ಯತ್ಯಾಸದೊಂದಿಗೆ ಅನ್ವಯವಾಗತಕ್ಕದ್ದು. ನೇರ ನೇಮಕಾತಿ ಕುರಿತು ಪತ್ರಿಕಾ ಪ್ರಕಟಣೆ ದಿನಾಂಕ, ಲಿಖಿತ ಪರೀಕ್ಷೆ ದಿನಾಂಕ, ಸಂದರ್ಶನದ ದಿನಾಂಕ ಇವುಗಳನ್ನು ಸಮಿತಿಯೇ ನಿರ್ಣಯಿಸತಕ್ಕದ್ದು.
6. ನೇರ ನೇಮಕಾತಿಯ ಯಾವುದೇ ಹುದ್ದೆಯನ್ನು ಭರ್ತಿ ಮಾಡುವಾಗ ಖಾಲಿ ಸ್ಥಾನಗಳ ಬಗ್ಗೆ, ಹೆಚ್ಚು ಪ್ರಸಾರ ಹೊಂದಿರುವ ಸುದ್ದಿ ಪತ್ರಿಕೆಗಳಲ್ಲಿ ವಿವರವಾದ ಪ್ರಕಟಣೆ ನೀಡಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸತಕ್ಕದ್ದು. ಪತ್ರಿಕಾ ಪ್ರಕಟಣೆಯಲ್ಲಿ, ವೃಂದಶಃ ಹುದ್ದೆಗಳ ಸಂಖ್ಯೆ, ವಯೋಮಿತಿ, ವಿದ್ಯಾರ್ಹತೆ, ವೇತನ ಶ್ರೇಣಿ, ಅರ್ಜಿ ಸಲ್ಲಿಕೆಗೆ ಅಂತಿಮ ದಿನಾಂಕ, ಅರ್ಜಿ ಸಲ್ಲಿಸುವ ವಿಧಾನ ಇತ್ಯಾದಿಗಳನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

   ಪರಂತು, ಒಂದು ಕೋಟಿ ರೂಪಾಯಿಗಳಿಗಿಂತ ಕಡಿಮೆ ದುಡಿಯುವ ಬಂಡವಾಳ ಹೊಂದಿರುವ ಸಹಕಾರಿಗಳಿಗೆ ಪತ್ರಿಕಾ ಪ್ರಕಟಣೆಯಿಂದ ವಿನಾಯಿತಿ ಇರುತ್ತದೆ.
7. ಸಮಿತಿ ರಚನೆ ಕುರಿತು ಮಂಡಲಿಯು ನಿರ್ಣಯ ತೆಗೆದುಕೊಂಡ ಕೂಡಲೇ ಸಮಿತಿಗೆ ಸಂಯುಕ್ತ ಸಹಕಾರಿಯ ಒಬ್ಬ ಪ್ರತಿನಿಧಿಯನ್ನು ನಿಯೋಜಿಸಲು ಕೋರಿ ಸಂಯುಕ್ತ ಸಹಕಾರಿಗೆ ಪತ್ರ ಸಲ್ಲಿಸತಕ್ಕದ್ದು.
8. ಲಿಖಿತ ಪರೀಕ್ಷೆ ಮತ್ತು ಮೌಲ್ಯಮಾಪನ ಪ್ರಕ್ರಿಯೆಯನ್ನು ಅಗತ್ಯವೆನಿಸಿದ್ದಲ್ಲಿ ವೃತ್ತಿಪರತೆಯುಳ್ಳ ಅಧಿಕೃತ ಸಂಸ್ಥೆಗಳಿಂದ ನಡೆಸಬಹುದಾಗಿರುತ್ತದೆ.
9. ಲಿಖಿತ ಪರೀಕ್ಷೆ ಅಥವಾ ಅರ್ಹತಾ ಪರೀಕ್ಷೆ ಮತ್ತು ನಿಗದಿತ ವಿದ್ಯಾರ್ಹತೆ ಪರೀಕ್ಷೆಗಳಲ್ಲಿ ಗಳಿಸಿದ ಒಟ್ಟು ಅಂಕಗಳು ಮತ್ತು ಸಂದರ್ಶನದ ಆಧಾರದ ಮೇಲೆ ನೇಮಕಾತಿ ಪ್ರಕ್ರಿಯೆ ನಡೆಯಬೇಕು.
10. ಸಂದರ್ಶನ ನಡೆಸುವ ಅಥವಾ ಲಿಖಿತ/ ಅರ್ಹತಾ ಪರೀಕ್ಷೆಯಲ್ಲಿ ಗಳಿಸುವ ಅಂಕಗಳ ಅರ್ಹತೆಯ ಆಧಾರದ ಮೇಲೆ ಮಾತ್ರವೇ ಆಯ್ಕೆ ಮಾಡುವ ವಿವೇಚನಾಧಿಕಾರವು ಆಯ್ಕೆ ಸಮಿತಿಗಿರುತ್ತದೆ. ಈ ರೀತಿ ಆಯ್ಕೆ ಮಾಡಿದ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಆಡಳಿತ ಮಂಡಲಿ ಅನುಮೋದನೆ ಪಡೆದು ಪ್ರಕಟಿಸತಕ್ಕದ್ದು.
11. ಪ್ರಕ್ರಿಯೆ ಪೂರ್ಣವಾದ ನಂತರ, ಆಯ್ಕೆಯಾದ ಅಭ್ಯರ್ಥಿಗಳ ಹೆಸರುಗಳ ಸಹಿತ ವರದಿಯನ್ನು ಸಹಕಾರಿಯ ಆಡಳಿತ ಮಂಡಲಿಗೆ ಸಲ್ಲಿಸತಕ್ಕದ್ದು. ಮಂಡಲಿ ಸಭೆಯಲ್ಲಿ ಅನುಮೋದನೆಯಾದ ನಂತರ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಪತ್ರವನ್ನು ಮುಖ್ಯಕಾರ್ಯನಿರ್ವಾಹಕನು ನೀಡತಕ್ಕದ್ದು.

12. ನೇರ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣವಾಗಿ, ಪ್ರಾರಂಭದಿಂದ ಪೂರ್ಣಗೊಳ್ಳುವವರೆಗೆ, ಈ ಸಮಿತಿಯೇ ನಿರ್ವಹಿಸತಕ್ಕದ್ದು. ನೇಮಕಾತಿ ಪ್ರಕ್ರಿಯೆ ಪೂರ್ಣವಾಗಿ ಮಂಡಲಿಗೆ ವರದಿ ಸಲ್ಲಿಕೆಯಾದ ತಕ್ಷಣ ಸಮಿತಿ ವಿಸರ್ಜಿತವಾಗತಕ್ಕದ್ದು.
13. ಸಹಕಾರಿಯ ನೇರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರ, ಸಮಿತಿ ಸಭೆಯ ನೋಟೀಸ್ ಪ್ರತಿಗಳು, ನಡವಳಿಗಳ ಪ್ರತಿಗಳು, ಪತ್ರಿಕಾ ಪ್ರಕಟಣೆಯ ಪ್ರತಿ ಮತ್ತು ಆಯ್ಕೆಯಾದ ಸಿಬ್ಬಂದಿಗಳ ಪಟ್ಟಿಗಳನ್ನು ದೃಢೀಕರಿಸಿ, ವರದಿಯೊಂದಿಗೆ ಸಂಯುಕ್ತ ಸಹಕಾರಿಗೆ ಮುಖ್ಯಕಾರ್ಯನಿರ್ವಾಹಕನು ಸಲ್ಲಿಸತಕ್ಕದ್ದು.
14. ಸಹಕಾರಿಯ ಆಡಳಿತ ಮಂಡಲಿಯು ತುರ್ತು ಸಂದರ್ಭದಲ್ಲಿ ಅಥವಾ ತಾತ್ಕಾಲಿಕ ಅವಧಿಗಾಗಿ ಸಿಬ್ಬಂದಿಗಳನ್ನು "ಗುತ್ತಿಗೆ" ಆಧಾರದ ಮೇಲೆ ಸಹಕಾರಿಯ ಹಿತದೃಷ್ಟಿಯಿಂದ ಸಾಮಾನ್ಯವಾಗಿ ಹನ್ನೊಂದು ತಿಂಗಳ ಅವಧಿ ಮೀರದಂತೆ ನೇಮಕ ಮಾಡಿಕೊಳ್ಳಬಹುದಾಗಿದೆ. ಗುತ್ತಿಗೆ ಸಿಬ್ಬಂದಿಗಳನ್ನು ದೀರ್ಘಕಾಲೀನವಾಗಿ ಮುಂದುವರೆಸತಕ್ಕದ್ದಲ್ಲ.
15. ಇನ್ನೊಂದು ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿ ವಯೋನಿವೃತ್ತರಾದವರನ್ನು ಸಿಬ್ಬಂದಿಗಳಾಗಿ ನೇಮಕ ಮಾಡಿಕೊಳ್ಳತಕ್ಕದ್ದಲ್ಲ. ಅಗತ್ಯವಿದ್ದಲ್ಲಿ ಅಂತಹವರನ್ನು ಸಲಹೆಗಾರರನ್ನಾಗಿ ನೇಮಕ ಮಾಡಿಕೊಳ್ಳಬಹುದು.

ಸೌಹಾರ್ದ ಸಹಕಾರಿಗಳ ನೇಮಕಾತಿಗೆ ಸಂಬಂಧಿಸಿದಂತೆ ಮಾರ್ಗದರ್ಶಿಗಳು ಕುರಿತಾದ ಸುತ್ತೋಲೆಯನ್ನು ನನ್ನ ಸಹಿ ಮತ್ತು ಸಂಯುಕ್ತ ಸಹಕಾರಿಯ ಮೊಹರಿನೊಂದಿಗೆ ದಿನಾಂಕ: **.**.**** ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ.

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿದೇ  ಶಕ

* * * * * * * *

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**
ಶಾಸನಬದ್ಧ ಸಹಕಾರಿ ಸಂಸ್ಥೆ
ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು–560055, Ph : 080-23378375-80, website : www.souharda.coop
Email : souharda@souharda.coop

## ಸೌಹಾರ್ದ ಸಹಕಾರಿಗಳ ನಿರ್ದೇಶಕರ ಅನರ್ಹತೆ ಮತ್ತು /ಅಥವಾ ಸಹ ಆಯ್ಕೆಗೆ ಸಂಬಂಧಿಸಿದಂತೆ ಮಾರ್ಗದರ್ಶಿಗಳು.

### ಪ್ರಸ್ತಾವನೆ

ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಕಲಂ 25ರಡಿ ಪ್ರಾಥಮಿಕ ಸಹಕಾರಿಯ ನಿರ್ದೇಶಕರ ಅನರ್ಹತೆ ಕುರಿತಂತೆ ಹೇಳಿದೆ. ಕಾಯ್ದೆ ಕಲಂ 25(4)ರಂತೆ ಈ ಕಲಂನ ಅನ್ವಯ ಯಾವುದಾದರೂ ನಿರ್ದೇಶಕರು ಅನರ್ಹರಾಗುವರೇ ಎಂಬುದನ್ನು ಸಂಯುಕ್ತ ಸಹಕಾರಿಯು ಸಂಬಂಧಿಸಿದವರಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶ ನೀಡಿದ ತರುವಾಯ ನಿರ್ಣಯಿಸತಕ್ಕದ್ದು. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಕಲಂ 25ರಡಿ ಅನರ್ಹತೆಗೆ ಗುರಿಯಾದ ನಿರ್ದೇಶಕರ ಮಾಹಿತಿಯನ್ನು ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು-2004ರ ನಿಯಮ 6ಜೆ(14)ರನ್ವಯ ಮಾಹಿತಿಯನ್ನು ಸಂಯುಕ್ತ ಸಹಕಾರಿಗೆ ಕಡ್ಡಾಯವಾಗಿ ಸಲ್ಲಿಸಬೇಕಾಗಿದ್ದು ಇದನ್ನು ಕೆಲವೊಂದು ಸಹಕಾರಿಗಳು ಪಾಲಿಸುತ್ತಿರುವುದಿಲ್ಲ. ಆಯಾ ಸಹಕಾರಿಯ ಆಡಳಿತ ಮಂಡಲಿಯೇ ನಿರ್ದೇಶಕರು ಅನರ್ಹರು ಎಂದು ನಿರ್ಣಯಿಸಿ ಅವರ ಸ್ಥಾನದಲ್ಲಿ ಸಹ ಆಯ್ಕೆ ಮಾಡಿಕೊಳ್ಳುತ್ತಿರುವುದನ್ನು ಗಮನಿಸಲಾಗಿರುತ್ತದೆ. ಇದು ಕಾಯ್ದೆಯ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಅಲ್ಲದೇ, ಕೆಲವು ಸಹಕಾರಿಗಳು ನಿರ್ದೇಶಕರ ಅನರ್ಹತೆ ಕುರಿತು ಸೂಕ್ತ ದಾಖಲಾತಿಯನ್ನು ಸಲ್ಲಿಸದೇ, ಅನರ್ಹತೆಯ ಆದೇಶ ನೀಡುವಂತೆ ಕೋರಿ ಸಂಯುಕ್ತ ಸಹಕಾರಿಗೆ ಪ್ರಸ್ತಾವನೆಯನ್ನು ಸಲ್ಲಿಸುತ್ತಿದ್ದಾರೆ.

ಒಟ್ಟಾರೆ ಪ್ರಕ್ರಿಯೆಯನ್ನು ಸುಗಮಗೊಳಿಸುವ ದೃಷ್ಟಿಯಿಂದ, ಕಾಯ್ದೆಯ ಸರಿಯಾದ ಪಾಲನೆ ದೃಷ್ಟಿಯಿಂದ 2011 ರಲ್ಲಿ ಸಂಯುಕ್ತ ಸಹಕಾರಿಯಿಂದ ಮಾರ್ಗದರ್ಶಿ ಸುತ್ತೋಲೆ ನೀಡಲಾಗಿತ್ತು. ಆ ನಂತರದಲ್ಲಿ ಅನೇಕ ಸಲ ಕಾಯ್ದೆ ತಿದ್ದುಪಡಿಯಾಗಿದೆ. ನಿರ್ದೇಶಕರ ಅನರ್ಹತೆಗೆ ಸಂಬಂಧಿಸಿದಂತೆ ಅನೇಕ ಪ್ರಕರಣಗಳಲ್ಲಿ,

ನಿಬಂಧಕರ ನ್ಯಾಯಾಲದಯಲ್ಲಿ, ಉಚ್ಚ ನ್ಯಾಯಾಲಯದಲ್ಲಿ, ಪ್ರಕರಣಗಳು ದಾಖಲಾಗಿ, ಅನೇಕ ಆದೇಶಗಳು ಬಂದಿರುತ್ತವೆ. ಸಂಯುಕ್ತ ಸಹಕಾರಿಯು ಅರೆನ್ಯಾಯಿಕ ಪ್ರಾಧಿಕಾರವಾಗಿರುವುದರಿಂದ ಅರೆನ್ಯಾಯಿಕ ಪ್ರಾಧಿಕಾರದ ನ್ಯಾಯಾಲಯಗಳಲ್ಲಿ ಪ್ರಕರಣದ ವಿಚಾರಣೆ ನಡೆಸುವಂತೆಯೇ ನಿರ್ದೇಶಕರ ಅನರ್ಹತೆಯ ವಿಚಾರಣೆಯನ್ನು ನಡೆಸಬೇಕಿರುತ್ತದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, 2011 ರಲ್ಲಿ ನೀಡಿದ ಮಾರ್ಗದರ್ಶಿ ಸುತ್ತೋಲೆಯನ್ನು ಮಾರ್ಪಡಿಸಿ, ಈ ಕೆಳಕಂಡ ಮಾರ್ಗಸೂಚಿಗಳನ್ನು ನೀಡಿದೆ.

## ಸೌಹಾರ್ದ ಸಹಕಾರಿಗಳ ನಿರ್ದೇಶಕರ ಅನರ್ಹತೆ ಮತ್ತು /ಅಥವಾ ಸಹ ಆಯ್ಕೆಗೆ ಸಂಬಂಧಿಸಿದಂತೆ ಮಾರ್ಗದರ್ಶಿಗಳು.

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997ರ ಕಲಂ 53(7)(ಎ)ರಡಿ.

ಸಂಖ್ಯೆ : ಸಂಸ/ಆಸು-**/2024-25 ದಿನಾಂಕ: **.**.*****

### ಎ. ಕಾಯ್ದೆ ಕಲಂ 25(1) ರಡಿ ನಿರ್ದೇಶಕರ ಅನರ್ಹತೆಗೆ ಅರ್ಜಿ ಸಲ್ಲಿಸುವ ವಿಧಾನ

1. ಕಾಯ್ದೆ ಕಲಂ 25(1)(ಎ)ರಡಿ ತಿಳಿಸಿರುವಂತೆ ಯಾವುದೇ ಸಮಯದಲ್ಲಿ ನಿರ್ದೇಶಕರು ಸದಸ್ಯನಾಗಿ ಮತದಾನ ನೀಡುವ ಅಥವಾ ಸದಸ್ಯನಾಗಿ ಮುಂದುವರೆಯುವ ಹಕ್ಕನ್ನು ಕಳೆದುಕೊಂಡರೆ, ಅಂತಹ ನಿರ್ದೇಶಕರ ಮಾಹಿತಿಯನ್ನು ಹಕ್ಕು ಕಳೆದುಕೊಂಡ ನಂತರದಲ್ಲಿ ನಡೆಯುವ ಸಹಕಾರಿಯ ಆಡಳಿತ ಮಂಡಲಿಯ ಸಭೆಗೆ ಮಂಡಿಸಿ ಸೂಕ್ತವಾಗಿ ನಿರ್ಣಯಿಸತಕ್ಕದ್ದು ಹಾಗೂ ನಿರ್ಣಯಿಸಿದ 20 ದಿನದೊಳಗಾಗಿ ನಿರ್ದೇಶಕರು ಯಾವ ಕಾರಣದಿಂದ ಸದಸ್ಯನಾಗಿ ಮತದಾನ ನೀಡುವ ಅಥವಾ ಸದಸ್ಯನಾಗಿ ಮುಂದುವರೆಯುವ ಹಕ್ಕನ್ನು ಕಳೆದುಕೊಂಡರು ಎಂಬುದರ ದೃಢೀಕೃತ ದಾಖಲೆ ಹಾಗೂ ಸಹಕಾರಿಯ ಆಡಳಿತ ಮಂಡಲಿಯ ನಿರ್ಣಯದೊಂದಿಗೆ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು ಸಂಯುಕ್ತ ಸಹಕಾರಿಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.
2. ಕಾಯ್ದೆ ಕಲಂ 25(1)(ಬಿ)ರಡಿ ತಿಳಿಸಿರುವಂತೆ ಸಹಕಾರಿಯ ಉಪವಿಧಿಯಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಅನರ್ಹತೆಗೆ ಗುರಿಯಾದರೇ, ಅಂತಹ ನಿರ್ದೇಶಕರ ಮಾಹಿತಿಯನ್ನು ಸಹಕಾರಿಯ ಉಪವಿಧಿಯ ಯಾವ ಅಂಶದ ಉಲ್ಲಂಘನೆ ಮಾಡಿರುತ್ತಾರೋ ಅಂತಹ ಉಪವಿಧಿಯ ಅಂಶದ ಉಧೃತ ಭಾಗದೊಂದಿಗೆ, ಅಗತ್ಯ ಪೂರಕ ದಾಖಲೆಗಳೊಂದಿಗೆ ಸಂಯುಕ್ತ ಸಹಕಾರಿಗೆ ಅನರ್ಹತೆಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.
3. ಕಾಯ್ದೆ ಕಲಂ 25(1)(ಸಿ)ರಡಿ ತಿಳಿಸಿರುವಂತೆ ಗೈರುಹಾಜರಿ ಬಗ್ಗೆ ಅನುಮತಿ ಪಡೆದುಕೊಳ್ಳದೇ ನಿರ್ದೇಶಕರು ಮಂಡಲಿಯ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ, ಆಡಳಿತ ಮಂಡಲಿಯ ಸಭೆಯ ನೋಟೀಸ್ ಪ್ರತಿ, ನಿಯಮಗಳಂತೆ ನೋಟೀಸ್ ಕಳುಹಿಸಿದ ದಾಖಲೆ ಮತ್ತು ಆಡಳಿತ ಮಂಡಲಿಯ ಹಾಜರಾತಿ ಪುಸ್ತಕದ ಪ್ರತಿಯೊಂದಿಗೆ ಸಂಯುಕ್ತ ಸಹಕಾರಿಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.
4. ಕಾಯ್ದೆ ಕಲಂ 25(1)(ಡಿ)ರಡಿ ತಿಳಿಸಿರುವಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನೈತಿಕ ಅದಃಪತನವನ್ನೊಳಗೊಂಡ ಅಪರಾಧಕ್ಕಾಗಿ ಅಥವಾ ಸೌಹಾರ್ದ ಕಾಯ್ದೆಯಡಿಯಲ್ಲಿ ಅಪರಾಧಕ್ಕಾಗಿ ನ್ಯಾಯಾಲಯವು ಅಪರಾಧಿ ಎಂದು ತೀರ್ಪು ನೀಡಿದಲ್ಲಿ, ನ್ಯಾಯಾಲಯದ ಆದೇಶ ಪ್ರತಿಯ ದೃಢೀಕೃತ ಪ್ರತಿಯೊಂದಿಗೆ ಸಂಯುಕ್ತ ಸಹಕಾರಿಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.
5. ಕಾಯ್ದೆ ಕಲಂ 25(1)(ಇ)ರಡಿ ತಿಳಿಸಿರುವಂತೆ ಸಹಕಾರಿಯ ಅಥವಾ ಯಾವುದೇ ಸಹಕಾರಿಯ ಅಥವಾ ಸಹಕಾರ ಸಂಘದಲ್ಲಿ ನಿರ್ದೇಶಕರು ಸಾಲ ತೆಗೆದುಕೊಂಡಿದ್ದು, ಅಂತಹ ಸಾಲ ಸುಸ್ತಿಯಾದಲ್ಲಿ, ಅಥವಾ ನಿರ್ದೇಶಕರು ಜಾಮೀನು ನೀಡಿರುವ ಯಾವುದೇ ಸಾಲದ ನಿರಂತರ ಮೂರು ಕಂತುಗಳು ಸುಸ್ತಿಯಾದಲ್ಲಿ, ಸದರಿ ಸಾಲದ ಅರ್ಜಿ, ಸುಸ್ತಿ ಮೊತ್ತ, ಸಾಲದ ಸ್ಟೇಟ್‌ಮೆಂಟ್, ವಸೂಲಿ ಕುರಿತು ನೀಡಿರುವ ನೋಟೀಸ್ ಪ್ರತಿಯೊಂದಿಗೆ ಸಂಯುಕ್ತ ಸಹಕಾರಿಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

### ಬಿ. ಕಾಯ್ದೆ ಕಲಂ 25(2) ರಡಿ ಸಹಕಾರಿಯ ಎಲ್ಲಾ ನಿರ್ದೇಶಕರ ಅನರ್ಹತೆಗೆ ವಿಚಾರಣೆಗೆ ಪರಿಗಣಿಸುವ ವಿಧಾನ

6. ಕಾಯ್ದೆ ಕಲಂ 25(2)(ಎ)ರಡಿ ತಿಳಿಸಿರುವಂತೆ ಮಂಡಲಿಯ ನಿರ್ದೇಶಕರ ಪದಾವಧಿ ಮುಕ್ತಾಯವಾಗುವುದಕ್ಕೆ ಮೊದಲು ಚುನಾವಣೆಗಳನ್ನು ನಡೆಸಲು ಅಗತ್ಯ ನೆರವು ನೀಡದಿದ್ದರೆ, ಈ ಕುರಿತು ಸಂಬಂಧಿಸಿದ ಅಧಿಕಾರಿ ವರದಿ ಸಲ್ಲಿಸತಕ್ಕದ್ದು.

7. ಕಾಯ್ದೆ ಕಲಂ 25(2)(ಎ-1)ರಡಿ ತಿಳಿಸಿರುವಂತೆ ಸಹಕಾರ ವರ್ಷ ಮುಕ್ತಾಯವಾದ ಆರು ತಿಂಗಳೊಳಗಾಗಿ ರಿಜಿಸ್ಟ್ರಾರ್‌ನಿಗೆ ಅಥವಾ ಸಂಯುಕ್ತ ಸಹಕಾರಿಗೆ ಕಲಂ 34ರಡಿ ಸಲ್ಲಿಸಬೇಕಿರುವ ವಿಧ್ಯುಕ್ತ ವರದಿಗಳನ್ನು (ರಿಟರ್ನ್ಸ್) ಮತ್ತು ಮಾಹಿತಿಯನ್ನು ಸಲ್ಲಿಸದಿದ್ದರೆ ಈ ಕುರಿತು ಸಂಯುಕ್ತ ಸಹಕಾರಿಯ ಸ್ಥಳೀಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಅಥವಾ ಪ್ರಾಂತೀಯ ಅಧಿಕಾರಿ ಅಥವಾ ಸಂಬಂಧಿಸಿದ ನಿಬಂಧಕರು ವರದಿ ಸಲ್ಲಿಸತಕ್ಕದ್ದು.
8. ಕಾಯ್ದೆ ಕಲಂ 25(2)(ಎ-2)ರಡಿ ತಿಳಿಸಿರುವಂತೆ ಗಂಭೀರ ಹಣಕಾಸು ಅಕ್ರಮಗಳನ್ನು ಅಥವಾ ವಂಚನೆಯನ್ನು ಎಸಗಿರುವುದು ಕಂಡುಬಂದರೆ, ವಂಚನೆಯು ದಾಖಲಾಗಿರುವ ಸಹಕಾರಿಯ ಪರಿವೀಕ್ಷಣಾ ವರದಿ ಅಥವಾ ವಿಚಾರಣಾ ವರದಿ ಅಥವಾ ಲೆಕ್ಕಪರಿಶೋಧನಾ ವರದಿಯ ಪ್ರತಿಯೊಂದಿಗೆ ವರದಿ ಸಲ್ಲಿಸತಕ್ಕದ್ದು.
9. ಕಾಯ್ದೆ ಕಲಂ 25(2)(ಬಿ)ರಡಿ ತಿಳಿಸಿರುವಂತೆ ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳ ಇಪ್ಪತ್ತೈದರೊಳಗಾಗಿ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸದಿದ್ದರೆ ಅಥವಾ 30ನೇ ಪ್ರಕರಣದಡಿ ಗೊತ್ತುಪಡಿಸಲಾದ ಸಮಯದೊಳಗೆ ನಡೆಸಲು ಕೋರಲಾದ ಸಾಮಾನ್ಯ ನಿಕಾಯದ ಸಭೆಯನ್ನು ಕರೆಯದಿದ್ದರೆ ಈ ಕುರಿತು ಸಹಕಾರಿಯ ಸದಸ್ಯ/ನಿರ್ದೇಶಕ, ಸಂಯುಕ್ತ ಸಹಕಾರಿಯ ಸ್ಥಳೀಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಅಥವಾ ಪ್ರಾಂತೀಯ ಅಧಿಕಾರಿ ಅಥವಾ ಸಂಬಂಧಿಸಿದ ನಿಬಂಧಕರು ವರದಿ ಸಲ್ಲಿಸತಕ್ಕದ್ದು.
10. ಕಾಯ್ದೆ ಕಲಂ 25(2)(ಸಿ)ರಡಿ ತಿಳಿಸಿರುವಂತೆ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಲೆಕ್ಕಪರಿಶೋಧಕರ ವರದಿಯೊಂದಿಗೆ ಹಿಂದಿನ ಸಹಕಾರ ವರ್ಷದ ಲೆಕ್ಕಪರಿಶೋಧನೆ ಮಾಡಲಾದ ಲೆಕ್ಕಪತ್ರಗಳನ್ನು ಮಂಡಿಸದಿದ್ದರೆ, ಈ ಕುರಿತು ಸಹಕಾರಿಯ ಸದಸ್ಯರು/ನಿರ್ದೇಶಕರು, ಸಂಯುಕ್ತ ಸಹಕಾರಿಯ ಸ್ಥಳೀಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಅಥವಾ ಪ್ರಾಂತೀಯ ಅಧಿಕಾರಿ ಅಥವಾ ಸಂಬಂಧಿಸಿದ ನಿಬಂಧಕರು ಅಥವಾ ಸಹಕಾರಿಯ ಲೆಕ್ಕಪರಿಶೋಧಕರು ಅಥವಾ ಸ್ಥಳೀಯ ಲೆಕ್ಕಪರಿಶೋಧನಾ ಉಪನಿರ್ದೇಶಕರು ವರದಿ ಸಲ್ಲಿಸತಕ್ಕದ್ದು.
11. ಕಾಯ್ದೆ ಕಲಂ 25(2)(ಡಿ)ರಡಿ ತಿಳಿಸಿರುವಂತೆ ಸಂಯುಕ್ತ ಸಹಕಾರಿಯು ನೀಡಿದ ಆದೇಶ ಅಥವಾ ನಿರ್ದೇಶನವನ್ನು ಉಲ್ಲಂಘಿಸಿದರೆ ಅಥವಾ ಯಾವುದೇ ಅರೆ-ನ್ಯಾಯಿಕ ಪ್ರಾಧಿಕಾರದ ಅಥವಾ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿದ್ದರೆ, ಈ ಕುರಿತು ಸಂಯುಕ್ತ ಸಹಕಾರಿಯ ಸ್ಥಳೀಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಅಥವಾ ಪ್ರಾಂತೀಯ ಅಧಿಕಾರಿ ಅಥವಾ ಸಂಬಂಧಿಸಿದ ನಿಬಂಧಕರು ವರದಿ ಸಲ್ಲಿಸತಕ್ಕದ್ದು.
12. ಕಾಯ್ದೆ ಕಲಂ 25(2)ಇ)ರಡಿ ತಿಳಿಸಿರುವಂತೆ ಸಂಯುಕ್ತ ಸಹಕಾರಿಯ ಪೂರ್ವಾನುಮೋದನೆಯನ್ನು ಪಡೆಯದೇ ಶಾಖೆಗಳನ್ನು ತೆರೆದಿರುವುದು ಕಂಡು ಬಂದರೆ; ಈ ಕುರಿತು ಸಂಯುಕ್ತ ಸಹಕಾರಿಯ ಸ್ಥಳೀಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಅಥವಾ ಪ್ರಾಂತೀಯ ಅಧಿಕಾರಿ ವರದಿ ಸಲ್ಲಿಸತಕ್ಕದ್ದು.

**ಸಿ. ನಿರ್ದೇಶಕರ ಅನರ್ಹತೆಗೆ ಸಂಬಂಧಿಸಿದಂತೆ,** ಸಹಕಾರಿಯ ಮುಖ್ಯಕಾರ್ಯನಿರ್ವಾಹಕ, ನಿರ್ದೇಶಕ ಅಥವಾ ಸದಸ್ಯರು ಸಲ್ಲಿಸಿದ ಪ್ರಸ್ತಾವನೆಯ ಆಧಾರದಲ್ಲಿ ಅಥವಾ ಸಹಕಾರಿಯ ಪರಿವೀಕ್ಷಣಾಧಿಕಾರಿ, ವಿಚಾರಣಾಧಿಕಾರಿ, ವಿಶೇಷಾಧಿಕಾರಿ ಅಥವಾ ಸಂಯುಕ್ತ ಸಹಕಾರಿಯ ಸ್ಥಳೀಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಪ್ರಾಂತೀಯ ಅಧಿಕಾರಿ ಅಥವಾ ಸಂಬಂಧಿಸಿದ ನಿಬಂಧಕರು, ಸಹಕಾರಿಯ ಲೆಕ್ಕಪರಿಶೋಧಕರು, ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕರು ಸಲ್ಲಿಸಿದ ವರದಿಯ ಆಧಾರದಲ್ಲಿ ಕಲಂ 25(4)ರಡಿ ವಿಚಾರಣೆ ನಡೆಸತಕ್ಕದ್ದು. ಸಹಕಾರಿಗೆ ಸಂಬಂಧಿಸಿಲ್ಲದ ವ್ಯಕ್ತಿಗಳು ಸಲ್ಲಿಸಿದ ಪ್ರಸ್ತಾವನೆ/ವರದಿಯ ಆಧಾರದಲ್ಲಿ ವಿಚಾರಣೆ ನಡೆಸತಕ್ಕದ್ದಲ್ಲ.

ಪರಂತು, ಕಲಂ 25(2) ರಡಿ ಸಹಕಾರಿಯ ಎಲ್ಲಾ ನಿರ್ದೇಶಕರು ಅನರ್ಹತೆಗೆ ಗುರಿಯಾದ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯು ಸ್ವಯಂಪ್ರೇರಿತವಾಗಿ ವಿಚಾರಣೆ ನಡೆಸಬಹುದು.

## ಡಿ. ವಿಚಾರಣೆ ನಡೆಸುವ ವಿಧಾನ

13. ನಿರ್ದೇಶಕರ ಅನರ್ಹತೆ ಕುರಿತು ಪ್ರಸ್ತಾವನೆ ಸಲ್ಲಿಸುವಾಗ ಅನರ್ಹತೆ ಕುರಿತು ನಿರ್ಧರಿಸಲು ಅಗತ್ಯವಾಗಿರುವ ಮೇಲೆ ತಿಳಿಸಿದ ಎಲ್ಲಾ ದಾಖಲೆಗಳನ್ನು/ಸೂಕ್ತ ಮಾಹಿತಿಯನ್ನು ಸಲ್ಲಿಸತಕ್ಕದ್ದು. ಅಗತ್ಯ ದಾಖಲೆಗಳನ್ನು ಅಥವಾ ಸೂಕ್ತ ಮಾಹಿತಿಯನ್ನು ಸಲ್ಲಿಸದ ಸಂದರ್ಭದಲ್ಲಿ ವಿಚಾರಣೆ ನಡೆಸುವಂತಿಲ್ಲ. ಎಲ್ಲಾ ದಾಖಲೆಗಳು ಸಲ್ಲಿಕೆಯಾಗದಿದ್ದರೂ, ಪ್ರಮುಖ ದಾಖಲೆಗಳನ್ನು ಸಲ್ಲಿಸಿದ ಸಂದರ್ಭದಲ್ಲಿ ಸೂಕ್ತವೆಂದು ಕಂಡುಬಂದಲ್ಲಿ, ಉಳಿದ ಪೂರಕ ದಾಖಲೆಗಳನ್ನು ಸಲ್ಲಿಸಲು ಅವಕಾಶ ನೀಡಬಹುದು.

14. ದಾಖಲೆಗಳನ್ನು ಪರಿಶೀಲಿಸಿ, ಅನರ್ಹತೆಗೆ ಗುರಿಯಾದ ವ್ಯಕ್ತಿಗೆ/ವ್ಯಕ್ತಿಗಳಿಗೆ ಅಹವಾಲು ಹೇಳಿಕೊಳ್ಳಲು ದಿನಾಂಕ ನಿಗದಿಪಡಿಸಿ ನೋಟೀಸ್ ನೀಡತಕ್ಕದ್ದು. ನೋಟೀಸ್‌ನಲ್ಲಿ ಅನರ್ಹತೆಗೆ ಕಾರಣಗಳನ್ನು ತಿಳಿಸತಕ್ಕದ್ದು. ನೋಟೀಸ್ ಜೊತೆಯಲ್ಲಿ ಸಲ್ಲಿಕೆಯಾದ ಎಲ್ಲಾ ದಾಖಲೆಗಳ ಪ್ರತಿಯನ್ನು ಒದಗಿಸತಕ್ಕದ್ದು.
15. ನೋಟೀಸನ್ನು ನೋಂದಾಯಿತ ಅಂಚೆ ಮೂಲಕ ಕಳಿಸತಕ್ಕದ್ದು. ಒಂದು ವೇಳೆ ನೋಟೀಸ್ ಅನರ್ಹತೆಗೆ ಗುರಿಯಾದ ನಿರ್ದೇಶಕನಿಗೆ ತಲುಪದಿದ್ದಲ್ಲಿ, ಖುದ್ದಾಗಿ ತಲುಪಿಸಲು ಅಥವಾ ಪತ್ರಿಕಾ ಪ್ರಕಟಣೆ ನೀಡಲು ಅವಕಾಶ ಇರತಕದ್ದು.
16. ವಿಚಾರಣಾ ದಿನಾಂಕದಂದು ಅನರ್ಹತೆಗೆ ಗುರಿಯಾದ ನಿರ್ದೇಶಕರು ಹಾಜರಾಗಿ ಲಿಖಿತದಲ್ಲಿ ಅಹವಾಲು ಸಲ್ಲಿಸಲು ಅಥವಾ ಖುದ್ದಾಗಿ ಹೇಳಿಕೆ ನೀಡಲು ಅವಕಾಶ ಇರತಕ್ಕದ್ದು.
17. ವಿಚಾರಣೆ ಸಂಬಂಧಿಸಿದ ವ್ಯಕ್ತಿಗಳು ಖುದ್ದಾಗಿ ಹಾಜರಾಗತಕ್ಕದ್ದು. ಮುಖ್ಯಕಾರ್ಯನಿರ್ವಾಹಕನು ಅಧೀನ ಅಧಿಕಾರಿಯನ್ನು ಸೂಕ್ತ ಅಧಿಕಾರ ಪ್ರತ್ಯಾಯೋಜನೆ ಪತ್ರದೊಡನೆ ತನ್ನ ಪರವಾಗಿ ಹಾಜರಾಗಲು ನಿಯೋಜಿಸಬಹುದು. ಅನುಮತಿಯಿಲ್ಲದೇ, ಅನರ್ಹತೆಗೆ ಗುರಿಯಾದ ನಿರ್ದೇಶಕರ ಪರವಾಗಿ, ಬೇರೊಂದು ವ್ಯಕ್ತಿ ಹಾಜರಾಗಲು ಅವಕಾಶ ಇರತಕ್ಕದ್ದಲ್ಲ.
18. ಅಗತ್ಯವಿದ್ದಲ್ಲಿ, ಅರ್ಜಿದಾರನಿಗೆ ಹೆಚ್ಚುವರಿ ಮಾಹಿತಿ/ದಾಖಲೆ ನೀಡಲು ಅವಕಾಶ ಇರತಕ್ಕದ್ದು. ಅಹವಾಲು ಸಲ್ಲಿಕೆಯಾದ ನಂತರ, ಸಲ್ಲಿಕೆಯಾದ ದಾಖಲೆಗಳು, ಮಾಹಿತಿ, ವರದಿಗಳು ಮತ್ತು ಅಹವಾಲು ಇವುಗಳನ್ನು ಪರಿಗಣಿಸಿ, ಕಾಯ್ದೆ, ನಿಯಮಗಳು ಮತ್ತು ಉಪವಿಧಿಯ ಅಂಶಗಳನ್ನು ಪರಿಗಣಿಸಿ ಸೂಕ್ತ ಆದೇಶವನ್ನು ಮಾಡತಕ್ಕದ್ದು.
19. ಆದೇಶ ಒಪ್ಪಿಗೆಯಾಗದಿದ್ದಲ್ಲಿ, ಆದೇಶದ ದಿನಾಂಕದಿಂದ 30 ದಿನಗಳೊಳಗೆ ಈ ಕುರಿತು ಸಹಕಾರಿಗಳ ನಿಬಂಧಕರಿಗೆ ಮೇಲ್ಮನವಿ ಸಲ್ಲಿಸಬಹುದು.

**ಇ. ರಾಜೀನಾಮೆ, ಆಕಸ್ಮಿಕ ರಿಕ್ತತೆ, ಸಹ ಆಯ್ಕೆ ಇತ್ಯಾದಿಗಳ ಕುರಿತು.**

20. ಸಹಕಾರಿಯ ಚುನಾಯಿತ ನಿರ್ದೇಶಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲು ಇಚ್ಛಿಸಿದಲ್ಲಿ, ರಾಜೀನಾಮೆ ಪತ್ರವನ್ನು ಕೈಬರಹದಲ್ಲಿ ಬರೆದು ಮುಖ್ಯ ಕಾರ್ಯನಿರ್ವಾಹಕನಿಗೆ ಸಲ್ಲಿಸತಕ್ಕದ್ದು. ಮುಖ್ಯಕಾರ್ಯ ನಿರ್ವಾಹಕನು ರಾಜೀನಾಮೆ ಪತ್ರವನ್ನು ಸ್ವೀಕರಿಸಿ, ಸಹಿ ಮಾಡಿ ದಿನಾಂಕ ಮತ್ತು ಸಮಯ ನಮೂದಿಸಿ ಸ್ವೀಕೃತಿಯನ್ನು ನೀಡತಕ್ಕದ್ದು. ರಾಜೀನಾಮೆ ನೀಡಿದ ನಿರ್ದೇಶಕನು ತನ್ನ ರಾಜೀನಾಮೆ ಹಿಂಪಡೆಯಲು ಇಚ್ಛಿಸಿದಲ್ಲಿ ರಾಜೀನಾಮೆ ನೀಡಿದ ದಿನದಿಂದ ಹದಿನೈದು ದಿನಗಳ ಒಳಗೆ ಲಿಖಿತದಲ್ಲಿ ಮುಖ್ಯಕಾರ್ಯನಿರ್ವಾಹಕನಿಗೆ ಪತ್ರ ನೀಡತಕ್ಕದ್ದು. ರಾಜೀನಾಮೆ ನೀಡಿದ ಹದಿನೈದು ದಿನಗಳೊಳಗೆ ನಿರ್ದೇಶಕನು ರಾಜೀನಾಮೆ ಹಿಂಪಡೆಯಲು ಲಿಖಿತದಲ್ಲಿ ಪತ್ರ ಸಲ್ಲಿಸದಿದ್ದಲ್ಲಿ, ಹದಿನೈದು ದಿನ ಮುಕ್ತಾಯವಾದ ತಕ್ಷಣ ನಿರ್ದೇಶಕನ ರಾಜೀನಾಮೆ ಅಂಗೀಕಾರವಾಗುತ್ತದೆ. ಆ ನಂತರದಲ್ಲಿ ರಾಜೀನಾಮೆ ಹಿಂಪಡೆಯಲು ಅವಕಾಶ ಇರತಕ್ಕದ್ದಲ್ಲ.
21. ಸಹಕಾರಿಯ ಯಾವುದೇ ನಿರ್ದೇಶಕನು ರಾಜೀನಾಮೆ ನೀಡಿದಲ್ಲಿ, ನಂತರ ನಡೆಯುವ ಆಡಳಿತ ಮಂಡಲಿ ಸಭೆಗೆ ಮುಖ್ಯಕಾರ್ಯನಿರ್ವಾಹಕನು ಈ ಕುರಿತು ಮಾಹಿತಿಯನ್ನು ಸಲ್ಲಿಸತಕ್ಕದ್ದು. ರಾಜೀನಾಮೆ ನೀಡಿ ಹದಿನೈದು ದಿನಗಳು ಕಾಯುವ ಅಗತ್ಯ ಇರುವುದಿಲ್ಲ.
22. ಯಾವುದಾದರೂ ನಿರ್ದೇಶಕರ ಸ್ಥಾನ ರಾಜೀನಾಮೆ ಅಥವಾ ಮರಣ ಅಥವಾ ಅನರ್ಹತೆ ಅಥವಾ ಇನ್ನಾವುದೇ ಕಾರಣದಿಂದ ರಿಕ್ತವಾದಲ್ಲಿ, ರಿಕ್ತತೆ ಉಂಟಾದ ಅಥವಾ ಅಧಿಕೃತವಾಗಿ ತಿಳಿಯಲ್ಪಟ್ಟ ಹದಿನೈದು ದಿನಗಳೊಳಗೆ, ರಿಕ್ತತೆ ಉಂಟಾಗಿರುವ ಕುರಿತು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಮತ್ತು ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸತಕ್ಕದ್ದು.
23. ಮಂಡಲಿಯ ಚುನಾವಣೆ ನಡೆದು ಎರಡೂವರೆ ವರ್ಷ ಮುಕ್ತಾಯವಾಗಿರದಿದ್ದಲ್ಲಿ, ರಿಕ್ತ ಸ್ಥಾನವನ್ನು ಚುನಾವಣೆ ಮೂಲಕ ಮಾತ್ರ ಭರ್ತಿ ಮಾಡತಕ್ಕದ್ದು.
24. ಮಂಡಲಿಯ ಚುನಾವಣೆ ನಡೆದು ಎರಡೂವರೆ ವರ್ಷ ಮುಕ್ತಾಯವಾಗಿದ್ದಲ್ಲಿ, ಯಾವ ಮತಕ್ಷೇತ್ರ ಮತ್ತು ಮೀಸಲಾತಿಯ ವರ್ಗದಲ್ಲಿ ರಿಕ್ತತೆ ಉಂಟಾಗಿದೆಯೋ ಅದೇ ಮತ ಕ್ಷೇತ್ರ ಮತ್ತು ಮೀಸಲಾತಿ ವರ್ಗದಿಂದ ಅರ್ಹ ಸದಸ್ಯರನ್ನು ಆಡಳಿತ ಮಂಡಲಿ ಸಭೆಯಲ್ಲಿ ನಿರ್ಣಯಿಸುವ ಮೂಲಕ ಸಹ ಆಯ್ಕೆ ಮಾಡಿಕೊಳ್ಳಬಹುದು. ಅರ್ಹತೆ ಹೊಂದಿಲ್ಲದ ಸದಸ್ಯರನ್ನು ಸಹ ಆಯ್ಕೆ ಮಾಡಿಕೊಳ್ಳುವಂತಿಲ್ಲ.

25. ಸಹಕಾರಿಯ ಅಧ್ಯಕ್ಷ ಅಥವಾ ಉಪಾಧ್ಯಕ್ಷ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲು ಇಚ್ಛಿಸಿದಲ್ಲಿ, ರಾಜೀನಾಮೆ ಪತ್ರವನ್ನು ಕೈಬರಹದಲ್ಲಿ ಬರೆದು ಮುಖ್ಯ ಕಾರ್ಯನಿರ್ವಾಹಕನಿಗೆ ಸಲ್ಲಿಸತಕ್ಕದ್ದು. ಮುಖ್ಯಕಾರ್ಯ ನಿರ್ವಾಹಕನು ರಾಜೀನಾಮೆ ಪತ್ರವನ್ನು ಸ್ವೀಕರಿಸಿ, ಸಹಿ ಮಾಡಿ ದಿನಾಂಕ ಮತ್ತು ಸಮಯ ನಮೂದಿಸಿ ಸ್ವೀಕೃತಿಯನ್ನು ನೀಡತಕ್ಕದ್ದು. ರಾಜೀನಾಮೆ ನೀಡಿದ ಪದಾಧಿಕಾರಿಯು ತನ್ನ ರಾಜೀನಾಮೆ ಹಿಂಪಡೆಯಲು ಇಚ್ಛಿಸಿದಲ್ಲಿ ರಾಜೀನಾಮೆ ನೀಡಿದ ದಿನದಿಂದ ಹದಿನೈದು ದಿನಗಳ ಒಳಗೆ ಲಿಖಿತದಲ್ಲಿ ಮುಖ್ಯಕಾರ್ಯನಿರ್ವಾಹಕನಿಗೆ ಪತ್ರ ನೀಡತಕ್ಕದ್ದು. ರಾಜೀನಾಮೆ ನೀಡಿದ ಹದಿನೈದು ದಿನಗಳೊಳಗೆ ಪದಾಧಿಕಾರಿಯು ರಾಜೀನಾಮೆ ಹಿಂಪಡೆಯಲು ಲಿಖಿತದಲ್ಲಿ ಪತ್ರ ಸಲ್ಲಿಸದಿದ್ದಲ್ಲಿ, ಹದಿನೈದು ದಿನ ಮುಕ್ತಾಯವಾದ ತಕ್ಷಣ ಸದರಿ ಪದಾಧಿಕಾರಿಯ ರಾಜೀನಾಮೆ ಅಂಗೀಕಾರವಾಗುತ್ತದೆ. ಆ ನಂತರದಲ್ಲಿ ರಾಜೀನಾಮೆ ಹಿಂಪಡೆಯಲು ಅವಕಾಶ ಇರತಕ್ಕದ್ದಲ್ಲ.
26. ಯಾವುದಾದರೂ ಪದಾಧಿಕಾರಿಯ ಸ್ಥಾನ ರಿಕ್ತವಾದಲ್ಲಿ, ರಿಕ್ತತೆ ಉಂಟಾದ ಅಥವಾ ಅಧಿಕೃತವಾಗಿ ತಿಳಿಯಲ್ಪಟ್ಟ ಏಳು ದಿನಗಳೊಳಗೆ, ರಿಕ್ತತೆ ಉಂಟಾಗಿರುವ ಕುರಿತು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಮತ್ತು ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸತಕ್ಕದ್ದು.
27. ಪದಾಧಿಕಾರಿ ಸ್ಥಾನವು ಹೆಚ್ಚು ದಿನಗಳು ಖಾಲಿ ಉಳಿಯಲು ಬಿಡತಕ್ಕದ್ದಲ್ಲ.

**ಎಫ್. ಇತರೆ ನಿಯಮಗಳು**

28. ಯಾವುದೇ ಕಾರಣಕ್ಕೂ ನಿರ್ದೇಶಕರನ್ನು ಸಹಕಾರಿಯ ಆಡಳಿತ ಮಂಡಲಿಯೇ ಅನರ್ಹಗೊಳಿಸುವ ನಿರ್ಣಯವನ್ನು ಕೈಗೊಳ್ಳತಕ್ಕದ್ದಲ್ಲ.
29. ನಿರ್ದೇಶಕ ಸ್ಥಾನಕ್ಕೆ ಸಹ ಆಯ್ಕೆ ಮಾಡಿಕೊಂಡಲ್ಲಿ, ಸಹ ಆಯ್ಕೆ ಮಾಡಿಕೊಂಡ 10 ದಿನದೊಳದೊಳಗಾಗಿ ಸಹ ಆಯ್ಕೆ ಮಾಡಿಕೊಂಡ ಸದಸ್ಯರ ವಿವರವನ್ನು ಯಾವ ನಿರ್ದೇಶಕರ ಸ್ಥಾನದಲ್ಲಿ ಸಹ ಆಯ್ಕೆ ಮಾಡಿಕೊಳ್ಳಲಾಗಿದೆ ಎಂಬ ವಿವರವನ್ನು ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು. ನಿರ್ದೇಶಕರ ರಾಜೀನಾಮೆ ಕಾರಣದಿಂದ ತೆರವಾದ ಸ್ಥಾನಕ್ಕೆ ಸಹ ಆಯ್ಕೆ ಮಾಡಿಕೊಂಡಲ್ಲಿ, ರಾಜೀನಾಮೆಯ ಪತ್ರದ ಪ್ರತಿಯನ್ನು ಸಹ ಕಳುಹಿಸತಕ್ಕದ್ದು.
30. ಪದಾಧಿಕಾರಿ ಹುದ್ದೆ ತೆರವಾದ ವರದಿಯನ್ನು ಮತ್ತು ತೆರವಾದ ಸ್ಥಾನಕ್ಕೆ ನಡೆದ ಚುನಾವಣಾ ಪ್ರಕ್ರಿಯೆಯ ವರದಿಯನ್ನು 10 ದಿನದೊಳಗಾಗಿ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು.

ಸೌಹಾರ್ದ ಸಹಕಾರಿಗಳ ನಿರ್ದೇಶಕರ ಅನರ್ಹತೆ ಮತ್ತು /ಅಥವಾ ಸಹ ಆಯ್ಕೆಗೆ ಸಂಬಂಧಿಸಿದ ಈ ಮಾರ್ಗದರ್ಶಿಗಳನ್ನು ನನ್ನ ಸಹಿ ಮತ್ತು ಸಂಯುಕ್ತ ಸಹಕಾರಿಯ ಮೊಹರಿನೊಂದಿಗೆ ಇಂದು ಅಂದರೆ, *** ರಂದು ನೀಡಿರುತ್ತೇನೆ.

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

* * * * * * * * * *

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**
ಶಾಸನಬದ್ಧ ಸಹಕಾರಿ ಸಂಸ್ಥೆ
ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560055, Ph : 080-23378375-80, website : www.souharda.coop
Email : souharda@souharda.coop

ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವ ೨೦೨೮

## ಶಾಖಾ ಅನುಮತಿ ನೀಡುವಾಗ ಪರಿಗಣಿಸಬೇಕಾದ ಮಾನದಂಡಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳ ಕುರಿತ ಸುತ್ತೋಲೆ

### ಪ್ರಸ್ತಾವನೆ

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ರ ಕಲಂ 23ಎ ರಂತೆ ಯಾವುದೇ ಸಹಕಾರಿಯು ತನ್ನ ಕಾರ್ಯಕ್ಷೇತ್ರದಲ್ಲಿ ಸದಸ್ಯರ ಉಪಯೋಗಕ್ಕಾಗಿ ಮಾತ್ರ ಶಾಖೆಗಳನ್ನು, ಉಪ ಶಾಖೆಗಳನ್ನು, ಪಾವತಿ ಕಛೇರಿಗಳನ್ನು ಅಥವಾ ಯಾವುದೇ ಹೆಸರಿನಿಂದ ಕರೆಯಲ್ಪಡುವ ಕಛೇರಿಗಳನ್ನು ಸಂಯುಕ್ತ ಸಹಕಾರಿಯ ಮತ್ತು ತನ್ನ ಸಾಮಾನ್ಯ ಸಭೆಯ ಪೂರ್ವಾನುಮತಿಯೊಡನೆ ಆರಂಭಿಸಬಹುದು. ಈ ಹಿನ್ನೆಲೆಯಲ್ಲಿ ಯಾವುದೇ ಸೌಹಾರ್ದ ಸಹಕಾರಿಯು ಶಾಖೆಯನ್ನು ತೆರೆಯುವ ಪ್ರಸ್ತಾವನೆಯನ್ನು ಸಂಯುಕ್ತ ಸಹಕಾರಿಯ ಅನುಮೋದನೆಗೆ ಮಂಡಿಸುವಾಗ ಅನುಸರಿಸಬೇಕಾದ ಮಾನದಂಡಗಳು, ಶಾಖೆಗೆ ಅನುಮತಿ ನೀಡುವಾಗ

ಸಂಯುಕ್ತ ಸಹಕಾರಿಯು ಪರಿಗಣಿಸುವ ಅಂಶಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳ ಕುರಿತು ಸಂಯುಕ್ತ ಸಹಕಾರಿಯು ಸುತ್ತೋಲೆ ಸಂಖ್ಯೆ:ಕರಾಸೌಸಂಸನಿ/ಸುತ್ತೋಲೆ/ಆ-5/2013-14, ದಿನಾಂಕ:28.06.2013ರಂದು ನೀಡಲಾಗಿತ್ತು. ಆ ನಂತರದಲ್ಲಿ ಸದರಿ ಸುತ್ತೋಲೆಗಳನ್ನು ಮಾರ್ಪಾಡು ಮಾಡಿ, ದಿನಾಂಕ: 19 ಡಿಸೆಂಬರ್ 2020ರಂದು ನಡೆದ ಸಂಯುಕ್ತ ಸಹಕಾರಿಯ 19ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ವಿಷಯ 19ರಲ್ಲಿ ನಿರ್ಣಯಿಸಿ, 01 ಜನವರಿ 2021 ರಿಂದ ಅನ್ವಯವಾಗುವಂತೆ ಪರಿಷ್ಕೃತ ಮಾನದಂಡಗಳನ್ನು ನೀಡಲಾಗಿತ್ತು.

ಕಳೆದ ಮೂರು ವರ್ಷಗಳಲ್ಲಿ ಸೌಹಾರ್ದ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ಆಗಿವೆ. ಪ್ರಸ್ತುತ ಇರುವ ಶಾಖಾ ಅನುಮತಿ ಕುರಿತ ಮಾನದಂಡಗಳ ಕುರಿತು ಅನೇಕ ಸಲಹೆಗಳು ಬಂದಿವೆ. ಮಾನದಂಡಗಳ ಅನುಷ್ಠಾನದಲ್ಲಿಯೂ ಸಹ ಅನೇಕ ಪ್ರಾಯೋಗಿಕ ಸಮಸ್ಯೆಗಳು ಎದುರಾಗಿವೆ. ಈ ಹಿನ್ನೆಲೆಯಲ್ಲಿ, ಮಾನದಂಡಗಳನ್ನು ಇನ್ನೊಮ್ಮೆ ಪರಿಷ್ಕರಿಸಿ, ನೂತನ ಮಾನದಂಡಗಳನ್ನು ರಚಿಸಿರುತ್ತದೆ. ಅದು ಈ ಕೆಳಗಿನಂತಿದೆ.

## ಶಾಖಾ ಅನುಮತಿ ನೀಡುವಾಗ ಪರಿಗಣಿಸಬೇಕಾದ ಮಾನದಂಡಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳ ಕುರಿತ ಸುತ್ತೋಲೆ

ಕ.ಸೌ.ಸ. ಅಧಿನಿಯಮ, 1997ರ ಕಲಂ 23ಎ ಮತ್ತು 53 (7) (ಎ) ಹಾಗೂ (ಹೆಚ್) ಅಡಿ

ಸಂಖ್ಯೆ : ಸಂಸ/ಆಸು-**/2025-26 ದಿನಾಂಕ: **.**.*****

## ಶಾಖೆ ತೆರೆಯಲು ಅನುಮತಿ ನೀಡಲು ಮಾನದಂಡಗಳು

1. ಹಿಂದಿನ ಆರ್ಥಿಕ ವರ್ಷದಲ್ಲಿ ಕ್ರೋಢೀಕೃತ ನಷ್ಟ ತೆಗೆದು ಲಾಭ ಗಳಿಸಿದ್ದು, 3 ವರ್ಷಗಳ ವ್ಯವಹಾರದಲ್ಲಿ ಪ್ರಗತಿಯಲ್ಲಿರಬೇಕು.
2. ಸುಸ್ತಿ ಸಾಲದ ಪ್ರಮಾಣವು ನೀಡಿದ ಸಾಲ ಮತ್ತು ಮುಂಗಡಗಳ ಶೇ.10ನ್ನು ಮೀರತಕ್ಕದ್ದಲ್ಲ.
3. ಯಾವುದೇ ವಿಚಾರಣೆ ಚಾಲ್ತಿಯಲ್ಲಿರುವಾಗ ಶಾಖಾನುಮತಿ ನೀಡಬಾರದು.
4. ಶಾಸನಬದ್ಧ ಕರ್ತವ್ಯಗಳನ್ನು ಪೂರೈಸಿರಬೇಕು. (ಲೆಕ್ಕಪರಿಶೋಧನೆ, ಸಾಮಾನ್ಯ ಸಭೆ, ಚುನಾವಣೆ, ನಿಬಂಧಕರಿಗೆ/ ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸುವುದು, ಸಂಯುಕ್ತ ಸಹಕಾರಿಗೆ ವಾರ್ಷಿಕ ವಂತಿಗೆ/ ಶಿಕ್ಷಣ ನಿಧಿ ಸಲ್ಲಿಕೆ ಇತ್ಯಾದಿ)
5. ಶಾಖೆ ತೆರೆಯುವ ಪ್ರದೇಶದಲ್ಲಿ ಸಹಕಾರಿಯು ಕನಿಷ್ಠ 50 ಸದಸ್ಯರನ್ನು ಹೊಂದಿದ್ದು, ಸದಸ್ಯರ ವಿವರಗಳ ಪಟ್ಟಿಯನ್ನು ಲಗತ್ತಿಸತಕ್ಕದ್ದು.
6. ಪ್ರತಿ ಶಾಖೆಗೆ ಇರಬೇಕಾದ ಸ್ವಂತ ಬಂಡವಾಳ ಈ ಕೆಳಗಿನಂತಿರತಕ್ಕದ್ದು.
    1. ಬಿಬಿಎಂಪಿ ವ್ಯಾಪ್ತಿಯಲ್ಲಿ ರೂ.20 ಲಕ್ಷ
    2. ಉಳಿದ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರೂ.15 ಲಕ್ಷ
    3. ಮಹಾನಗರ ಪಾಲಿಕೆ ಹೊರತುಪಡಿಸಿದ ಜಿಲ್ಲಾ ಕೇಂದ್ರಗಳಿಗೆ ರೂ.10 ಲಕ್ಷ
    4. ಇತರೆ ಕೇಂದ್ರಗಳಿಗೆ ರೂ.5 ಲಕ್ಷ

- ಸಹಕಾರಿಯ ಕೇಂದ್ರ ಕಛೇರಿಯನ್ನು ಹೊರತುಪಡಿಸಿ, ಈಗಾಗಲೇ ಇರುವ ಶಾಖೆಗಳಿಗೆ, ಈ ಮೇಲ್ಕಂಡಂತೆ ಸ್ವಂತ ಬಂಡವಾಳ ಹಂಚಿಕೆ ಮಾಡಿದ ನಂತರದಲ್ಲಿ ಉಳಿದ ಸ್ವಂತ ಬಂಡವಾಳವನ್ನು ಉದ್ದೇಶಿತ ಶಾಖೆಗಳಿಗೆ ಲೆಕ್ಕಾಚಾರ ಮಾಡುವುದು.

7. ಮೊದಲ ಎರಡು ಶಾಖೆಗಳಿಗೆ ಅನುಮತಿ ನೀಡುವ ಸಂದರ್ಭದಲ್ಲಿ ಸಹಕಾರಿಯ ಲಾಭವನ್ನು ಪರಿಗಣಿಸತಕ್ಕದ್ದಲ್ಲ.
8. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಕಲಂ 18 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004 ರ ನಿಯಮ 3(4)(ಸಿ) ಗಳನ್ನು ಪಾಲಿಸಿರತಕ್ಕದ್ದು.
9. ಸಂಯುಕ್ತ ಸಹಕಾರಿಯು ಹೊರಡಿಸಿರುವ ಆರ್ಥಿಕ ಸಬಲತೆಯ ಮಾನದಂಡಗಳು ಸುತ್ತೋಲೆಯ ದ್ರವ್ಯಾಸ್ತಿ ನಿರ್ವಹಣೆ ಮತ್ತು ಸಾಲದ ಕುರಿತ ಮಾನದಂಡಗಳನ್ನು ಪಾಲಿಸಿರತಕ್ಕದ್ದು.
10. ಸಹಕಾರಿಯು ಶಾಖೆಯನ್ನು ಪ್ರಾರಂಭಿಸಲು ಹಿಂದಿನ ವರ್ಷದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮತಿ ಪಡೆದಿರಬೇಕು. ಸಂಯುಕ್ತ ಸಹಕಾರಿಯು ಅನುಮತಿ ಪತ್ರ ನೀಡಿದ ದಿನಾಂಕದಿಂದ ಒಂದು ವರ್ಷದ ಒಳಗೆ ಕಾರ್ಯಾರಂಭ ಮಾಡದ ಶಾಖೆಗಳ ಅನುಮತಿ ರದ್ದುಗೊಂಡಿದೆ ಎಂದು ಭಾವಿಸತಕ್ಕದ್ದು.

11. ಸಂಯುಕ್ತ ಸಹಕಾರಿಯಿಂದ ಅನುಮತಿಯ ನಂತರ ಶಾಖೆಯ ಆರಂಭಕ್ಕೂ ಪೂರ್ವದಲ್ಲಿ ಅಥವಾ ಆರಂಭದ ನಂತರ ಶಾಖೆಯನ್ನು ಸ್ಥಳಾಂತರ ಮಾಡುವುದಿದ್ದಲ್ಲಿ ಆ ಕುರಿತು ಆಡಳಿತ ಮಂಡಲಿಯಲ್ಲಿ ನಿರ್ಣಯಿಸಿ, ಸಂಯುಕ್ತ ಸಹಕಾರಿಗೆ ಅನುಮತಿಗಾಗಿ ಪ್ರಸ್ತಾವನೆ ಸಲ್ಲಿಸತಕ್ಕದ್ದು. ಪ್ರಸ್ತಾವನೆಯ ಜೊತೆ, ಮಂಡಲಿಯ ನಿರ್ಣಯದ ಪ್ರತಿ, ಸ್ಥಳಾಂತರಕ್ಕೆ ಕಾರಣ, ಪ್ರಸ್ತಾವಿತ ನೂತನ ಸ್ಥಳದ ವಿವರ, ಶಾಖಾ ಅನುಮತಿ ಪತ್ರ ಮತ್ತು ಪ್ರಮಾಣಪತ್ರ ಇವುಗಳನ್ನು ಸಲ್ಲಿಸತಕ್ಕದ್ದು. ಸಂಯುಕ್ತ ಸಹಕಾರಿಯ ಲಿಖಿತ ಅನುಮೋದನೆಯ ನಂತರ ಸ್ಥಳಾಂತರ ಮಾಡಬಹುದು.
12. ಶಾಖಾ ವಿಲೀನ ಹಾಗೂ ಮುಚ್ಚುವಿಕೆಯ ಸಂದರ್ಭದಲ್ಲಿ -
    1. ಶಾಖಾ ವಿಲೀನ ಹಾಗೂ ಮುಚ್ಚುವಿಕೆಯ ಸ್ಥಿತಿ ನಿರ್ಮಾಣವಾದಲ್ಲಿ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸತಕ್ಕದ್ದು ಹಾಗೂ ಸದರಿ ಶಾಖೆಯಲ್ಲಿ ವ್ಯವಹಾರ ಹೊಂದಿರುವವರಿಗೆ ಯಾವ ಶಾಖೆಯಿಂದ ಸೇವೆ ಒದಗಿಸಲಾಗುವುದು ಎನ್ನುವುದನ್ನು ಸ್ಪಷ್ಟವಾಗಿ ನಿರ್ಣಯದಲ್ಲಿ ದಾಖಲಿಸತಕ್ಕದ್ದು.
    2. ಶಾಖೆಯಲ್ಲಿ ವ್ಯವಹಾರ ಹೊಂದಿರುವ ಎಲ್ಲಾ ಸದಸ್ಯರಿಗೆ ಲಿಖಿತದಲ್ಲಿ ಪ್ರಸಕ್ತ ಶಾಖೆಯ ವಿಲೀನ/ ಮುಚ್ಚುವಿಕೆಯ ಮಾಹಿತಿ ನೀಡತಕ್ಕದ್ದು ಹಾಗೂ ಮುಂದಿನ ವ್ಯವಹಾರ ನಿರ್ವಹಿಸಬೇಕಾದ ಶಾಖೆಯ ವಿವರ ಒದಗಿಸತಕ್ಕದ್ದು.
    3. ಶಾಖೆಯ ಠೇವಣಿದಾರ ಬೇರೊಂದು ಶಾಖೆಯಿಂದ ವ್ಯವಹಾರ ನಡೆಸಲು ಒಪ್ಪದಿದ್ದಲ್ಲಿ ಅವನ ಠೇವಣಿಯನ್ನು ಯಾವುದೇ ಕಡಿತ ಮಾಡದೇ ಹಿಂತಿರುಗಿಸತಕ್ಕದ್ದು.
    4. ಶಾಖೆ ವಿಲೀನ/ ಮುಚ್ಚುವಿಕೆಯ ಮಾಹಿತಿಯನ್ನು ಆಡಳಿತ ಮಂಡಲಿ ಸಭೆಯ ನಿರ್ಣಯದೊಂದಿಗೆ ಸಂಯುಕ್ತ ಸಹಕಾರಿಗೆ, ವಿಲೀನ/ ಮುಚ್ಚುವಿಕೆಯ ದಿನಾಂಕದಿಂದ 30 ದಿನಗಳ ಒಳಗಾಗಿ ಸಲ್ಲಿಸತಕ್ಕದ್ದು ಹಾಗೂ ಸಹಕಾರಿಯ ತಕ್ಷಣದ/ ಮುಂಬರುವ ಸಾಮಾನ್ಯ ಸಭೆಗೆ ಮಾಹಿತಿ ನೀಡತಕ್ಕದ್ದು.

**ಶಾಖೆ ತೆರೆಯಲು ಅನುಮತಿ ಕೋರುವ ಪತ್ರದ ಜೊತೆ ಧೃಢೀಕರಿಸಿ ಸಲ್ಲಿಸಬೇಕಾದ ಮಾಹಿತಿ/ದಾಖಲೆಗಳು**

1. ಶಾಖೆ ತೆರೆಯುಲು ಉದ್ದೇಶಿಸಿರುವ ಸ್ಥಳದ ವಿವರ.
2. ಸಹಕಾರಿಯ ಒಟ್ಟು ಸದಸ್ಯರ ಸಂಖ್ಯೆ, ಪ್ರಸ್ತಾವಿತ ಶಾಖೆಯ ಪ್ರದೇಶದಲ್ಲಿನ ಸದಸ್ಯರ ಸಂಖ್ಯೆ.
3. ಸಹಕಾರಿಯ ಹಿಂದಿನ ಎರಡು ವರ್ಷಗಳ ಲೆಕ್ಕಪರಿಶೋಧಿತ ಆಸ್ತಿ-ಜವಾಬ್ದಾರಿ ತಃಖ್ತೆ, ಲಾಭ-ಹಾನಿ ತಃಖ್ತೆ ಮತ್ತು ಜಮಾ-ಖರ್ಚು ತಃಖ್ತೆ (ಶೆಡ್ಯೂಲುಗಳ ಸಹಿತ). (ಲೆಕ್ಕಪರಿಶೋಧಕರ ಸಹಿ ಇರುವ ಪ್ರತಿಗಳ ದೃಢೀಕೃತ ಯಥಾನಕಲು)
4. ಶಾಖೆ ಆರಂಭಿಸಲು ಅನುಮತಿ ಪಡೆದ ಸಾಮಾನ್ಯ ಸಭೆಯ ನೋಟೀಸ್ ಮತ್ತು ನಡವಳಿಗಳ ದೃಢೀಕೃತ ಪ್ರತಿಗಳು.

   ಸಾಮಾನ್ಯ ಸಭೆಯ ನಡಾವಳಿಯ ಸಂಪೂರ್ಣ ಭಾಗದ ಯಥಾ ನಕಲನ್ನು ದೃಢೀಕರಿಸಿ ಸಲ್ಲಿಸುವುದು. (ಉಧೃತ ಭಾಗವಲ್ಲ)
5. ಸಹಕಾರಿಯ ಕಾರ್ಯವ್ಯಾಪ್ತಿಯ ಕುರಿತಾದ ದಾಖಲೆ. (ಸಹಕಾರಿಯ ಉಪವಿಧಿಯಲ್ಲಿ ಕಾರ್ಯವ್ಯಾಪ್ತಿಯ ಮಾಹಿತಿ ಹೊಂದಿರುವ ಪ್ರತಿಯ ಯಥಾ ನಕಲನ್ನು ಮಾತ್ರ ಲಗತ್ತಿಸಿ)
6. ಹಿಂದಿನ ಎರಡು ವರ್ಷಗಳ ಸುಸ್ತಿ ಸಾಲದ ಪ್ರಮಾಣದ ವಿವರ. (ಸಹಕಾರಿಯ ಲೆಕ್ಕಪರಿಶೋಧನಾ ವರದಿಯಲ್ಲಿ ಸುಸ್ಥಿ ಸಾಲದ ವಿವರದ ಯಥಾ ನಕಲು)
7. ಯಾವುದೇ ರೀತಿಯ ವಿಚಾರಣೆ ನಡೆದಿದ್ದಲ್ಲಿ/ನಡೆಯುತ್ತಿದ್ದಲ್ಲಿ ಆದೇಶ ಪತ್ರ, ವಿಚಾರಣೆ ಮುಕ್ತಾಯವಾಗಿದ್ದು, ವರದಿ ಸಲ್ಲಿಸಿದ್ದಲ್ಲಿ ವರದಿಯ ಪ್ರತಿ. ಅನುಪಾಲನೆ ಸಲ್ಲಿಸಿದ್ದಲ್ಲಿ ಈ ಕುರಿತಾದ ವಿವರಗಳ ಯಥಾ ನಕಲು.
8. ಯಾವುದೇ ರೀತಿಯ ಪರಿವೀಕ್ಷಣೆ ನಡೆದಿದ್ದಲ್ಲಿ/ನಡೆಯುತ್ತಿದ್ದಲ್ಲಿ ಆದೇಶ ಪತ್ರ, ಅನುಪಾಲನೆ ಸಲ್ಲಿಸಿದ್ದಲ್ಲಿ ಈ ಕುರಿತಾದ ವಿವರಗಳ ಯಥಾ ನಕಲು.
9. ಈಗಿರುವ ಒಟ್ಟು ಶಾಖೆಗಳ ವಿವರ - ಪ್ರತಿ ಶಾಖೆಯ ವಿಳಾಸ, ಆರಂಭಿಸಿದ ದಿನಾಂಕ, ಹಿಂದಿನ ಎರಡು ವರ್ಷಗಳ ಲಾಭ/ನಷ್ಟ, ಒಟ್ಟು ಸಿಬ್ಬಂದಿಗಳ ಸಂಖ್ಯೆ, ಠೇವಣಿ, ಸಾಲ, ಪತ್ತೇತರ ಚಟುವಟಿಕೆಯ ವಿವರ.

ಶಾಖಾ ಅನುಮತಿ ನೀಡುವಾಗ ಪರಿಗಣಿಸಬೇಕಾದ ಮಾನದಂಡಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳು ಸುತ್ತೋಲೆಯನ್ನು ನನ್ನ ಸಹಿ ಮತ್ತು ಸಂಯುಕ್ತ ಸಹಕಾರಿಯ ಮೊಹರಿನೊಂದಿಗೆ ದಿನಾಂಕ : **.**.**** ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ.

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

* * * * * * * * * * *


**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**

ಶಾಸನಬದ್ಧ ಸಹಕಾರಿ ಸಂಸ್ಥೆ

ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560055, Ph : 080-23378375-80, website : www.souharda.coop
Email : souharda@souharda.coop


## ಪ್ರಸ್ತಾವನೆ

ಸೌಹಾರ್ದ ಸಹಕಾರ ಕ್ಷೇತ್ರದ ಗುಣಮಟ್ಟವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ, ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಹಾಗೂ ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಚರ್ಚೆಗಳು ನಡೆದಿರುತ್ತವೆ. ಸೌಹಾರ್ದ ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಹೆಚ್ಚಿಸುವ ದೃಷ್ಟಿಯಿಂದ ಸಹಕಾರ ಇಲಾಖೆಯೊಂದಿಗಿನ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದೊಂದಿಗಿನ ಸಭೆಗಳಲ್ಲಿ ಕೂಡ ಸಲಹೆ/ಅಭಿಪ್ರಾಯಗಳನ್ನು ಪಡೆಯಲಾಗಿದೆ. ಸಹಕಾರ ತಜ್ಞರ, ಸನ್ನದು ಲೆಕ್ಕಪರಿಶೋಧಕರ, ಬ್ಯಾಂಕಿಂಗ್ ತಜ್ಞರ, ನ್ಯಾಯವಾದಿಗಳ, ಪ್ರಮುಖ ಸಹಕಾರಿ ಸಂಸ್ಥೆಗಳ ಅಭಿಪ್ರಾಯಗಳನ್ನು ಪಡೆದು ಸೌಹಾರ್ದ ಸಹಕಾರಿಗಳಿಗಾಗಿ ಆರ್ಥಿಕ ಸಬಲತೆಯ ಮಾನದಂಡಗಳನ್ನು ರಚಿಸಲಾಗಿದೆ. ಸಂಯುಕ್ತ ಸಹಕಾರಿಯು ಈ ಹಿಂದೆ ನೀಡಿದ್ದ – ದ್ರವ್ಯಾಸ್ತಿ ನಿರ್ವಹಣಾ ಮಾರ್ಗಸೂಚಿ, ಲಾಭಾಂಶ ವಿಲೇವಾರಿ ಮಾರ್ಗಸೂಚಿ, ನಿಧಿಗಳ ಹೂಡಿಕೆ ಕುರಿತ ಮಾರ್ಗಸೂಚಿ, ಪತ್ತಿನ ಸಹಕಾರಿಗಳ ಆರ್ಥಿಕ ಸಬಲತೆ ಮಾನದಂಡಗಳು - ಈ ಸುತ್ತೋಲೆಗಳಲ್ಲಿನ ಅಂಶಗಳನ್ನು ಅಗತ್ಯ ಬದಲಾವಣೆಗಳೊಂದಿಗೆ ಏಕೀಕೃತಗೊಳಿಸಿ ಈ ಸುತ್ತೋಲೆಯಲ್ಲಿ ಸೇರ್ಪಡೆ ಮಾಡಿ ದಿನಾಂಕ 01 ಜನವರಿ 2021ರಿಂದ ಅನ್ವಯವಾಗುವಂತೆ ಜಾರಿ ಮಾಡಲಾಗಿತ್ತು.

ಕಳೆದ ಐದು ವರ್ಷಗಳಲ್ಲಿಸೌಹಾರ್ದ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ಆಗಿವೆ. ಪ್ರಸ್ತುತ ಇರುವ ಮಾನದಂಡಗಳ ಕುರಿತು ಅನೇಕ ಸಲಹೆಗಳು ಬಂದಿವೆ. ಈ ಹಿನ್ನೆಲೆಯಲ್ಲಿ, ಮಾನದಂಡಗಳನ್ನು ಇನ್ನೊಮ್ಮೆ ಪರಿಷ್ಕರಿಸಿ, ನೂತನ ಮಾನದಂಡಗಳನ್ನು ರಚಿಸಿರುತ್ತದೆ. ಅದು ಈ ಕೆಳಗಿನಂತಿದೆ.

## ಆರ್ಥಿಕ ಸಬಲತೆಯ ಮಾನದಂಡಗಳ ಸುತ್ತೋಲೆ

(ಕಾಯ್ದೆ ಕಲಂ.53(7)(ಹೆಚ್) ರಡಿಯ ಪ್ರಾವಧಾನದಂತೆ)

ಸಂಖ್ಯೆ: ಸಂಸ/ಆಸು-xx/2025-26 ದಿನಾಂಕ: xx.xx.2025

### ಎ. ನಿಧಿಗಳ ಸಂಗ್ರಹ ಮಿತಿ :

1. ಸಹಕಾರಿಯು ಸ್ವೀಕರಿಸಬಹುದಾದ ಠೇವಣಿ ಮತ್ತು ಸಾಲದ ಮೊತ್ತವು ಸಹಕಾರಿಯ ಪಾವತಿಯಾದ ಶೇರು ಬಂಡವಾಳ, ಮೀಸಲು ನಿಧಿ ಮತ್ತು ಕಟ್ಟಡ ನಿಧಿಗಳ ಒಟ್ಟು ಮೊತ್ತದ ಐವತ್ತು ಪಟ್ಟು ಮೊತ್ತದಿಂದ ಕ್ರೋಢೀಕೃತ ನಷ್ಟವನ್ನು ಕಳೆದಾಗ ಬರುವ ಮೊತ್ತವನ್ನು ದಾಟುವಂತಿಲ್ಲ. (ಸೌಹಾರ್ದ ಸಹಕಾರಿ ನಿಯಮ ಸಂಖ್ಯೆ 3(4)(ಸಿ)).

### ಬಿ. ದ್ರವ್ಯಾಸ್ತಿ ನಿರ್ವಹಣೆ :

1. ಸಹಕಾರಿಯ ಸಂಗ್ರಾಹಿತ ಠೇವಣಿಯ ಕನಿಷ್ಠ ಶೇಕಡಾ 20 ಅನ್ನು ದ್ರವ್ಯಾಸ್ತಿಯಾಗಿ ನಿರ್ವಹಿಸತಕ್ಕದ್ದು. ಇದರಲ್ಲಿ, ಶಾಸನಬದ್ದ ಮೀಸಲು ನಿಧಿ ಶೇ.25ನ್ನು ಹೊರತುಪಡಿಸಿ ಹೂಡಿಕೆ ಮಾಡಲಾದ ಉಳಿದೆಲ್ಲ ನಿಧಿಗಳನ್ನು ದ್ರವ್ಯಾಸ್ತಿಯಾಗಿ ಪರಿಗಣಿಸಬಹುದು.
2. ದ್ರವ್ಯಾಸ್ತಿ ಉದ್ದೇಶಕ್ಕೆ ಹಿಂದಿನ ತ್ರೈಮಾಸಿಕದ ಅಂತ್ಯಕ್ಕೆ ಇರುವ ಒಟ್ಟು ಠೇವಣಿಯ ಮೊತ್ತವನ್ನು ಪರಿಗಣಿಸಿ ಅಗತ್ಯ ದ್ರವ್ಯಾಸ್ತಿಯನ್ನು ಲೆಕ್ಕಾಚಾರ ಮಾಡಿ ನಿರಂತರ ನಿರ್ವಹಿಸತಕ್ಕದ್ದು.
3. ನಗದನ್ನು ಹೊರತುಪಡಿಸಿ ಉಳಿದ ದ್ರವ್ಯಾಸ್ತಿ ಮೊತ್ತವನ್ನು ಬ್ಯಾಂಕ್ ಖಾತೆಗಳಲ್ಲಿ ಅಥವಾ ಸೌಹಾರ್ದ ಸಹಕಾರಿ ಕಾಯ್ದೆ ಕಲಂ.18ರ ಪ್ರಾವಧಾನದಡಿ ಪ್ರತ್ಯೇಕವಾಗಿ ತಕ್ಷಣಕ್ಕೆ ನಗದು ಲಭ್ಯತೆಯಾಗುವ ಹೂಡಿಕೆಗಳನ್ನು ಮಾಡತಕ್ಕದ್ದು.

4. ದ್ರವ್ಯಾಸ್ತಿ ಹೂಡಿಕೆಯ ಆಧಾರದಲ್ಲಿ ಯಾವುದೇ ಸಾಲ ಪಡೆಯುವಂತಿಲ್ಲ. ಪರಂತು, ಠೇವಣಿ ಹಿಂಪಾವತಿಗೆ ಅಗತ್ಯ ನಗದು ಲಭ್ಯವಿಲ್ಲದಿದ್ದಲ್ಲಿ ಆರು ತಿಂಗಳ ಅವಧಿ ಮೀರದಂತೆ ದ್ರವ್ಯಾಸ್ತಿ ಹೂಡಿಕೆಯ ಗರಿಷ್ಠ ಶೇ.80ರವರೆಗೆ ಓವರ್ ಡ್ರಾಫ್ಟ್ ಸಾಲವನ್ನು ಪಡೆಯಬಹುದು. ಆದರೆ ಇದನ್ನು ಠೇವಣಿ ಹಿಂಪಾವತಿ ಹೊರತುಪಡಿಸಿ ಉಳಿದ ಕಾರಣಗಳಿಗೆ ಬಳಸತಕ್ಕದ್ದಲ್ಲ. ಆದಾಗ್ಯೂ ಓವರ್ ಡ್ರಾಫ್ಟ್ ಸಾಲವನ್ನು ಆದ್ಯತೆಯ ಮೇರೆಗೆ ಮರುಪಾವತಿ ಮಾಡತಕ್ಕದ್ದು.
5. ಸಹಕಾರಿಯ ಆಡಳಿತ ಮಂಡಲಿಯು ತಮ್ಮ ವ್ಯವಹಾರದ ಅವಶ್ಯಕತೆಯನ್ನು ಗಮನದಲ್ಲಿರಿಸಿಕೊಂಡು, ಶಾಖಾವಾರು ನಗದು ಮಿತಿಯನ್ನು ನಿಗದಿಗೊಳಿಸತಕ್ಕದ್ದು. ಪರಂತು, ಸಹಕಾರಿಯ ಕ್ರೋಢೀಕೃತ ನಗದು ಮಿತಿಯು ದುಡಿಯುವ ಬಂಡವಾಳದ ಶೇಕಡಾ 2ನ್ನು ಮೀರತಕ್ಕದ್ದಲ್ಲ.
6. ಸಹಕಾರಿಯು ಸ್ವೀಕರಿಸಿದ ಠೇವಣಿಯನ್ನು ಸಾಲ ನೀಡಿಕೆ ಅಥವಾ ಕಲಂ.18ರಡಿ ಹೂಡಿಕೆ ಅಥವಾ ದ್ರವ್ಯಾಸ್ತಿಯಾಗಿ ಮಾತ್ರ ಉಪಯೋಗಿಸತಕ್ಕದ್ದು, ಯಾವುದೇ ಕಾರಣಕ್ಕೂ ಪತ್ತೇತರ ಚಟುವಟಿಕೆಗಳಿಗೆ ಬಳಸುವಂತಿಲ್ಲ.

   ಪರಂತು, ಪತ್ತೇತರ ಚಟುವಟಿಕೆ ನಡೆಸುವ ಸಹಕಾರಿಯು ನಿರ್ದಿಷ್ಟ ಉದ್ದೇಶಕ್ಕಾಗಿ, ಅವಧಿ ಪೂರ್ವ ಮರುಪಾವತಿಗೆ ಅವಕಾಶ ಇಲ್ಲದ, ನಿರ್ದಿಷ್ಟ ಅವಧಿಗಾಗಿ ಸದಸ್ಯರಿಗೆ ಸ್ಪಷ್ಟವಾಗಿ ತಿಳಿಯಪಡಿಸಿ ಸಂಗ್ರಹಿಸಿದ ಠೇವಣಿಗಳಿಗೆ ಈ ನಿಯಮದಿಂದ ವಿನಾಯಿತಿ ಇರುತ್ತದೆ.

## ಸಿ. ಬಡ್ಡಿದರ, ಠೇವಣಿ ಸ್ವೀಕೃತಿ ಕುರಿತಂತೆ ಮಾರ್ಗದರ್ಶಿಗಳು

1. ಯಾವುದೇ ಸಹಕಾರಿಯು ನಾಮಮಾತ್ರ ಸದಸ್ಯರಿಂದ ಹಾಗೂ ಸದಸ್ಯೇತರರಿಂದ ಠೇವಣಿಯನ್ನು ಸಂಗ್ರಹಿಸಲು ಅವಕಾಶವಿಲ್ಲ ಹಾಗೂ ಠೇವಣಿ ಸಂಗ್ರಹದ ಉದ್ದೇಶಕ್ಕಾಗಿ ಸದಸ್ಯರಲ್ಲಿ ಆಂತರಿಕ ಪ್ರಸಾರ ಹೊರತುಪಡಿಸಿ ಯಾವುದೇ ಸ್ವರೂಪದ ಜಾಹೀರಾತುಗಳನ್ನು ನೀಡತಕ್ಕದ್ದಲ್ಲ.
2. ಯಾವುದೇ ಓರ್ವ ಸದಸ್ಯ, ಓರ್ವ ಸದಸ್ಯನ ಕುಟುಂಬ, ಸದಸ್ಯನ ಹಾಗೂ ಸದಸ್ಯನ ಕುಟುಂಬದ ಮಾಲೀಕತ್ವದಲ್ಲಿರುವ ಸಂಸ್ಥೆಗಳು ಸೇರಿದಂತೆ ಸ್ವೀಕರಿಸಬಹುದಾದ ಒಟ್ಟು ಠೇವಣಿಯು, ಸಹಕಾರಿಯ ದುಡಿಯುವ ಬಂಡವಾಳದ ಶೇ.10ನ್ನು ಮೀರುವಂತಿಲ್ಲ.

   - ಸದಸ್ಯನಿಗೆ ಸಂಬಂಧಿಸಿದಂತೆ "ಕುಟುಂಬ" ಎಂದರೆ ಸದಸ್ಯನ/ಳ ಗಂಡ/ಹೆಂಡತಿ, ಮತ್ತು ಅವನ/ಳ ಅವಲಂಬಿತ ಮಕ್ಕಳು, ಅವಲಂಬಿತ ತಂದೆ ಮತ್ತು ತಾಯಿ, ಅವಲಂಬಿತ ಸಹೋದರ/ಸಹೋದರಿಯರನ್ನು ಒಳಗೊಳ್ಳುತ್ತದೆ.
3. ಪಿಗ್ಮಿ ಠೇವಣಿ ಹೊರತುಪಡಿಸಿ, ಯಾವುದೇ ಅವಧಿ ಠೇವಣಿಗಳ ಸಂಗ್ರಹಕ್ಕಾಗಿ ಏಜೆಂಟರುಗಳನ್ನು ನೇಮಕ ಮಾಡತಕ್ಕದ್ದಲ್ಲ ಹಾಗೂ ಠೇವಣಿ ಸಂಗ್ರಹಿಸಲು ಕಮೀಷನ್/ಇನ್ಸೆಂಟೀವ್/ಗಿಫ್ಟ್/ಇನ್ನ್ಯಾವುದೇ ಸ್ವರೂಪದ ಆಮೀಷ ಒಡ್ಡತಕ್ಕದ್ದಲ್ಲ ಹಾಗೂ ವೆಚ್ಚ ಮಾಡತಕ್ಕದ್ದಲ್ಲ. ಪಿಗ್ಮಿ ಸಂಗ್ರಾಹಕರಿಗೆ ನೀಡುವ ಕಮಿಷನ್ ದರವು ಶೇ.3ನ್ನು ಮೀರತಕ್ಕದ್ದಲ್ಲ.
4. ಯಾವುದೇ ಸಹಕಾರಿಯು 5 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಯನ್ನು ಸ್ವೀಕರಿಸತಕ್ಕದ್ದಲ್ಲ.
5. ಯಾವುದೇ ಠೇವಣಿದಾರನು ಅವಧಿಗೆ ಮುಂಚಿತವಾಗಿ ಯಾವುದೇ ಅವಧಿ ಠೇವಣಿ ಮರುಪಾವತಿ ಕೋರಿದಲ್ಲಿ, ಸದರಿ ಠೇವಣಿಯ ಮರುಪಾವತಿ ಪೂರ್ವದ ಒಟ್ಟು ಅವಧಿಗೆ ಅನ್ವಯವಾಗುವ ಬಡ್ಡಿದರದಲ್ಲಿ ಗರಿಷ್ಠ ಶೇ.2ನ್ನು ಕಡಿತಗೊಳಿಸಬಹುದು. ಯಾವುದೇ ಕಾರಣಕ್ಕೂ ಠೇವಣಿಯ ಅಸಲನ್ನು ಕಡಿತಗೊಳಿಸತಕ್ಕದ್ದಲ್ಲ. ಪರಂತು, ಮೇಲಿನ ಲೆಕ್ಕಾಚಾರದನುಸಾರ ಪಾವತಿ ಮಾಡಬೇಕಾದ ಬಡ್ಡಿಗಿಂತ ಹೆಚ್ಚುವರಿ ಮೊತ್ತವನ್ನು ಈಗಾಗಲೇ ಪಾವತಿಸಿದ್ದಲ್ಲಿ ಅದನ್ನು ಹಿಂಪಡೆಯಬಹುದು. ಆದರೆ ಈ ನಿಯಮ ಪಿಗ್ಮಿ ಠೇವಣಿಗೆ ಅನ್ವಯವಾಗತಕ್ಕದ್ದಲ್ಲ.
6. ಈ ಸುತ್ತೋಲೆಗೆ ಸಂಬಂಧಿಸಿದಂತೆ ದುಡಿಯುವ ಬಂಡವಾಳ ಎಂದರೆ ಹಿಂದಿನ ತ್ರೈಮಾಸಿಕದ ಅಂತ್ಯಕ್ಕೆ ಇರುವ ದುಡಿಯುವ ಬಂಡವಾಳ.

## ಡಿ. ನಿವ್ವಳ ಲಾಭ ಗುರುತಿಸುವಿಕೆ.

1. ಸಹಕಾರಿಯ ನಿವ್ವಳ ಲಾಭವನ್ನು ಈ ಕೆಳಗಿನಂತೆ ಲೆಕ್ಕಾಚಾರ ಮಾಡತಕ್ಕದ್ದು -
   1. ಠೇವಣಿಗೆ ಪಾವತಿಸಬೇಕಾದ ಬಡ್ಡಿಗೆ ಪೂರ್ಣ ಪ್ರಮಾಣದಲ್ಲಿ ಪ್ರಾವಧಾನ ಮಾಡಿರತಕ್ಕದ್ದು.
   2. ಎಲ್ಲಾ ರೀತಿಯ ಸ್ಥಿರಾಸ್ತಿಗಳಿಗೆ ಆದಾಯ ತೆರಿಗೆ ಕಾಯ್ದೆಯನ್ವಯ ಸವಕಳಿಯನ್ನು ಲೆಕ್ಕಾಚಾರ ಮಾಡಿ ವೆಚ್ಚದ ಬಾಬ್ತಿಗೆ ಸೇರಿಸತಕ್ಕದ್ದು.

3. ಆರ್ಥಿಕ ವರ್ಷದಲ್ಲಿ ವೆಚ್ಚವಾಗಿರುವ ಆದರೆ ಪಾವತಿ ಮಾಡಿರದ ಪ್ರಕರಣಗಳಿಗೆ ಹಾಗೂ ಸದರಿ ಆರ್ಥಿಕ ವರ್ಷದ ಲೆಕ್ಕಪರಿಶೋಧನಾ ವೆಚ್ಚಕ್ಕೆ ಅಗತ್ಯ ಪ್ರಾವಧಾನ ಮಾಡತಕ್ಕದ್ದು.
4. ಬಾಡಿಗೆ, ವೇತನ, ವಿಮೆ ಸೇರಿದಂತೆ ಪಾವತಿಯಾಗಿರದ ಎಲ್ಲ ಆಡಳಿತಾತ್ಮಕ ವೆಚ್ಚಗಳಿಗೆ ಅಗತ್ಯ ಪ್ರಾವಧಾನ ಕಲ್ಪಿಸತಕ್ಕದ್ದು.
5. ಯಾವುದೇ ಶಾಸನಾತ್ಮಕ ಪಾವತಿಗಳಿಗೆ ಸಂಬಂಧಿಸಿದಂತೆ ಅಗತ್ಯ ಪ್ರಾವಧಾನ ಕಲ್ಪಿಸತಕ್ಕದ್ದು.
6. ನೀಡಿರುವ ಸಾಲಗಳಿಗೆ ಸಂಬಂಧಿಸಿದಂತೆ, ಸ್ವೀಕೃತವಾದ ಬಡ್ಡಿಯನ್ನು ಮಾತ್ರ ಆದಾಯಕ್ಕೆ ಪರಿಗಣಿಸತಕ್ಕದ್ದು.

**ಇ. ಲಾಭಾಂಶ ವಿಲೇವಾರಿ**

1. ಸೌಹಾರ್ದ ಸಹಕಾರಿ ಕಾಯ್ದೆ ಕಲಂ 10(2)(xxi) ರಡಿ ನಿಧಿಗಳಿಗೆ ನಿವ್ವಳ ಲಾಭ ವಿಲೇವಾರಿ ಮಾಡುವಾಗ ನೇರ ಪದ್ಧತಿಯಲ್ಲಿಯೇ (Straight Line Method) ಲಾಭ ಹಂಚಿಕೆ ಮಾಡತಕ್ಕದ್ದು.
2. ನಿವ್ವಳ ಲಾಭದ ಶೇ.2 ರಷ್ಟು ಶಿಕ್ಷಣ ನಿಧಿಯನ್ನು, ಸಾಮಾನ್ಯ ಸಭೆ ನಡೆದ ದಿನಾಂಕದಿಂದ 30 ದಿನಗಳೊಳಗೆ ಸಂಯುಕ್ತ ಸಹಕಾರಿಗೆ ಪಾವತಿಸತಕ್ಕದ್ದು, ಶಿಕ್ಷಣ ನಿಧಿಗೆ ಪಾವತಿ ಮಾಡದೇ ಸದಸ್ಯರಿಗೆ ಲಾಭಾಂಶ (ಡಿವಿಡೆಂಡ್) ಸಂದಾಯ ಮಾಡತಕ್ಕದ್ದಲ್ಲ.
3. ಉಪವಿಧಿ/ಸಾಮಾನ್ಯ ಸಭೆಯಲ್ಲಿ ಇನ್ನಾವುದೇ ನಿಧಿಗಳನ್ನು ರಚಿಸುವ ಸಂದರ್ಭದಲ್ಲಿ, ನಿಧಿಯ ರಚನೆಯ ಉದ್ದೇಶ, ಶೇಕಡಾವಾರು ಹಂಚಿಕೆಯ ಪ್ರಮಾಣ, ನಿಧಿಯ ಅವಧಿ ಹಾಗೂ ನಿಧಿಯ ಬಳಕೆಯ ಬಗ್ಗೆ ಸ್ಪಷ್ಟ ನಿಯಮಗಳನ್ನು ರೂಪಿಸಿಕೊಳ್ಳತಕ್ಕದ್ದು.

**ಎಫ್. ಹೂಡಿಕೆ ಕುರಿತ ಮಾರ್ಗಸೂಚಿ :**

1. ಸೌಹಾರ್ದ ಸಹಕಾರಿಗಳು ತಕ್ಷಣದ ಬಳಕೆಗೆ ಅಗತ್ಯವಿರದ ನಿಧಿಗಳನ್ನು ಹಾಗೂ ಮೀಸಲು ನಿಧಿಯನ್ನು ಸೌಹಾರ್ದ ಸಹಕಾರಿ ಕಾಯ್ದೆ ಕಲಂ.18 ರಂತೆ, ಸರ್ಕಾರದಿಂದ ಅನುಮೋದಿತವಾದ ಭದ್ರತೆಗಳಲ್ಲಿ ಅಥವಾ ಸಹಕಾರಿ ಬ್ಯಾಂಕು ಅಥವಾ ಅನುಸೂಚಿತ ಬ್ಯಾಂಕ್‌ನಲ್ಲಿ ಮಾತ್ರ ಹೂಡಿಕೆ ಮಾಡತಕ್ಕದ್ದು.
2. ಸಹಕಾರಿಗಳು ಹೆಚ್ಚಿನ ಮೊತ್ತವನ್ನು ಒಂದೇ ಬ್ಯಾಂಕ್/ಸರ್ಕಾರಿ ಭದ್ರತೆಯಲ್ಲಿ ಹೂಡಿಕೆ ಮಾಡುವ ಬದಲು ಬೇರೆ ಬೇರೆ ಬ್ಯಾಂಕ್/ಸರ್ಕಾರಿ ಭದ್ರತೆಗಳಲ್ಲಿ ಒಟ್ಟು ಹೂಡಿಕೆಯ ಶೇ.20 ಕ್ಕಿಂತ ಕಡಿಮೆ ಮೊತ್ತವನ್ನು ಪ್ರತ್ಯೇಕವಾಗಿ ಹೂಡಿಕೆ ಮಾಡುವುದು ಸೂಕ್ತವಾಗಿರುತ್ತದೆ. ಹೂಡಿಕೆಯ ಬಗ್ಗೆ ಸೂಕ್ತ ನಿಯಮಗಳನ್ನು ಆಡಳಿತ ಮಂಡಲಿಯು ರಚಿಸಿಕೊಂಡು ಸಾಮಾನ್ಯ ಸಭೆಯ ಅನುಮೋದನೆ ಪಡೆದುಕೊಳ್ಳತಕ್ಕದ್ದು.
3. ಸೌಹಾರ್ದ ಸಹಕಾರಿಗಳು ಪ್ರಾಥಮಿಕ ಸಹಕಾರಿ/ಸಹಕಾರ ಸಂಘ/ಸಕ್ಕರೆ ಕಾರ್ಖಾನೆ ಸೇರಿದಂತೆ ಅಂತಹ ಯಾವುದೇ ಸಂಸ್ಥೆಗಳಲ್ಲಿ ಹೂಡಿಕೆ ಮಾಡತಕ್ಕದ್ದಲ್ಲ.
4. ಸೌಹಾರ್ದ ಸಹಕಾರಿಗಳು ಶೇರು ಮಾರುಕಟ್ಟೆ/ಮ್ಯೂಚುವಲ್ ಫಂಡ್/ಬಿಟ್ ಕಾಯಿನ್/ಕ್ರಿಪ್ಟೋ ಕರೆನ್ಸಿ/ಯುಲಿಪ್ ಲಿಂಕ್ಡ್ ಸೇರಿದಂತೆ, ಅಸಲು ಮತ್ತು ನಿಶ್ಚಿತ ಬಡ್ಡಿಗೆ ಖಾತರಿ ಇಲ್ಲದ ಯೋಜನೆಗಳಲ್ಲಿ ಹೂಡಿಕೆ ಮಾಡತಕ್ಕದ್ದಲ್ಲ.
5. ಸೌಹಾರ್ದ ಸಹಕಾರಿಗಳ ಹೂಡಿಕೆಯಿಂದ ಆದಾಯ ಅಥವಾ ನಷ್ಟ ಉಂಟಾದಲ್ಲಿ ಅದನ್ನು ಆದಾಯ/ವೆಚ್ಚ ತಃಖ್ತೆಯಲ್ಲಿ ಪ್ರತ್ಯೇಕವಾಗಿ ತೋರಿಸತಕ್ಕದ್ದು.

**ಜಿ. ಸಾಲದ ಕುರಿತು ಮಾನದಂಡಗಳು :**

1. ಓರ್ವ ಸದಸ್ಯನಿಗೆ ನೀಡುವ ಸಾಲದ ಒಟ್ಟು ಮೊತ್ತವು ಸಹಕಾರಿಯ ಒಟ್ಟು ದುಡಿಯುವ ಬಂಡವಾಳದ ಶೇಕಡಾ 5 ಅನ್ನು ದಾಟುವಂತಿಲ್ಲ.
2. ಸಹಕಾರಿಯ ನಿರ್ದೇಶಕರು ಹಾಗೂ ಅವರ ಸಂಬಂಧಿಕರಿಗೆ ನೀಡಿದ ಸಾಲದ ಒಟ್ಟು ಮೊತ್ತವು ಸಹಕಾರಿಯ ದುಡಿಯುವ ಬಂಡವಾಳದ ಶೇಕಡಾ 10 ಅನ್ನು ದಾಟುವಂತಿಲ್ಲ.

- 'ಸಂಬಂಧಿ' ಎಂದರೆ ಗಂಡ/ಹೆಂಡತಿ, ಸಹೋದರ ಮತ್ತು ಸಹೋದರಿ, ಸಹೋದರ/ಸಹೋದರಿಯ ಗಂಡ/ಹೆಂಡತಿ, ತಂದೆ ಮತ್ತು ತಾಯಿ, ಮಕ್ಕಳು ಮತ್ತು ಮೊಮ್ಮಕ್ಕಳು ಇವರನ್ನೆಲ್ಲ ಒಳಗೊಂಡಿರುತ್ತದೆ.

3. ಏಕ ಮಾಲೀಕತ್ವದ ಸಂಸ್ಥೆ ಹೊರತುಪಡಿಸಿ, ಸಹಕಾರಿಯ ನಿರ್ದೇಶಕರು ಪಾಲ್ಗೊಂಡಿರುವ ಸಂಸ್ಥೆಗಳಿಗೆ ಭದ್ರತಾ ಸಾಲವನ್ನು ನೀಡಬಹುದಾಗಿದ್ದು, ಇಂತಹ ಸಾಲದ ಒಟ್ಟು ಮೊತ್ತವು ಸಹಕಾರಿಯ ದುಡಿಯುವ ಬಂಡವಾಳದ ಶೇಕಡಾ 10ನ್ನು ಮೀರತಕ್ಕದ್ದಲ್ಲ.

4. ಸದಸ್ಯನು ಹೊಂದಿರುವ ಠೇವಣಿ ಅಥವಾ ಬಂಗಾರ ಅಡಮಾನ ಆಧಾರದ ಮೇಲೆ ನೀಡಿದ ಸಾಲವನ್ನು ಮೇಲಿನ ಮೂರು ಪ್ರಕರಣಗಳಿಗೆ ಪರಿಗಣಿಸತಕ್ಕದ್ದಲ್ಲ.
5. ಯಾವುದೇ ಸದಸ್ಯನು ಪಡೆದ ಅಥವಾ ಜಾಮೀನುದಾರನಾದ ಚಾಲ್ತಿ ಸಾಲ ಸುಸ್ತಿಯಾಗಿದ್ದಲ್ಲಿ ಅದೇ ವ್ಯಕ್ತಿಗೆ ಹೊಸ ಸಾಲ ನೀಡುವಂತಿಲ್ಲ.
6. ಠೇವಣಿ ಆಧಾರದ ಸಾಲ ನೀಡಿಕೆ ಸಂದರ್ಭದಲ್ಲಿ ಸಾಲದ ಮೊತ್ತವು, ಕ್ರೋಢೀಕೃತ ಬಡ್ಡಿಯನ್ನು ಸೇರಿದಂತೆ ಠೇವಣಿ ಮೊತ್ತದ (ಸರೆಂಡರ್ ವ್ಯಾಲ್ಯೂ) ಶೇಕಡಾ 90ನ್ನು ಮೀರುವಂತಿಲ್ಲ. ಯಾವುದೇ ಹಂತದಲ್ಲಿ ಸಾಲ ಮತ್ತು ಸಾಲದ ಬಡ್ಡಿಯ ಮೊತ್ತವು ಠೇವಣಿ ಮೊತ್ತವನ್ನು (ಸರೆಂಡರ್ ವ್ಯಾಲ್ಯೂ) ಮೀರುತ್ತಿದ್ದಲ್ಲಿ, ತಕ್ಷಣ ಅಂತಹ ಸಾಲವನ್ನು ಅಗತ್ಯ ಪ್ರಕ್ರಿಯೆ ಮೂಲಕ ಠೇವಣಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ಮುಕ್ತಾಯಗೊಳಿಸತಕ್ಕದ್ದು.
7. ಯಾವುದೇ ಸದಸ್ಯನಿಗೆ ನೀಡುವ ಆಧಾರ ರಹಿತ ಸಾಲದ ಗರಿಷ್ಠ ಮೊತ್ತವು, ಸಹಕಾರಿಯ ದುಡಿಯುವ ಬಂಡವಾಳ ಐವತ್ತು ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ ರೂ.50,000/- ಮೀರತಕ್ಕದ್ದಲ್ಲ ಹಾಗೂ ಸಹಕಾರಿಯ ಸ್ವಂತ ಬಂಡವಾಳ ಐವತ್ತು ಲಕ್ಷ ಮೀರಿದ್ದಲ್ಲಿ ಸಹಕಾರಿಯ ಸ್ವಂತ ಬಂಡವಾಳದ ಶೇ.1 ಅಥವಾ ರೂ.2,00,000/- ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಮೀರುವಂತಿಲ್ಲ.

   ಪರಂತು, ಸಂಪೂರ್ಣವಾಗಿ ವೇತನ ಆಧಾರಿತ ಸಾಲ ನೀಡುತ್ತಿರುವ ನೌಕರರ ಸೌಹಾರ್ದ ಸಹಕಾರಿಗಳಿಗೆ ಈ ನಿಯಮ ಅನ್ವಯವಾಗತಕ್ಕದ್ದಲ್ಲ.
8. ಆಧಾರ ರಹಿತ ಸಾಲ ನೀಡುವಾಗ ಕನಿಷ್ಠ ಇಬ್ಬರ ಜಾಮೀನಿನೊಂದಿಗೆ ಸಾಲ ನೀಡತಕ್ಕದ್ದು, ಯಾವುದೇ ಸದಸ್ಯನು ಮೂರಕ್ಕಿಂತ ಹೆಚ್ಚಿನ ಸದಸ್ಯರಿಗೆ ಜಾಮೀನು ನೀಡುವಂತಿಲ್ಲ.

**ಹೆಚ್. ಆರ್ಥಿಕ ಸಂಕಷ್ಟ ಎಂದು ಪರಿಗಣನೆ :**

1. ಸಹಕಾರಿಯ ಕ್ರೋಢೀಕೃತ ನಷ್ಟವು ಯಾವುದೇ ಹಂತದಲ್ಲಿ ಸಹಕಾರಿಯ ಸ್ವಂತ ಬಂಡವಾಳದ ಶೇಕಡಾ 50 ಕ್ಕಿಂತ ಹೆಚ್ಚಾದಲ್ಲಿ.

   ವಿವರಣೆ : 'ಸ್ವಂತ ಬಂಡವಾಳ' ಎಂದರೆ ಪಾವತಿಯಾದ ಒಟ್ಟು ಶೇರು ಬಂಡವಾಳ ಹಾಗೂ ಎಲ್ಲಾ ಮೀಸಲು ನಿಧಿಗಳ ಮೊತ್ತದಲ್ಲಿ ಸಂಚಿತ ನಷ್ಟವನ್ನು ಕಳೆದಾಗ ಬರುವ ಮೊತ್ತ.
2. ಸಹಕಾರಿಯ ಒಟ್ಟು ಠೇವಣಿಗಳ ಶೇಕಡಾ 5 ಕ್ಕಿಂತ ಕಡಿಮೆ ದ್ರವ್ಯಾಸ್ತಿ ಇರುವ ಸಹಕಾರಿ.
3. ಸಹಕಾರಿಯ ಸುಸ್ತಿ ಸಾಲದ ಪ್ರಮಾಣವು ಒಟ್ಟು ಸಾಲಕ್ಕೆ ಶೇಕಡಾ 20 ದಾಟಿದಲ್ಲಿ.

ಅಂತಹ ಸಹಕಾರಿಗಳನ್ನು ಆರ್ಥಿಕ ಸಂಕ ಷ್ಟದಲ್ಲಿರುವ ಸಹಕಾರಿಗಳೆಂದು ಪರಿಗಣಿಸಲಾಗುವುದು.

ಈ ಸಹಕಾರಿಗಳು, ಆರ್ಥಿಕವಾಗಿ ಸಬಲರಾಗುವ ಕುರಿತು ಸೂಕ್ತ ಯೋಜನೆಯನ್ನು ರೂಪಿಸಿ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು. ಸದರಿ ಯೋಜನೆಗಳು ಸರಿಯಾಗಿ ಜಾರಿಯಾಗುತ್ತಿರುವುದನ್ನು ಸಹಕಾರಿಯ ಮಂಡಲಿ ಅಥವಾ ಮಂಡಲಿಯಿಂದ ರಚಿತವಾದ ಉಪಸಮಿತಿಯು ಪ್ರತಿ 3 ತಿಂಗಳಿಗೊಮ್ಮೆ ಪರಿಶೀಲಿಸತಕ್ಕದ್ದು ಹಾಗೂ ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸತಕ್ಕದ್ದು.

**ಐ. ತೀವ್ರ ನಿಗಾ ಇರಿಸಲಾಗುವ ಸಹಕಾರಿಗಳು :**

1. ಸಹಕಾರಿಯ ನೋಂದಣಿಯ ನಂತರದ ಮೂರು ಸಹಕಾರ ವರ್ಷಗಳ ಅವಧಿಯನ್ನು ಹೊರತುಪಡಿಸಿ, ಸತತ ಮೂರು ವರ್ಷಗಳು ನಷ್ಟದಲ್ಲಿರುವ ಸಹಕಾರಿ
2. ಸಹಕಾರಿಯ ಕ್ರೋಢೀಕೃತ ನಷ್ಟವು ಯಾವುದೇ ಹಂತದಲ್ಲಿ ಸಹಕಾರಿಯ ಸ್ವಂತ ಬಂಡವಾಳಕ್ಕಿಂತ ಹೆಚ್ಚಾದಲ್ಲಿ.
3. ಆರ್ಥಿಕ ಸಂಕಷ್ಟದಲ್ಲಿರುವ ಸಹಕಾರಿಯು ಸತತ ಮೂರು ವರ್ಷಗಳು ಅದೇ ಸ್ಥಿತಿಯಲ್ಲಿ ಇದ್ದಲ್ಲಿ.
4. ಸಹಕಾರಿಯ ಸುಸ್ತಿ ಸಾಲದ ಪ್ರಮಾಣವು ಶೇಕಡಾ 40 ದಾಟಿದಲ್ಲಿ.

ಅಂತಹ ಸಹಕಾರಿಗಳನ್ನು ತೀವ್ರ ನಿಗಾದಲ್ಲಿರುವ ಸಹಕಾರಿಗಳೆಂದು ಪರಿಗಣಿಸಲಾಗುವುದು.

ಈ ಸಹಕಾರಿಗಳು, ತೀವ್ರ ನಿಗಾದಿಂದ ಹೊರಬರುವ ಕುರಿತು ಸೂಕ್ತ ಯೋಜನೆಯನ್ನು ರೂಪಿಸಿ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು. ಸದರಿ ಯೋಜನೆಗಳು ಸರಿಯಾಗಿ ಜಾರಿಯಾಗುತ್ತಿರುವುದನ್ನು ಸಹಕಾರಿಯ ಮಂಡಲಿ ಅಥವಾ ಮಂಡಲಿಯಿಂದ ರಚಿತವಾದ ಉಪಸಮಿತಿಯು ಪ್ರತಿ ತಿಂಗಳಿಗೊಮ್ಮೆ ಪರಿಶೀಲಿಸತಕ್ಕದ್ದು ಹಾಗೂ ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸತಕ್ಕದ್ದು.

- ನೂತನವಾಗಿ ನೋಂದಾಯಿತವಾದ ಸಹಕಾರಿಗಳ ಸಂದರ್ಭದಲ್ಲಿ ಮೊದಲ ಎರಡು ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಮೇಲ್ಕಂಡ ಹೆಚ್ ಹಾಗೂ ಐ ಕಂಡಿಕೆಗಳು ಅನ್ವಯವಾಗತಕ್ಕದ್ದಲ್ಲ.

**ಜೆ. ದುರ್ಬಲ ಸಹಕಾರಿ**

1. ಅ. ನೂತನ ಸಹಕಾರಿಯು ಐದನೇ ಆರ್ಥಿಕ ವರ್ಷಾಂತ್ಯಕ್ಕೆ ಲಾಭ ಗಳಿಸದಿದ್ದಲ್ಲಿ.

ಆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರಲ್ಲಿ ಚಟುವಟಿಕೆಯನ್ನು ನಡೆಸಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರಡಿ ಪರಿವರ್ತಿತಗೊಂಡ ಯಾವುದೇ ಸಹಕಾರಿಯು ಪರಿವರ್ತನೆಯ ನಂತರ ಸತತ ಮೂರು ವರ್ಷ ನಷ್ಟವನ್ನು ಅನುಭವಿಸಿದಲ್ಲಿ.

ಇ. ತೀವ್ರ ನಿಗಾದಲ್ಲಿರುವ ಸಹಕಾರಿಯು ಸತತ ಎರಡು ವರ್ಷಗಳು ಅದೇ ಸ್ಥಿತಿಯಲ್ಲಿ ಇದ್ದಲ್ಲಿ.

ಈ. ಸಹಕಾರಿಯ ಸುಸ್ತಿ ಸಾಲದ ಪ್ರಮಾಣವು ಶೇಕಡಾ 60 ದಾಟಿದಲ್ಲಿ.

- ಅಂತಹ ಸಹಕಾರಿಗಳನ್ನು ದುರ್ಬಲದಲ್ಲಿರುವ ಸಹಕಾರಿಗಳೆಂದು ಪರಿಗಣಿಸಲಾಗುವುದು.

ದುರ್ಬಲ ಸಹಕಾರಿಗಳು ದುರ್ಬಲತೆಯಿಂದ ಹೊರಬರಲು ಸೂಕ್ತ ಯೋಜನೆಯನ್ನು ರೂಪಿಸಿ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು. ಸದರಿ ಯೋಜನೆಗಳು ಸರಿಯಾಗಿ ಜಾರಿಯಾಗುತ್ತಿರುವುದನ್ನು ಸಹಕಾರಿಯ ಮಂಡಲಿ ಅಥವಾ ಮಂಡಲಿಯಿಂದ ರಚಿತವಾದ ಉಪಸಮಿತಿಯು ಪ್ರತಿ ತಿಂಗಳಿಗೊಮ್ಮೆ ಪರಿಶೀಲಿಸತಕ್ಕದ್ದು ಹಾಗೂ ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸತಕ್ಕದ್ದು.

**ಕೆ. ಇತರೆ ಅಂಶಗಳು :**

1. ಸಹಕಾರಿಯು ಲಾಭ ಗಳಿಸಿದಾಗ ಸದಸ್ಯರಿಗೆ ನೀಡುವ ಲಾಭಾಂಶವು, ಶೇಕಡಾ 25ನ್ನು ಮೀರುವಂತಿಲ್ಲ.
2. ಸಹಕಾರಿಯ ನೋಂದಣಿಯಾಗಿ ಮೊದಲ ಮೂರು ಸಹಕಾರ ವರ್ಷಗಳನ್ನು ಹೊರತುಪಡಿಸಿ ನಂತರದ ಸಹಕಾರ ವರ್ಷಗಳಲ್ಲಿ ಸಹಕಾರಿಯ ಒಟ್ಟು ಆಡಳಿತಾತ್ಮಕ ವೆಚ್ಚವು ದುಡಿಯುವ ಬಂಡವಾಳದ ಶೇ.3 ಅನ್ನು ದಾಟುವಂತಿಲ್ಲ.
3. ಸಹಕಾರಿಯು ಯಾವುದೇ ರೂಪದಲ್ಲಿ ನೀಡುವ ದೇಣಿಗೆಯ ಮೊತ್ತವು ಸಹಕಾರಿಯು ಹಿಂದಿನ ಆರ್ಥಿಕ ವರ್ಷದಲ್ಲಿ ಗಳಿಸಿದ ನಿವ್ವಳ ಲಾಭದ ಶೇ.10ನ್ನು ಮೀರತಕ್ಕದ್ದಲ್ಲ. ಪರಂತು, ಸಹಕಾರಿಯ ಲಾಭ ವಿಂಗಡಣೆಗಾಗಿ ದೇಣಿಗೆ ಉದ್ದೇಶಕ್ಕಾಗಿ ರಚಿಸಲ್ಪಟ್ಟ ನಿಧಿಯಿಂದ ಮಾಡುವ ಪಾವತಿಗಳಿಗೆ ಇದರಿಂದ ವಿನಾಯಿತಿ ಇರುತ್ತದೆ.
4. ಸಹಕಾರಿಯು ಯಾವುದೇ ರಾಜಕೀಯ ಪಕ್ಷಕ್ಕೆ, ಮತೀಯ ನಂಬಿಕೆಯ ಸಂಸ್ಥೆಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ನಗದು ಅಥವಾ ವಸ್ತುಗಳ ರೂಪದಲ್ಲಿ ಯಾವುದೇ ವಂತಿಗೆ/ದೇಣಿಗೆಯನ್ನು ನೀಡತಕ್ಕದ್ದಲ್ಲ.
5. ಸಹಕಾರಿಗೆ ಸ್ಥಿರಾಸ್ತಿ(ನಿವೇಶನ/ಕಟ್ಟಡ) ಖರೀದಿಸುವುದಿದ್ದಲ್ಲಿ/ನಿರ್ಮಾಣ ಮಾಡುವುದಾದಲ್ಲಿ ಅದಕ್ಕಾಗಿ ಸಹಕಾರಿಯ ಕಟ್ಟಡ ನಿಧಿಯನ್ನು ಉಪಯೋಗಿಸಬೇಕು. ಅಗತ್ಯವಿದ್ದಲ್ಲಿ, ಮೀಸಲು ನಿಧಿಯ ಶೇಕಡಾ 80 ಅನ್ನು ಮೀರದ ಮೊತ್ತವನ್ನು ಸಾಮಾನ್ಯ ಸಭೆಯ ಅನುಮೋದನೆಯೊಡನೆ ಬಳಸಬಹುದು. ಈ ರೀತಿ ಬಳಸಿದಲ್ಲಿ, ಸದರಿ ಮೊತ್ತವನ್ನು ಮುಂದಿನ ವರ್ಷಗಳ ಲಾಭದಿಂದ ಭರ್ತಿ ಮಾಡತಕ್ಕದ್ದು. ಸಾಮಾನ್ಯ ಸಭೆಯಲ್ಲಿ, ಪ್ರತಿವರ್ಷ ನಿವ್ವಳ ಲಾಭದಲ್ಲಿ ಲಾಭಾಂಶ ವಿಂಗಡಣೆಗೂ ಪೂರ್ವದಲ್ಲಿ ಮೀಸಲು ನಿಧಿಗೆ ವರ್ಗಾಯಿಸಬೇಕಾದ ಮೊತ್ತದ ಕುರಿತು ಸ್ಪಷ್ಟವಾಗಿ ನಿರ್ಣಯಿಸಬೇಕು.
6. ಸೌಹಾರ್ದ ಸಹಕಾರಿಗಳು, ಪ್ರತಿ ಸದಸ್ಯರ ಸದಸ್ಯತ್ವದ ಅರ್ಜಿಯೊಂದಿಗೆ ಕೆವೈಸಿ ದಾಖಲಾತಿಗಳನ್ನು ಅಂದರೆ ವಿಳಾಸದ ದಾಖಲೆ, ಇತ್ತೀಚಿನ ಫೋಟೋ, ಫೋಟೋ ಇರುವ ಗುರುತಿನ ಚೀಟಿಯ ಪ್ರತಿಯನ್ನು ಪಡೆಯತಕ್ಕದ್ದು ಹಾಗೂ ನಿಯಮಿತವಾಗಿ ಇಂದೀಕರಿಸಿಕೊಳ್ಳತಕ್ಕದ್ದು. ಪ್ಯಾನ್ ಹಾಗೂ ಆಧಾರ್ ಸಂಖ್ಯೆಯನ್ನು ಹೊಂದಿರತಕ್ಕದ್ದು.

- ಈ ಸುತ್ತೋಲೆಗೆ ಸಂಬಂಧಪಟ್ಟಂತೆ, ಯಾವುದೇ ವರ್ಗದ ಸಹಕಾರಿಗಳಿಗೆ ಅಥವಾ ಯಾವುದೇ ಸಹಕಾರಿಗೆ ಸಂಬಂಧಿಸಿದಂತೆ, ಲಿಖಿತದಲ್ಲಿ ಸೂಕ್ತ ಕಾರಣವನ್ನು ದಾಖಲಿಸಿ, ಸುತ್ತೋಲೆಯ ಯಾವುದೇ ಅಂಶಗಳಿಂದ ವಿನಾಯಿತಿ ನೀಡಲು ಅಥವಾ ಅಂಶಗಳನ್ನು ಮಾರ್ಪಡಿಸಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಸಕ್ಷಮವಾಗಿರುತ್ತದೆ.
- ಈ ಸುತ್ತೋಲೆಯು ಪತ್ತಿನ ಚಟುವಟಿಕೆ ನಡೆಸುತ್ತಿರುವ ಬ್ಯಾಂಕೇತರ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಅನ್ವಯವಾಗುತ್ತದೆ. ಪತ್ತಿನ ಚಟುವಟಿಕೆಗಳೊಂದಿಗೆ ಇನ್ನಿತರ ಪತ್ತೇತರ ಚಟುವಟಿಕೆ ನಡೆಸುತ್ತಿರುವ ಸಹಕಾರಿಗಳ ಸಂದರ್ಭದಲ್ಲಿ ಪತ್ತಿನ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಈ ಸುತ್ತೋಲೆಯು

ಅನ್ವಯವಾಗುತ್ತದೆ. ಪರಂತು, ಪತ್ತಿನ ಹಾಗೂ ಪತ್ತೇತರ ಚಟುವಟಿಕೆಗಳ ಲೆಕ್ಕಗಳನ್ನು/ಹಣಕಾಸು ವಿವರಗಳನ್ನು ಪ್ರತ್ಯೇಕವಾಗಿ ನಿರ್ವಹಿಸತಕ್ಕದ್ದು.

- ಸಂಯುಕ್ತ ಸಹಕಾರಿಯಿಂದ ನೀಡಿದ ಸುತ್ತೋಲೆಗಳು ಮತ್ತು ಮಾರ್ಗಸೂಚಿಗಳನ್ನು ಉಲ್ಲಂಘಿಸಿದಲ್ಲಿ ಅಥವಾ ಈ ಮಾನದಂಡಗಳನ್ನು ಪಾಲಿಸದಿದ್ದಲ್ಲಿ ಅಂತಹ ಸಹಕಾರಿಗಳಿಗೆ ಮೊದಲನೇ ಹಂತದಲ್ಲಿ ಸಂಯುಕ್ತ ಸಹಕಾರಿಯಿಂದ ಅಗತ್ಯ ನಿರ್ದೇಶನ ನೀಡತಕ್ಕದ್ದು ಹಾಗೂ ನಿರ್ದೇಶನವನ್ನು ಪಾಲಿಸದಿದ್ದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯನುಸಾರ ಕಾನೂನು ಕ್ರಮ ಅನ್ವಯವಾಗತಕ್ಕದ್ದು.
- ಈ ಹಿಂದೆ ನೀಡಿದ್ದ – ದ್ರವ್ಯಾಸ್ತಿ ನಿರ್ವಹಣಾ ಮಾರ್ಗಸೂಚಿ, ಲಾಭಾಂಶ ವಿಲೇವಾರಿ ಮಾರ್ಗಸೂಚಿ, ನಿಧಿಗಳ ಹೂಡಿಕೆ ಕುರಿತ ಮಾರ್ಗಸೂಚಿ, ಪತ್ತಿನ ಸಹಕಾರಿಗಳ ಆರ್ಥಿಕ ಸಬಲತೆ ಮಾನದಂಡಗಳು - ಈ ಸುತ್ತೋಲೆಗಳಲ್ಲಿನ ಅಂಶಗಳನ್ನು ಅಗತ್ಯ ಬದಲಾವಣೆಗಳೊಂದಿಗೆ ಈ ಸುತ್ತೋಲೆಯಲ್ಲಿ ಸೇರ್ಪಡೆ ಮಾಡಲಾಗಿರುವುದರಿಂದ, ಸದರಿ ಸುತ್ತೋಲೆಗಳನ್ನು ಹಿಂಪಡೆಯಲಾಗಿದೆ.

ಈ ಆರ್ಥಿಕ ಸಬಲತೆಯ ಮಾನದಂಡಗಳನ್ನು ನನ್ನ ಸಹಿ ಮತ್ತು ಸಂಯುಕ್ತ ಸಹಕಾರಿಯ ಮೊಹರಿನೊಂದಿಗೆ ದಿನಾಂಕ ***** ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ.

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

* * * * * * * * *

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**

ಶಾಸನಬದ್ಧ ಸಹಕಾರಿ ಸಂಸ್ಥೆ
ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು–560055, Ph : 080-23378375-80, website : www.souharda.coop
Email : souharda@souharda.coop

## ಪೀಠಿಕೆ

ಸೌಹಾರ್ದ ಸಹಕಾರ ಕ್ಷೇತ್ರದಲ್ಲಿನ ಅನಿಯಮಿತ ಬಡ್ಡಿದರ ಹಾಗೂ ಗುಣಮಟ್ಟದ ಹಣಕಾಸು ನಿರ್ವಹಣೆಯ ಉದ್ದೇಶಕ್ಕಲ್ಲದೇ ಠೇವಣಿ ಸಂಗ್ರಹಿಸುವ ಉದ್ದೇಶದಿಂದ ನಿಗದಿಪಡಿಸುತ್ತಿರುವ ಬಡ್ಡಿದರಗಳಿಂದ ಹೆಚ್ಚಿನ ಠೇವಣಿ ಸಂಗ್ರಹಿಸಿ, ಅಂತಹ ಠೇವಣಿಗಳನ್ನು ಸಮರ್ಪಕವಾಗಿ ದುಡಿಸಿಕೊಳ್ಳದೇ ಠೇವಣಿದಾರರಿಗೆ ಹಣ ಹಿಂತಿರುಗಿಸಲಾಗದ ಪ್ರಕರಣಗಳು ಹೆಚ್ಚುತ್ತಿರುವುದರ ಕುರಿತು ರಾಜ್ಯ ಸರ್ಕಾರದ ಹಾಗೂ ಸಹಕಾರ ಇಲಾಖೆಯ ಹಂತದಲ್ಲಿ ಚರ್ಚೆಗಳು ನಡೆದಿರುತ್ತವೆ ಹಾಗೂ ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳ ಸಂಪರ್ಕ ಸಭೆಗಳಲ್ಲಿ ಕೂಡ ಸಂಯುಕ್ತ ಸಹಕಾರಿಯಿಂದ ಬಡ್ಡಿದರ ನಿಗದಿಪಡಿಸುವ ಬಗ್ಗೆ ಸಲಹೆಗಳು ಬಂದಿರುತ್ತವೆ. ಆದಕಾರಣದಿಂದ ಬಡ್ಡಿದರ ನಿಗದಿಪಡಿಸಿ ಸುತ್ತೋಲೆ ನೀಡುವ ಬಗ್ಗೆ ಸಂಯುಕ್ತ ಸಹಕಾರಿಯಲ್ಲಿ ಉಪಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ಸಭೆಗಳನ್ನು ಸೇರುವ ಮೂಲಕ ಚರ್ಚಿಸಿ, ಸಹಕಾರ ಇಲಾಖೆ ಹಾಗೂ ತಜ್ಞರ ಸಲಹೆ/ಅಭಿಪ್ರಾಯಗಳನ್ನು ಪಡೆದು, ಸ್ವೀಕೃತವಾದ ಸಲಹೆ/ಅಭಿಪ್ರಾಯ/ಆಕ್ಷೇಪಣೆಯನ್ನು ಪರಿಗಣಿಸಿ ದಿನಾಂಕ 31 ಮಾರ್ಚ್ 2023 ರಿಂದ ಜಾರಿಗೆ ಬರುವಂತೆ ಸುತ್ತೋಲೆ ನೀಡಲಾಗಿತ್ತು.

ಆ ನಂತರದಲ್ಲಿ, 2024 ರಲ್ಲಿ ರಾಜ್ಯ ಸರ್ಕಾರವು ಬಡ್ಡಿದರ ಕುರಿತು ಸುತ್ತೋಲೆ ನೀಡಿತ್ತು. ಅದಕ್ಕೆ ಪ್ರಸ್ತುತ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುತ್ತದೆ. ಆದಾಗ್ಯೂ ಸದರಿ ಸುತ್ತೋಲೆಯಲ್ಲಿನ ಕೆಲವು ಅಂಶಗಳು ಪ್ರಸ್ತುತವಾಗಿವೆ. ಈ ಹಿನ್ನಲೆಯಲ್ಲಿ ಸುತ್ತೋಲೆಯನ್ನು ಪರಿಷ್ಕರಿಸಿದ್ದು, ಈ ಕೆಳಗೆ ನೀಡಿದೆ.

## ಸೌಹಾರ್ದ ಸಹಕಾರಿಗಳು ಪಡೆಯುವ ಠೇವಣಿಗಳಿಗೆ ಮತ್ತು ವಿತರಿಸುವ ಸಾಲಗಳಿಗೆ ಬಡ್ಡಿದರ ನಿಗದಿಪಡಿಸುವ ಸುತ್ತೋಲೆ

ಕಾಯ್ದೆ ಕಲಂ.53(7)(ಎ) ಹಾಗೂ (ಹೆಚ್) ರಡಿಯ ಪ್ರಾವಧಾನದಂತೆ

ಸಂಖ್ಯೆ: ಸಂಸ/ಆಸು-xx/2025-26 ದಿನಾಂಕ: xx.xx.2025

1. ಯಾವುದೇ ಸೌಹಾರ್ದ ಸಹಕಾರಿಯು ಸದಸ್ಯೇತರರಿಂದ ಹಾಗೂ ನಾಮಮಾತ್ರ ಸದಸ್ಯರಿಂದ ಠೇವಣಿಯನ್ನು ಸಂಗ್ರಹಿಸತಕ್ಕದ್ದಲ್ಲ.
2. ಯಾವುದೇ ಸೌಹಾರ್ದ ಸಹಕಾರಿಯು ಠೇವಣಿಯನ್ನು ಪತ್ತೇತರ ಉದ್ದೇಶಕ್ಕಾಗಿ ವಿನಿಯೋಗಿಸತಕ್ಕದಲ್ಲ.

ಪರಂತು, ಪತ್ತೇತರ ಚಟುವಟಿಕೆ ನಡೆಸುವ ಸಹಕಾರಿಯು ನಿರ್ದಿಷ್ಟ ಉದ್ದೇಶಕ್ಕಾಗಿ, ಅವಧಿ ಪೂರ್ವ ಮರುಪಾವತಿಗೆ ಅವಕಾಶ ಇಲ್ಲದ, ನಿರ್ದಿಷ್ಟ ಅವಧಿಗಾಗಿ ಸದಸ್ಯರಿಗೆ ಸ್ಪಷ್ಟವಾಗಿ ತಿಳಿಯಪಡಿಸಿ ಸಂಗ್ರಹಿಸಿದ ಠೇವಣಿಗಳಿಗೆ ಈ ನಿಯಮದಿಂದ ವಿನಾಯಿತಿ ಇರುತ್ತದೆ.

3. ಸೌಹಾರ್ದ ಸಹಕಾರಿಯು ಸದಸ್ಯರ ಉಳಿತಾಯ ಖಾತೆಗೆ ನಿಗದಿಪಡಿಸುವ ಬಡ್ಡಿದರಗಳು ಶೇ.4ನ್ನು ಮೀರತಕ್ಕದ್ದಲ್ಲ.
4. ಅವಧಿ ಠೇವಣಿಗಳಿಗೆ ನೀಡುವ ಬಡ್ಡಿದರವು ಶೇ.10 ಮೀರತಕ್ಕದ್ದಲ್ಲ ಮತ್ತು ಮರುಕಳಿಸುವ ಠೇವಣಿ (RD)ಗಳಿಗೆ ನೀಡುವ ಬಡ್ಡಿದರವು ಶೇ.8 ಮೀರತಕ್ಕದ್ದಲ್ಲ. ಹಿರಿಯ ನಾಗರೀಕರು/ಅಂಗವಿಕಲರು/ವಿಧವೆಯರು/ನಿವೃತ್ತ ಸೈನಿಕರುಗಳಿಗೆ ಹೆಚ್ಚುವರಿ ಶೇ.0.5 ಬಡ್ಡಿದರ ನೀಡಬಹುದು.
5. ಸಹಕಾರಿಗಳು ಪಿಗ್ಮಿ ಠೇವುಗಳನ್ನು ಸ್ವೀಕರಿಸಿದಲ್ಲಿ ಅವುಗಳ ಮೇಲೆ ಕೊಡುವ ಕಮೀಷನ್ ದರವು ಶೇ.3 ನ್ನು ಮೀರಬಾರದು. ಅಂತಹ ಪಿಗ್ಮಿ ಠೇವುಗಳ ಮೇಲೆ ನೀಡುವ ಬಡ್ಡಿದರ ಗರಿಷ್ಠ ಶೇ.4 ನ್ನು ಮೀರಬಾರದು.
6. ಯಾವುದೇ ಠೇವಣಿದಾರನು ಅವಧಿಗೆ ಮುಂಚಿತವಾಗಿ ಠೇವಣಿ ಮರುಪಾವತಿ ಕೋರಿದಲ್ಲಿ, ಆ ಅವಧಿಯ ಠೇವಣಿಗೆ ಕೊಡುತ್ತಿದ್ದ ಬಡ್ಡಿದರದಲ್ಲಿ ಗರಿಷ್ಠ ಶೇ.2 ಕಡಿತಗೊಳಿಸಬಹುದು.
7. ಸೌಹಾರ್ದ ಸಹಕಾರಿಗಳು ವಿತರಿಸುವ ಭದ್ರತಾ ಸಾಲಗಳಿಗೆ ಗರಿಷ್ಠ ಶೇ.16 ಹಾಗೂ ಭದ್ರತಾ ರಹಿತ ಸಾಲಗಳಿಗೆ ಗರಿಷ್ಠ ಶೇ.18ರಷ್ಟು ಬಡ್ಡಿ ದರವನ್ನು ಮೀರತಕ್ಕದ್ದಲ್ಲ ಹಾಗೂ ಸುಸ್ತಿ ಬಡ್ಡಿ ಪ್ರಮಾಣವು ಶೇ.2 ಮೀರತಕ್ಕದ್ದಲ್ಲ.
8. ಯಾವುದೇ ಸಹಕಾರಿಯು 5 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಯನ್ನು ಸ್ವೀಕರಿಸತಕ್ಕದ್ದಲ್ಲ.
9. ಒಂದು ಸಹಕಾರಿಯು ದಿನವಹಿ ನಿರ್ವಹಿಸುವ ನಗದು ಬಾಕಿ (Cash Balance) ಸಹಕಾರಿಯ ಹಿಂದಿನ ತ್ರೈಮಾಸಿಕ ಅಂತ್ಯಕ್ಕೆ ಇರುವ ದುಡಿಯುವ ಬಂಡವಾಳದ ಶೇ.2ನ್ನು ಮೀರತಕ್ಕದ್ದಲ್ಲ.
10. ಸಹಕಾರಿ ಸಂಸ್ಥೆಗಳು ಸ್ಥಾನಿಕ ಹಣಕಾಸು ಸಂಸ್ಥೆಗಳಾಗಿದ್ದು, ಸಂಸ್ಥೆಗಳಲ್ಲಿಯ ಆಡಳಿತ, ವ್ಯವಹಾರ ಪದ್ಧತಿಯನ್ನು ಆಧರಿಸಿ ಸಾರ್ವಜನಿಕರು ಸದಸ್ಯರಾಗಿ ಠೇವುಗಳನ್ನು ಜಮೆ ಮಾಡುವರು. ಇಂತಹ ಸಹಕಾರಿ ಸಂಸ್ಥೆಗಳಲ್ಲಿ ಸಹಕಾರಿಗಳು ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಮುಖಾಂತರ ಕಮೀಷನ್/ಇನ್ಸೆಂಟಿವ್ ಕೊಡುವುದರ ಮೂಲಕ ಅವಧಿ ಠೇವಣಿಗಳನ್ನು ಮತ್ತು ಮರುಕಳಿಸುವ ಠೇವಣಿ (RD)ಗಳನ್ನು ಸ್ವೀಕರಿಸತಕ್ಕದ್ದಲ್ಲ ಹಾಗೂ ಜಾಹೀರಾತು ಮೂಲಕ ಸಂಗ್ರಹಣೆ ಮಾಡತಕ್ಕದ್ದಲ್ಲ.
11. ಪ್ರಸ್ತುತ ನೀಡಲಾಗುತ್ತಿರುವ ಬಡ್ಡಿ ದರ ಸುತ್ತೋಲೆಯನ್ನು ಕಾಲ ಕಾಲಕ್ಕೆ ಪರಿಷ್ಕರಣೆ ಮಾಡಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಸಕ್ಷಮವಾಗಿರುತ್ತದೆ.

ಸೌಹಾರ್ದ ಸಹಕಾರಿಗಳು ಪಡೆಯುವ ಠೇವಣಿಗಳಿಗೆ ಮತ್ತು ವಿತರಿಸುವ ಸಾಲಗಳಿಗೆ ಬಡ್ಡಿದರ ನಿಗದಿಪಡಿಸುವ ಸುತ್ತೋಲೆಯನ್ನು ದಿನಾಂಕ: xxxxxx ರಂದು ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯ ನಿರ್ಣಯದಂತೆ, ನನ್ನ ಸಹಿ ಮತ್ತು ಸಂಯುಕ್ತ ಸಹಕಾರಿಯ ಮೊಹರಿನೊಂದಿಗೆ ದಿನಾಂಕ xxxxxx ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ.

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

**ವಿಷಯ 17 : ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯಗಳನ್ನು ಇ–ಮೇಲ್ ಮೂಲಕ ಕಳುಹಿಸಲು ಅನುಮತಿಸುವ ಕುರಿತು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸೌಹಾರ್ದ ಸಹಕಾರಿಗಳು ತಾಂತ್ರಿಕವಾಗಿ ಮುಂದುವರೆಯುವ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿಯು ತಾಂತ್ರಿಕತೆಯನ್ನು ಅಳವಡಿಸಿಕೊಂಡು, ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯಗಳನ್ನು ಇ–ಮೇಲ್ ಮೂಲಕ ಕಳುಹಿಸಬೇಕೆಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯಲ್ಲಿ ಹಾಗೂ ತಾವು ನೀಡಿರುವ ಸಲಹೆಯಂತೆ, ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು, ಟಿಪ್ಪಣಿಗಳಲ್ಲಿ ಲೆಕ್ಕಪರಿಶೋಧನಾ ವರದಿ ಇರುವುದರಿಂದ ಸದರಿ

ಪುಸ್ತಕದ ಹಾರ್ಡ್ ಪ್ರತಿಯನ್ನು ಅರ್ಹ ಸೌಹಾರ್ದ ಸಹಕಾರಿಗಳಿಗೆ ನೋಂದಾಯಿತ ಅಂಚೆ ಮೂಲಕ ಕಳುಹಿಸಲಾಗುವುದು. ಹಾಗೆಯೇ, ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯಗಳನ್ನು ಇ–ಮೇಲ್ ಮೂಲಕ ಕಳುಹಿಸಬೇಕೆಂದು ಹಿಂದಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಲಾಗಿದ್ದು, ಇದಕ್ಕೆ ಅನುಮತಿ ನೀಡಿದಲ್ಲಿ ಇನ್ನು ಮುಂದೆ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯಗಳನ್ನು ಸೌಹಾರ್ದ ಸಹಕಾರಿಗಳಿಗೆ ಇ–ಮೇಲ್ ಮೂಲಕ ಕಳುಹಿಸಲಾಗುವುದು. ಹಾರ್ಡ್ ಪ್ರತಿಯಾದಲ್ಲಿ ಕಳೆದು ಹೋಗಬಹುದು, ಆದರೆ, ಇ–ಮೇಲ್‌ನಲ್ಲಿದ್ದಲ್ಲಿ ಹೊಸ ಆಡಳಿತ ಮಂಡಲಿ ಬಂದರೂ ಸಹ ಅವುಗಳನ್ನು ಮೇಲ್‌ನಲ್ಲಿ ಪರಿಶೀಲಿಸಬಹುದಾಗಿರುತ್ತದೆ.

ಹಾಗೆಯೇ, ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 6ಸಿ (2) (i) (ಬಿ)ರ ಪ್ರಕಾರ ವಿದ್ಯುನ್ಮಾನ ಅಂಚೆ (ಇ–ಮೇಲ್) ಮೂಲಕ ಕಳುಹಿಸಲು ಅವಕಾಶವಿರುತ್ತದೆ. ಈ ಹಿನ್ನೆಲೆಯಲ್ಲಿ ವಾರ್ಷಿಕ ಸಾಮಾನ್ಯ ಸಭೆಯು ಅನುಮತಿ ನೀಡಿದಲ್ಲಿ ಎಲ್ಲಾ ಸೌಹಾರ್ದ ಸಹಕಾರಿಗಳ ಇ–ಮೇಲ್ ಐಡಿಗಳಿಗೆ, ಒಂದು ವೇಳೆ, ಇ–ಮೇಲ್ ಐಡಿಗಳಿಲ್ಲದೇ ಇದ್ದಲ್ಲಿ ಅಂತಹ ಸೌಹಾರ್ದ ಸಹಕಾರಿಗಳಿಗೆ ಇ–ಮೇಲ್ ಐಡಿಗಳನ್ನು ರಚಿಸಿ, ನೀಡುವುದರ ಮೂಲಕ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯಗಳನ್ನು ಕಳುಹಿಸಲಾಗುವುದು. ಈ ಕುರಿತು ಅನುಮತಿ ನೀಡಲು ಸಭೆಗೆ ಕೋರಿದರು.

ನಂತರ ಸಭೆಯು, ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯಗಳನ್ನು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 6ಸಿ (2) (i) (ಬಿ)ರ ಪ್ರಕಾರ ವಿದ್ಯುನ್ಮಾನ ಅಂಚೆ (ಇ–ಮೇಲ್) ಮೂಲಕ ಕಳುಹಿಸಲು ಅವಕಾಶವಿದ್ದು, ಅದರಂತೆ ಇನ್ನು ಮುಂದೆ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯಗಳನ್ನು ಸೌಹಾರ್ದ ಸಹಕಾರಿಗಳಿಗೆ ಇ–ಮೇಲ್ ಮೂಲಕ ಕಳುಹಿಸಲು ಸರ್ವಾನುಮತದಿಂದ ಅನುಮತಿ ನೀಡಿತು.

**ನಿರ್ಣಯ** : ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯಗಳನ್ನು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 6ಸಿ (2) (i) (ಬಿ)ರ ಪ್ರಕಾರ ವಿದ್ಯುನ್ಮಾನ ಅಂಚೆ (ಇ–ಮೇಲ್) ಮೂಲಕ ಕಳುಹಿಸಲು ಅವಕಾಶವಿದ್ದು, ಅದರಂತೆ ಇನ್ನು ಮುಂದೆ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯಗಳನ್ನು ಸೌಹಾರ್ದ ಸಹಕಾರಿಗಳಿಗೆ ಇ–ಮೇಲ್ ಮೂಲಕ ಕಳುಹಿಸಲು ಸಭೆಯು ಸರ್ವಾನುಮತದಿಂದ ಅನುಮತಿ ನೀಡಿತು.

**ವಿಷಯ 18 : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯು ಈ ಹಿಂದೆ ಬಾಡಿಗೆಗೆ ಇದ್ದ ನಿರ್ಮಾಣ ಭವನಕ್ಕೆ ನೀಡಲಾಗಿದ್ದ ಬಾಡಿಗೆ ಮುಂಗಡ ಮೊತ್ತವನ್ನು ಕಛೇರಿ ಬಾಡಿಗೆ ಮೊತ್ತದಲ್ಲಿ ಸರಿದೂಗಿಸುವ ಕುರಿತು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯು ಈ ಹಿಂದೆ ನಿರ್ಮಾಣ ಭವನದ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಸನ್ 2022 ಜನವರಿಯಲ್ಲಿ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯನ್ನು ಬೆಂಗಳೂರಿನ ಮಲ್ಲೇಶ್ವರಂನ ಮಾರ್ಗೋಸಾ ರಸ್ತೆಯಲ್ಲಿರುವ ಸ್ವಂತ ಕಟ್ಟಡ "ಸೌಹಾರ್ದ ಸಹಕಾರಿ ಸೌಧ" ಕ್ಕೆ ಸ್ಥಳಾಂತರಿಸಲಾಗಿರುತ್ತದೆ. ಈ ಹಿಂದೆ ಕೇಂದ್ರ ಕಛೇರಿಯು ಕಾರ್ಯನಿರ್ವಹಿಸುತ್ತಿದ್ದ ದಿನಗಳಲ್ಲಿ ರೂ.1,50,000/–ರಷ್ಟು ಮೊತ್ತದ ಬಾಡಿಗೆಯನ್ನು ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ ಸಂಸ್ಥೆಗೆ ಪಾವತಿಸುವುದು ಬಾಕಿ ಇದ್ದು, ಈ ಬಾಕಿ ಮೊತ್ತವನ್ನು ಭದ್ರತಾ ಠೇವಣಿಯಲ್ಲಿ ಸರಿದೂಗಿಸಲಾಗಿದೆ. ಈ ವಿಷಯದ ಕುರಿತಂತೆ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ಅನುಮತಿಯನ್ನು ಪಡೆದುಕೊಳ್ಳಲು ಮಾನ್ಯ ಸನ್ನದು ಲೆಕ್ಕಪರಿಶೋಧಕರು ಸಲಹೆ ನೀಡಿದ್ದು, ಅದರಂತೆ ಈ ಕುರಿತು ಘಟನೋತ್ತರವಾಗಿ ಅನುಮೋದಿಸಲು ಸಭೆಗೆ ಕೋರಿದರು.

ನಂತರ ಸಭೆಯು, 2022ಕ್ಕಿಂತ ಮುಂಚೆ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯು ನಿರ್ಮಾಣ ಭವನದ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ರೂ.1,50,000/–ರಷ್ಟು ಮೊತ್ತದ

ಬಾಡಿಗೆಯನ್ನು ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ ಸಂಸ್ಥೆಗೆ ಪಾವತಿಸುವುದು ಬಾಕಿ ಇದ್ದು, ಈ ಬಾಕಿ ಮೊತ್ತವನ್ನು ಸದರಿ ಸಂಸ್ಥೆಗೆ ನೀಡಲಾಗಿದ್ದ ಭದ್ರತಾ ಠೇವಣಿಯಲ್ಲಿ ಸರಿದೂಗಿಸಿರುವುದಕ್ಕೆ ಘಟನೋತ್ತರ ಅನುಮತಿ ನೀಡಿತು.

**ನಿರ್ಣಯ** : 2022ಕ್ಕಿಂತ ಮುಂಚೆ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯು ನಿರ್ಮಾಣ ಭವನದ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ರೂ.1,50,000/–ರಷ್ಟು ಮೊತ್ತದ ಬಾಡಿಗೆಯನ್ನು ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ ಸಂಸ್ಥೆಗೆ ಪಾವತಿಸುವುದು ಬಾಕಿ ಇದ್ದು, ಈ ಬಾಕಿ ಮೊತ್ತವನ್ನು ಸದರಿ ಸಂಸ್ಥೆಗೆ ನೀಡಲಾಗಿದ್ದ ಭದ್ರತಾ ಠೇವಣಿಯಲ್ಲಿ ಸರಿದೂಗಿಸಿರುವುದಕ್ಕೆ ಸಭೆಯು ಘಟನೋತ್ತರ ಅನುಮತಿ ನೀಡಿತು.

**ವಿಷಯ 19 : ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವದ ಜ್ಞಾಪಕಾರ್ಥ ಕಾರ್ಯನಿರತ ಪ್ರತಿಯೊಂದು ಸೌಹಾರ್ದ ಸಹಕಾರಿಗೆ ಗೋಡೆ ಗಡಿಯಾರ (Wall Clock) ವನ್ನು ನೀಡುವ ಕುರಿತು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಈ ಹಿಂದೆ ಚರ್ಚಿಸಿ, ಸೌಹಾರ್ದ ಸಹಕಾರಿ ಕಾಯ್ದೆಯು 25 ವರ್ಷಗಳನ್ನು ಪೂರೈಸುತ್ತಿರುವ ಈ ಸಂದರ್ಭದಲ್ಲಿ ಕಾರ್ಯನಿರತ ಪ್ರತಿಯೊಂದು ಸೌಹಾರ್ದ ಸಹಕಾರಿಗೆ ಗೋಡೆ ಗಡಿಯಾರ ನೀಡಲು ನಿರ್ಣಯಿಸಲಾಗಿದ್ದು, ಈ ಗೋಡೆ ಗಡಿಯಾರಗಳನ್ನು ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ಸಂದರ್ಭದಲ್ಲಿ ನೀಡಿದಲ್ಲಿ ಸದರಿ ಗಡಿಯಾರಗಳನ್ನು ಸೌಹಾರ್ದ ಸಹಕಾರಿಗಳು ತಮ ತಮ್ಮ ಸ್ಥಳಗಳಿಗೆ ತೆಗೆದುಕೊಂಡು ಹೋಗಲು ಕಷ್ಟವಾಗುವ ಹಿನ್ನೆಲೆಯಲ್ಲಿ ಡಿಸೆಂಬರ್ 2025ರ ಮಾಹೆಯಲ್ಲಿ ಜರುಗಲಿರುವ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಪ್ರಗತಿ ಪರಿಶೀಲನಾ ಸಭೆಯ ಸಂದರ್ಭದಲ್ಲಿ ಒಂದು ಸೌಹಾರ್ದ ಸಹಕಾರಿ ಸಂಸ್ಥೆಗೆ ಒಂದು ಗೋಡೆ ಗಡಿಯಾರದಂತೆ ನೀಡಲಾಗುವುದು. ಈ ಕುರಿತು ಅನುಮತಿಸಲು ಹಾಗೂ ಇದಕ್ಕೆ ತಗಲುವ ಖರ್ಚು–ವೆಚ್ಚಗಳಿಗೆ ಅನುಮತಿ ನೀಡಲು ಸಭೆಗೆ ಕೋರಿದರು.

ನಂತರ ಸಭೆಯು, ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವದ ಜ್ಞಾಪಕಾರ್ಥ ಕಾರ್ಯನಿರತ ಪ್ರತಿಯೊಂದು ಸೌಹಾರ್ದ ಸಹಕಾರಿಗೆ ಒಂದು ಗೋಡೆ ಗಡಿಯಾರ (Wall Clock) ವನ್ನು ಡಿಸೆಂಬರ್ 2025ರ ಮಾಹೆಯಲ್ಲಿ ನಡೆಯಲಿರುವ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಪ್ರಗತಿ ಪರಿಶೀಲನಾ ಸಭೆಯ ಸಂದರ್ಭದಲ್ಲಿ ನೀಡಲು ಮತ್ತು 6000 ಗೋಡೆ ಗಡಿಯಾರಗಳಿಗೆ ತಲಾ ಅಂದಾಜು ರೂ.600/–ಗಳಂತೆ ತಗಲುವ ಒಟ್ಟು ರೂ.36,00,000/–ಗಳನ್ನು ಸಂಯುಕ್ತ ಸಹಕಾರಿಯಿಂದ ಭರಿಸಲು ಸರ್ವಾನುಮತದಿಂದ ಅನುಮತಿ ನೀಡಿತು.

**ನಿರ್ಣಯ** : ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವದ ಜ್ಞಾಪಕಾರ್ಥ ಕಾರ್ಯನಿರತ ಪ್ರತಿಯೊಂದು ಸೌಹಾರ್ದ ಸಹಕಾರಿಗೆ ಒಂದು ಗೋಡೆ ಗಡಿಯಾರ (Wall Clock) ವನ್ನು ಡಿಸೆಂಬರ್ 2025ರ ಮಾಹೆಯಲ್ಲಿ ನಡೆಯಲಿರುವ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಪ್ರಗತಿ ಪರಿಶೀಲನಾ ಸಭೆಯ ಸಂದರ್ಭದಲ್ಲಿ ನೀಡಲು ಮತ್ತು 6000 ಗೋಡೆ ಗಡಿಯಾರಗಳಿಗೆ ತಲಾ ಅಂದಾಜು ರೂ.600/–ಗಳಂತೆ ತಗಲುವ ಒಟ್ಟು ರೂ.36,00,000/–ಗಳನ್ನು ಸಂಯುಕ್ತ ಸಹಕಾರಿಯಿಂದ ಭರಿಸಲು ಸಭೆಯು ಸರ್ವಾನುಮತದಿಂದ ಅನುಮತಿ ನೀಡಿತು.

**ವಿಷಯ 20 : ಸಂಯುಕ್ತ ಸಹಕಾರಿಯು ಇತರೆ ಸಹಕಾರಿಗಳೊಂದಿಗೆ ಹೊಂದಿರುವ ಸದಸ್ಯತ್ವದ ಕುರಿತು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯು 4 ಸಹಕಾರಿ ಸಂಸ್ಥೆಗಳಲ್ಲಿ ಸದಸ್ಯತ್ವವನ್ನು ಹೊಂದಿದ್ದು, ಈ ಸಹಕಾರಿ ಸಂಸ್ಥೆಗಳಲ್ಲಿ ಸದಸ್ಯತ್ವವನ್ನು ಮುಂದುವರೆಸುವ ಕುರಿತಾಗಿ ತಾವೆಲ್ಲರೂ ಅನುಮತಿ ನೀಡಿದಲ್ಲಿ ಅದರಂತೆ ಸದಸ್ಯತ್ವವನ್ನು ಮುಂದುವರೆಸಲಾಗುವುದು. ಈ ಕುರಿತು ಅನುಮತಿಸಲು ಸಭೆಗೆ ಕೋರಿದರು.

ನಂತರ ಸಭೆಯು, ಸಂಯುಕ್ತ ಸಹಕಾರಿಯು ಸದಸ್ಯತ್ವ ಹೊಂದಿರುವ ಸಂಸ್ಥೆಗಳಾದ ರಾಷ್ಟ್ರೀಯ ಯುವ ಕೋಆಪರೇಟಿವ್ ಲಿ., ನವದೆಹಲಿ (ಶೇರು), ರಾಷ್ಟ್ರೀಯ ಸಹಕಾರ ಮಹಾಮಂಡಲ ನಿ., ನವದೆಹಲಿ

(ಎನ್‌ಸಿಯುಐ) (ಪ್ರತಿ ವರ್ಷ ಸದಸ್ಯತ್ವ ಶುಲ್ಕ), ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು (ಶೇರು), ಕರ್ನಾಟಕ ರಾಜ್ಯ ಬಸವೇಶ್ವರ ಸುದ್ಧಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು (ಶೇರು) ಈ ಸಂಸ್ಥೆಗಳ ಸದಸ್ಯತ್ವವನ್ನು ಮುಂದುವರೆಸಿಕೊಂಡು ಹೋಗಲು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

**ನಿರ್ಣಯ** : ಸಂಯುಕ್ತ ಸಹಕಾರಿಯು ಸದಸ್ಯತ್ವ ಹೊಂದಿರುವ ಸಂಸ್ಥೆಗಳಾದ ರಾಷ್ಟ್ರೀಯ ಯುವ ಕೋಆಪರೇಟಿವ್ ಲಿ., ನವದೆಹಲಿ (ಶೇರು), ರಾಷ್ಟ್ರೀಯ ಸಹಕಾರ ಮಹಾಮಂಡಲ ನಿ., ನವದೆಹಲಿ (ಎನ್‌ಸಿಯುಐ) (ಪ್ರತಿ ವರ್ಷ ಸದಸ್ಯತ್ವ ಶುಲ್ಕ), ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು (ಶೇರು), ಕರ್ನಾಟಕ ರಾಜ್ಯ ಬಸವೇಶ್ವರ ಸುದ್ಧಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು (ಶೇರು) ಈ ಸಂಸ್ಥೆಗಳ ಸದಸ್ಯತ್ವವನ್ನು ಮುಂದುವರೆಸಿಕೊಂಡು ಹೋಗಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

**ವಿಷಯ 21 : ಹಿಂದಿನ ಸಹಕಾರ ವರ್ಷದಲ್ಲಿ ಸದಸ್ಯರನ್ನು ಸೇರಿಸಿಕೊಂಡ ಮತ್ತು ತೆಗೆದು ಹಾಕಿದ ಬಗೆಗಿನ ಸಂಕ್ಷಿಪ್ತ ವರದಿ.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು 2024–25ನೇ ಸಾಲಿನಲ್ಲಿ 280 ಸೌಹಾರ್ದ ಸಹಕಾರಿಗಳು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರಡಿ ನೋಂದಣಿಯಾಗಿ ಸಂಯುಕ್ತ ಸಹಕಾರಿಯ ಸದಸ್ಯರಾಗಿ ಸೇರ್ಪಡೆಯಾಗಿರುತ್ತಾರೆ. ಹಾಗೆಯೇ, ಸದಸ್ಯರನ್ನು ತೆಗೆದು ಹಾಕಲು ಕಾಯ್ದೆಯಲ್ಲಿ ಅವಕಾಶ ಇರುವುದಿಲ್ಲ. ಆದರೆ, 34 ಸಹಕಾರಿಗಳು ಸಮಾಪನೆಗೊಂಡು, ನೋಂದಣಿ ರದ್ಧತಿಯಾಗಿರುತ್ತದೆ. ಈ ಕುರಿತು ಅನುಮೋದಿಸಲು ಸಭೆಗೆ ಕೋರಿದರು.

ನಂತರ ಸಭೆಯು, 2024–25ನೇ ಸಾಲಿನಲ್ಲಿ 280 ಸೌಹಾರ್ದ ಸಹಕಾರಿಗಳು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರಡಿ ನೋಂದಣಿಯಾಗಿ ಸಂಯುಕ್ತ ಸಹಕಾರಿಯ ಸದಸ್ಯರಾಗಿ ಸೇರ್ಪಡೆಯಾಗಿರುವ ಮಾಹಿತಿಯನ್ನು ಹಾಗೂ ಸದಸ್ಯರನ್ನು ತೆಗೆದು ಹಾಕಲು ಕಾಯ್ದೆಯಲ್ಲಿ ಅವಕಾಶ ಇರುವುದಿಲ್ಲ. ಆದರೆ, 34 ಸಹಕಾರಿಗಳು ಸಮಾಪನೆಗೊಂಡು, ನೋಂದಣಿ ರದ್ಧತಿಯಾಗಿರುವ ಮಾಹಿತಿಯನ್ನು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ** : 2024–25ನೇ ಸಾಲಿನಲ್ಲಿ 280 ಸೌಹಾರ್ದ ಸಹಕಾರಿಗಳು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರಡಿ ನೋಂದಣಿಯಾಗಿ ಸಂಯುಕ್ತ ಸಹಕಾರಿಯ ಸದಸ್ಯರಾಗಿ ಸೇರ್ಪಡೆಯಾಗಿರುವ ಮಾಹಿತಿಯನ್ನು ಹಾಗೂ ಸದಸ್ಯರನ್ನು ತೆಗೆದು ಹಾಕಲು ಕಾಯ್ದೆಯಲ್ಲಿ ಅವಕಾಶ ಇರುವುದಿಲ್ಲ. ಆದರೆ, 34 ಸಹಕಾರಿಗಳು ಸಮಾಪನೆಗೊಂಡು, ನೋಂದಣಿ ರದ್ಧತಿಯಾಗಿರುವ ಮಾಹಿತಿಯನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 22 : ಸೌಹಾರ್ದ ಸಹಕಾರಿ ಕಾಯ್ದೆ ಕಲಂ 14, 15 ಮತ್ತು 16ನೇ ಪ್ರಕರಣಗಳ ಅಡಿಯಲ್ಲಿ ಸೃಜಿಸಲಾದ ಯಾವುದೇ ಸಂಸ್ಥೆ ಇದ್ದಲ್ಲಿ ಅದರ ವಾರ್ಷಿಕ ವರದಿಯ ಮತ್ತು ಲೆಕ್ಕಗಳ ಪುನರವಲೋಕನೆ.**

**ಸಹಕಾರ ಅಭಿವೃದ್ಧಿ ಪ್ರತಿಷ್ಠಾನ (ಸ್ಯಾಪ್–ಕೆ) ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳ ಪರಿಗಣನೆ.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಈ ಹಿಂದೆ ಸಹಕಾರ ಅಭಿವೃದ್ಧಿ ಪ್ರತಿಷ್ಠಾನ (ಸ್ಯಾಪ್–ಕೆ) ಎಂಬ ಈ ಒಂದು ಸಂಸ್ಥೆಯನ್ನು ಹುಟ್ಟು ಹಾಕಿ, ಆ ಸಂಸ್ಥೆಯ ಮೂಲಕ ಎಂಬಿಎ ಕೋರ್ಸನ್ನು ಮೈಸೂರು ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ನಡೆಸಲಾಗಿದ್ದು, ಒಂದು ತಂಡದ ಅಧ್ಯಯನವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿತ್ತು. ಈ ಪದವಿಯನ್ನು ಅಧ್ಯಯನ ನಡೆಸಿದ ವಿದ್ಯಾರ್ಥಿಗಳು ರಾಷ್ಟ್ರದಲ್ಲಿನ ವಿವಿಧ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈ ಸಂಸ್ಥೆಯು ಅಸ್ತಿತ್ವದಲ್ಲಿಲ್ಲದೇ ಇದ್ದಲ್ಲಿ ಈ ಸಂಸ್ಥೆಯ ಮೂಲಕ ಅಧ್ಯಯನ ನಡೆಸಿರುವ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗುವ ಹಿನ್ನೆಲೆಯಲ್ಲಿ ಸದರಿ ಸಂಸ್ಥೆಯನ್ನು ಮುಂದುವರೆಸಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಹಾಗೂ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಒಪ್ಪಿಗೆ ನೀಡಿರುವ ಹಿನ್ನೆಲೆಯಲ್ಲಿ ಅದರಂತೆ ಸದರಿ ಸಂಸ್ಥೆಯನ್ನು ಮುಂದುವರೆಸಲಾಗುತ್ತಿದೆ. ಈ ಸಂಸ್ಥೆಯು ಯಾವುದೇ ಕಾರ್ಯಚಟುವಟಿಕೆಯನ್ನು ನಡೆಸದೇ ಇದ್ದರೂ ಸಹ ಅದರ 2024–25ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳನ್ನು ಸಭೆಗೆ ನೀಡಲಾಗಿದ್ದು,

ಪರಿಶೀಲಿಸಿ, ಅನುಮೋದಿಸಲು ಸಭೆಗೆ ಕೋರಿದರು. ನಂತರ ಸಭೆಯಲ್ಲಿ ಸಹಕಾರ ಅಭಿವೃದ್ಧಿ ಪ್ರತಿಷ್ಠಾನ–ಕರ್ನಾಟಕ (ಸ್ಯಾಪ್–ಕೆ) ಈ ಸಂಸ್ಥೆಯನ್ನು ಸಕ್ರಿಯಗೊಳಿಸುವ ಕುರಿತು ಮಾನ್ಯ ಡೆಲಿಗೇಟ್‌ಗಳು ಸಲಹೆಯನ್ನು ನೀಡಿದರು. ಇದಕ್ಕೆ ಸಭೆಯು ಈ ಕುರಿತು ಸೂಕ್ತವಾಗಿ ನಿರ್ಣಯಿಸಲು ಆಡಳಿತ ಮಂಡಲಿಗೆ ಅಧಿಕಾರ ನೀಡಿತು.

ನಂತರ ಸಭೆಯು, ಸಂಯುಕ್ತ ಸಹಕಾರಿಯ ಪೂರಕ ಸಂಸ್ಥೆಯಾದ ಸಹಕಾರ ಅಭಿವೃದ್ಧಿ ಪ್ರತಿಷ್ಠಾನ–ಕರ್ನಾಟಕ (ಸ್ಯಾಪ್–ಕೆ) ಇದರ 2024–25ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಸರ್ವಾನುಮತದಿಂದ ಅನುಮೋದಿಸಿತು ಮತ್ತು ಸಹಕಾರ ಅಭಿವೃದ್ಧಿ ಪ್ರತಿಷ್ಠಾನ–ಕರ್ನಾಟಕ (ಸ್ಯಾಪ್–ಕೆ) ಈ ಸಂಸ್ಥೆಯನ್ನು ಸಕ್ರಿಯಗೊಳಿಸುವ ಕುರಿತು ಸೂಕ್ತವಾಗಿ ನಿರ್ಣಯಿಸಲು ವಾರ್ಷಿಕ ಸಾಮಾನ್ಯ ಸಭೆಯು ಆಡಳಿತ ಮಂಡಲಿಗೆ ಅಧಿಕಾರ ನೀಡಿತು.

**ನಿರ್ಣಯ** : ಸಂಯುಕ್ತ ಸಹಕಾರಿಯ ಪೂರಕ ಸಂಸ್ಥೆಯಾದ ಸಹಕಾರ ಅಭಿವೃದ್ಧಿ ಪ್ರತಿಷ್ಠಾನ–ಕರ್ನಾಟಕ (ಸ್ಯಾಪ್–ಕೆ) ಇದರ 2024–25ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು ಮತ್ತು ಸಹಕಾರ ಅಭಿವೃದ್ಧಿ ಪ್ರತಿಷ್ಠಾನ–ಕರ್ನಾಟಕ (ಸ್ಯಾಪ್–ಕೆ) ಈ ಸಂಸ್ಥೆಯನ್ನು ಸಕ್ರಿಯಗೊಳಿಸುವ ಕುರಿತು ಸೂಕ್ತವಾಗಿ ನಿರ್ಣಯಿಸಲು ವಾರ್ಷಿಕ ಸಾಮಾನ್ಯ ಸಭೆಯು ಆಡಳಿತ ಮಂಡಲಿಗೆ ಅಧಿಕಾರ ನೀಡಿತು.

**ವಿಷಯ 23 : ಹಿಂದಿನ ಸಹಕಾರಿ ವರ್ಷದ ಹೆಚ್ಚುವರಿ ಅಥವಾ ನಿವ್ವಳ ಲಾಭದ ವಿಲೇವಾರಿ.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯಲ್ಲಿ ಯಾವುದೇ ಲಾಭದ ಚಟುವಟಿಕೆ ಇರುವುದಿಲ್ಲ. ಆದರೆ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಲಂ 23 (3)ರಲ್ಲಿ ವಾರ್ಷಿಕ ಸಾಮಾನ್ಯ ಸಭೆಗೆ ಮಂಡಿಸಲು ತಿಳಿಸಿರುವ ವಿಷಯಗಳನ್ವಯ ಸದರಿ ವಿಷಯವನ್ನು ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಗೆ ಮಂಡಿಸಿದೆ. ಹಿಂದಿನ ಸಹಕಾರಿ ವರ್ಷದಲ್ಲಿ ಸಂಯುಕ್ತ ಸಹಕಾರಿಯ 2024–25ನೇ ಸಾಲಿನ ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಯಂತೆ ರೂ.1,39,27,021 ಗಳು ವೆಚ್ಚಕ್ಕೆ ಮೀರಿದ ಆದಾಯ ಇರುತ್ತದೆ. ಇದಕ್ಕೆ ಹೊಣೆಗಾರಿಕೆಯನ್ನು ನಿಗದಿಪಡಿಸಿ, ಮುಂದಿನ ವರ್ಷಕ್ಕೆ ಬಳಕೆ ಮಾಡಿಕೊಳ್ಳಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ ಸದರಿ ಮೊತ್ತವನ್ನು ವೆಚ್ಚಕ್ಕೆ ಮೀರಿದ ಆದಾಯ ಎಂದು ನಿಗದಿಪಡಿಸಲಾಗಿದೆ. ಆದಾಯ ತೆರಿಗೆ ಕಾಯ್ದೆಯಂತೆ ರೂ.46,76,500/–ಗಳ ಮೊತ್ತವನ್ನು ಆದಾಯ ತೆರಿಗೆ ಪಾವತಿಗಾಗಿ ಪ್ರಾವಧಾನ ಮಾಡಲಾಗಿರುತ್ತದೆ. ಮುಂಗಡ, ಟಿಡಿಎಸ್, ಟಿಸಿಎಸ್ ಸೇರಿ ಒಟ್ಟು ರೂ.58,28,021/–ಗಳ ತೆರಿಗೆಯನ್ನು ಈಗಾಗಲೇ ಪಾವತಿಸಲಾಗಿರುತ್ತದೆ. ಸಂಯುಕ್ತ ಸಹಕಾರಿಯಲ್ಲಿ ಸರ್ಕಾರ/ ಸದಸ್ಯರ ಯಾವುದೇ ಪಾಲು ಬಂಡವಾಳ ಇರುವುದಿಲ್ಲ. ಆದ್ದರಿಂದ, ಲಾಭಾಂಶ ಹಂಚಿಕೆಯ ಪ್ರಾವಧಾನವು ಕಾಯ್ದೆಯಲ್ಲಿ ಇಲ್ಲದೇ ಇರುವುದರಿಂದ ಲಾಭಾಂಶ ಹಂಚಿಕೆಯು ಉದ್ಭವಿಸುವುದಿಲ್ಲ. ಕಾಯ್ದೆ/ ಸಂಯುಕ್ತ ಸಹಕಾರಿಯ ಉಪವಿಧಿಯಲ್ಲಿ ಲಾಭ ವಿಂಗಡಣೆ ಮಾಡುವಂತಹ ಯಾವುದೇ ನಿಧಿ ರಚಿತವಾಗಿರುವುದಿಲ್ಲ. ಆದ್ದರಿಂದ, ಉಳಿದ ಹೆಚ್ಚುವರಿಯನ್ನು ಸಾಮಾನ್ಯ ಮೀಸಲು ನಿಧಿಗೆ ವರ್ಗಾಯಿಸಲಾಗಿದೆ. ಈ ಕುರಿತು ಅನುಮತಿಸಲು ಸಭೆಗೆ ಕೋರಿದರು. ಇದಕ್ಕೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

**ನಿರ್ಣಯ** : ಸಂಯುಕ್ತ ಸಹಕಾರಿಯಲ್ಲಿ ಸರ್ಕಾರ/ ಸದಸ್ಯರ ಯಾವುದೇ ಪಾಲು ಬಂಡವಾಳ ಇಲ್ಲದೇ ಇರುವುದರಿಂದ ಲಾಭಾಂಶ ಹಂಚಿಕೆಯು ಉದ್ಭವಿಸುವುದಿಲ್ಲವಾದ ಕಾರಣ ಮತ್ತು ಕಾಯ್ದೆ/ ಸಂಯುಕ್ತ ಸಹಕಾರಿಯ ಉಪವಿಧಿಯಲ್ಲಿ ಲಾಭ ವಿಂಗಡಣೆ ಮಾಡುವಂತಹ ಯಾವುದೇ ನಿಧಿ ರಚಿತವಾಗಿಲ್ಲದೇ ಇರುವುದರಿಂದ ಸಂಯುಕ್ತ ಸಹಕಾರಿಯ 2024–25ನೇ ಸಾಲಿನ ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಯಂತೆ ರೂ.1,39,27,021 ಗಳು ವೆಚ್ಚಕ್ಕೆ ಮೀರಿದ ಆದಾಯ ಇದ್ದು, ಉಳಿದ ಈ ಹೆಚ್ಚುವರಿಯನ್ನು ಸಾಮಾನ್ಯ ಮೀಸಲು ನಿಧಿಗೆ ವರ್ಗಾಯಿಸಿರುವುದಕ್ಕೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

**ವಿಷಯ 24 : ಕಾರ್ಯಾಚರಣೆಯ ಕೊರತೆ ಏನಾದರೂ ಇದ್ದಲ್ಲಿ ಅದರ ಪುನರವಲೋಕನ.**

**ನಡವಳಿ** : ಕಾರ್ಯಾಚರಣೆ ಕೊರತೆ ಯಾವುದೂ ಇಲ್ಲದಿರುವುದರಿಂದ ಪುನರವಲೋಕನ ಮಾಡುವ ಅಗತ್ಯ ಕಂಡು ಬರುವುದಿಲ್ಲ ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ಮಂಡಿಸಿದರು. ಈ ವಿಷಯವನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

ನಿರ್ಣಯ : ಕಾರ್ಯಾಚರಣೆ ಕೊರತೆ ಯಾವುದು ಇಲ್ಲದಿರುವುದರಿಂದ ಪುನರವಲೋಕನ ಮಾಡುವ ಅಗತ್ಯ ಕಂಡು ಬರದೇ ಇರುವ ವಿಷಯವನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

**ವಿಷಯ 25 : ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ನಿರ್ದಿಷ್ಟ ಮೀಸಲು ಮತ್ತು ಇತರ ನಿಧಿಗಳ ಸೃಜನೆ.**

ನಡವಳಿ : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯ ಉಪವಿಧಿಯ ಪ್ರಕಾರ ಯಾವುದೇ ಮೀಸಲು ನಿಧಿಗಳು ಇರುವುದಿಲ್ಲ. ಕೇವಲ ಕಟ್ಟಡ ನಿಧಿಗೆ ಮಾತ್ರ ನಿಧಿಯನ್ನು ಮೀಸಲಿಡಲು ಪ್ರಾವಧಾನವಿರುತ್ತದೆ. ಅದರಂತೆ, 2024–25ನೇ ಸಾಲಿನಲ್ಲಿ ಸಂಯುಕ್ತ ಸಹಕಾರಿಗೆ ಸ್ವೀಕೃತವಾಗಿರುವ ಒಟ್ಟು ವಾರ್ಷಿಕ ವಂತಿಗೆಯ ಮೊತ್ತದಲ್ಲಿ ಶೇ.10ರಷ್ಟು ಅಂದರೆ ರೂ.51,44,332/–ಗಳ ಮೊತ್ತವನ್ನು ಕಟ್ಟಡ ನಿಧಿಗಾಗಿ ಪ್ರಸಕ್ತ ಸಾಲಿನಲ್ಲಿ ಸೇರ್ಪಡೆ ಮಾಡಲಾಗಿದೆ. ಈ ಕುರಿತು ಅನುಮೋದಿಸಲು ಸಭೆಗೆ ಕೋರಿದರು.

ನಂತರ ಸಭೆಯು, ಸಂಯುಕ್ತ ಸಹಕಾರಿಯ ಉಪವಿಧಿಗಳ ಪ್ರಕಾರ 2024–25ನೇ ಸಾಲಿನಲ್ಲಿ ರೂ.51,44,332/–ಗಳ ಮೊತ್ತವನ್ನು ಕಟ್ಟಡ ನಿಧಿಗೆ ಸೇರ್ಪಡೆ ಮಾಡಿರುವುದಕ್ಕೆ ಸರ್ವಾನುಮತದಿಂದ ಅನುಮೋದನೆ ನೀಡಿತು.

ನಿರ್ಣಯ : ಸಂಯುಕ್ತ ಸಹಕಾರಿಯ ಉಪವಿಧಿಗಳ ಪ್ರಕಾರ 2024–25ನೇ ಸಾಲಿನಲ್ಲಿ ರೂ.51,44,332/–ಗಳ ಮೊತ್ತವನ್ನು ಕಟ್ಟಡ ನಿಧಿಗೆ ಸೇರ್ಪಡೆ ಮಾಡಿರುವುದಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ವಿಷಯ 26 : ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರಲೋಕನ.**

ನಡವಳಿ : ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರಲೋಕನ ವಿಷಯವು ಸಂಯುಕ್ತ ಸಹಕಾರಿಗೆ ಅನ್ವಯವಾಗುವುದಿಲ್ಲ ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ತಿಳಿಸಿದರು. ಈ ವಿಷಯವನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

ನಿರ್ಣಯ : ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರಲೋಕನ ವಿಷಯವು ಸಂಯುಕ್ತ ಸಹಕಾರಿಗೆ ಅನ್ವಯಿಸದಿರುವುದನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 27 : ಮಂಡಲಿಯ ಸದಸ್ಯರಿಂದ ಸಂಯುಕ್ತ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ.**

ನಡವಳಿ : ಮಂಡಲಿಯ ಸದಸ್ಯರಿಂದ ಸಂಯುಕ್ತ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ ವಿಷಯವು ಸಂಯುಕ್ತ ಸಹಕಾರಿಗೆ ಅನ್ವಯವಾಗುವುದಿಲ್ಲ ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ತಿಳಿಸಿದರು. ಈ ವಿಷಯವನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

ನಿರ್ಣಯ : ಮಂಡಲಿಯ ಸದಸ್ಯರಿಂದ ಸಂಯುಕ್ತ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ ವಿಷಯವು ಸಂಯುಕ್ತ ಸಹಕಾರಿಗೆ ಅನ್ವಯಿಸದಿರುವುದನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 28 : ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ಸುಸ್ಥಿ ಸಾಲಗಳು ಯಾವುದಾದರೂ ಇದ್ದಲ್ಲಿ, ಸುಸ್ಥಿ ಸಾಲಗಳ ವಸೂಲಾತಿಗೆ ತೆಗೆದುಕೊಂಡ ಕ್ರಮದ ಪರಿಶೀಲನೆ.**

ನಡವಳಿ : ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ಸುಸ್ಥಿ ಸಾಲಗಳು ಯಾವುದಾದರೂ ಇದ್ದಲ್ಲಿ, ಸುಸ್ಥಿ ಸಾಲಗಳ ವಸೂಲಾತಿಗೆ ತೆಗೆದುಕೊಂಡ ಕ್ರಮದ ಪರಿಶೀಲನೆ ವಿಷಯವು ಸಂಯುಕ್ತ ಸಹಕಾರಿಗೆ ಅನ್ವಯವಾಗುವುದಿಲ್ಲ ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ತಿಳಿಸಿದರು. ಈ ವಿಷಯವನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

ನಿರ್ಣಯ : ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ಸುಸ್ಥಿ ಸಾಲಗಳು ಯಾವುದಾದರೂ ಇದ್ದಲ್ಲಿ, ಸುಸ್ಥಿ ಸಾಲಗಳ ವಸೂಲಾತಿಗೆ ತೆಗೆದುಕೊಂಡ ಕ್ರಮದ

ಪರಿಶೀಲನೆ ವಿಷಯವು ಸಂಯುಕ್ತ ಸಹಕಾರಿಗೆ ಅನ್ವಯಿಸದಿರುವುದನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 29 : ಒಟ್ಟುಗೂಡಿಸುವಿಕೆ, ವಿಭಜನೆ, ವಿಲೀನತೆ ಮತ್ತು ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ.**

**ನಡವಳಿ** : ಒಟ್ಟುಗೂಡಿಸುವಿಕೆ, ವಿಭಜನೆ, ವಿಲೀನತೆ ಮತ್ತು ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ ವಿಷಯವು ಸಂಯುಕ್ತ ಸಹಕಾರಿಗೆ ಅನ್ವಯವಾಗುವುದಿಲ್ಲ ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ತಿಳಿಸಿದರು. ಈ ವಿಷಯವನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ** : ಒಟ್ಟುಗೂಡಿಸುವಿಕೆ, ವಿಭಜನೆ, ವಿಲೀನತೆ ಮತ್ತು ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ ವಿಷಯವು ಸಂಯುಕ್ತ ಸಹಕಾರಿಗೆ ಅನ್ವಯಿಸದಿರುವುದನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 30 : ಸೌಹಾರ್ದ ಸಹಕಾರಿಗಳ ಶಾಸನಾತ್ಮಕ ಕಾರ್ಯಗಳ ನಿರ್ವಹಣೆಗೆ ಸಂಯುಕ್ತ ಸಹಕಾರಿಯಿಂದ ಮಾಡಲಾದ ಖರ್ಚು–ವೆಚ್ಚಗಳ ವಿವರಗಳನ್ನು ಪರಿಶೀಲಿಸಿ, ಅನುಮೋದಿಸುವ ಕುರಿತು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯ 23ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ "ಮುಂದಿನ ಬಾರಿಯ ವಾರ್ಷಿಕ ಸಾಮಾನ್ಯ ಸಭೆಯಿಂದ ಸೌಹಾರ್ದ ಸಹಕಾರಿಗಳ ಶಾಸನಾತ್ಮಕ ಕಾರ್ಯಗಳ ನಿರ್ವಹಣೆಗೆ ಸಂಯುಕ್ತ ಸಹಕಾರಿಯಿಂದ ಮಾಡಲಾದ ಖರ್ಚು–ವೆಚ್ಚಗಳ ವಿವರಗಳನ್ನು ಪ್ರತ್ಯೇಕ ವಿಷಯವಾಗಿ ಮಂಡಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿರುತ್ತದೆ". ಅದರಂತೆ, ಸೌಹಾರ್ದ ಸಹಕಾರಿಗಳ ಶಾಸನಾತ್ಮಕ ಕಾರ್ಯಗಳ ನಿರ್ವಹಣೆಗೆ ಸಂಯುಕ್ತ ಸಹಕಾರಿಯಿಂದ ಮಾಡಲಾದ ಖರ್ಚು–ವೆಚ್ಚಗಳ ವಿಷಯವನ್ನು ಸಭೆಗೆ ಮಂಡಿಸಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಮುಂದುವರೆದು ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯು ತರಬೇತಿ, ಶಿಕ್ಷಣ, ಪ್ರಚಾರ ಕಾರ್ಯಗಳಷ್ಟೇ ಅಲ್ಲ, ಅದರೊಂದಿಗೆ ನಿಯಂತ್ರಣಾತ್ಮಕ ಕಾರ್ಯಚಟುವಟಿಕೆಗಳನ್ನು ಸಹ ನಿರ್ವಹಿಸಬೇಕಾಗುತ್ತದೆ. ಈ ಕಾರ್ಯಗಳನ್ನು ನಿರ್ವಹಿಸುವಂತಹ ಸಂದರ್ಭದಲ್ಲಿ ಕೆಲವು ಸೌಹಾರ್ದ ಸಹಕಾರಿಗಳು ಸಮಾಪನೆಗೆ ಹೋದ ಸಂದರ್ಭದಲ್ಲಿ, ಕಾರ್ಯನಿರ್ವಹಿಸದೇ ಇರುವ ಸಂದರ್ಭದಲ್ಲಿ ಅಂತಹ ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾರಿಗಳನ್ನು ನೇಮಕ ಮಾಡಬೇಕಾಗುತ್ತದೆ. ವಕೀಲರನ್ನು ನೇಮಕ ಮಾಡಿ ಇವರಿಗೆ ತಗಲುವ ವೆಚ್ಚಗಳನ್ನು ಪಾವತಿಸಬೇಕಾಗುತ್ತದೆ. ಈ ರೀತಿ ಕೆಲವೊಂದು ವೆಚ್ಚಗಳನ್ನು ಸಂಯುಕ್ತ ಸಹಕಾರಿಯಿಂದ ಭರಿಸಲಾಗಿರುತ್ತದೆ. ಅದರಂತೆ, ದಿನಾಂಕ 31.03.2025ರ ವರ್ಷಾಂತ್ಯದಂತೆ, ಸಮಾಪನೆಯಲ್ಲಿರುವ ಹಾಗೂ ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಆಡಳಿತಾತ್ಮಕ ವೆಚ್ಚಗಳಿಗಾಗಿ ಹಾಗೂ ಕಾನೂನು ಕ್ರಮವಿಡಲು ರೂ.1,47,392/–ರಷ್ಟು ಮೊತ್ತವನ್ನು ಪಾವತಿಸಲಾಗಿದೆ. ಪ್ರಸ್ತುತ ಸಂಯುಕ್ತ ಸಹಕಾರಿಯಿಂದ ಖರ್ಚು ಮಾಡಲಾದ ಮೊತ್ತವನ್ನು ಆಯಾ ಸೌಹಾರ್ದ ಸಹಕಾರಿಗಳಿಂದ ಹಿಂಪಡೆದುಕೊಳ್ಳಲು ಆದ್ಯತೆ ಮೇರೆಗೆ ಅಗತ್ಯ ಕ್ರಮ ವಹಿಸಲಾಗುತ್ತಿದೆ. ಈ ವಿವರಗಳನ್ನು ಪರಿಶೀಲಿಸಿ, ಸೌಹಾರ್ದ ಸಹಕಾರಿಗಳ ಶಾಸನಾತ್ಮಕ ಕಾರ್ಯಗಳ ನಿರ್ವಹಣೆಗೆ ಸಂಯುಕ್ತ ಸಹಕಾರಿಯಿಂದ ಮಾಡಲಾದ ಖರ್ಚು–ವೆಚ್ಚಗಳಿಗೆ ಅನುಮತಿಸಲು ಸಭೆಗೆ ಕೋರಿದರು.

ನಂತರ ಸಭೆಯು, ದಿನಾಂಕ 31.03.2025ರ ವರ್ಷಾಂತ್ಯದಂತೆ, ಸಮಾಪನೆಯಲ್ಲಿರುವ ಹಾಗೂ ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಆಡಳಿತಾತ್ಮಕ ವೆಚ್ಚಗಳಿಗಾಗಿ ಹಾಗೂ ಕಾನೂನು ಕ್ರಮವಿಡಲು ರೂ.1,47,392/–ರಷ್ಟು ಮೊತ್ತವನ್ನು ಪಾವತಿಸಿರುವುದಕ್ಕೆ ಸರ್ವಾನುಮತದಿಂದ ಅನುಮತಿ ನೀಡಿತು ಮತ್ತು ಪ್ರಸ್ತುತ ಸಂಯುಕ್ತ ಸಹಕಾರಿಯಿಂದ ಖರ್ಚು ಮಾಡಲಾದ ಮೊತ್ತವನ್ನು ಆಯಾ ಸೌಹಾರ್ದ ಸಹಕಾರಿಗಳಿಂದ ಹಿಂಪಡೆದುಕೊಳ್ಳಲು ಆದ್ಯತೆ ಮೇರೆಗೆ ಅಗತ್ಯ ಕ್ರಮ ವಹಿಸಲು ಸೂಚಿಸಿತು.

**ನಿರ್ಣಯ** : ದಿನಾಂಕ 31.03.2025ರ ವರ್ಷಾಂತ್ಯದಂತೆ, ಸಮಾಪನೆಯಲ್ಲಿರುವ ಹಾಗೂ ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಆಡಳಿತಾತ್ಮಕ ವೆಚ್ಚಗಳಿಗಾಗಿ ಹಾಗೂ ಕಾನೂನು ಕ್ರಮವಿಡಲು ರೂ.1,47,392/–ರಷ್ಟು ಮೊತ್ತವನ್ನು ಪಾವತಿಸಿರುವುದಕ್ಕೆ ಸಭೆಯು ಸರ್ವಾನುಮತದಿಂದ ಅನುಮತಿ ನೀಡಿತು ಮತ್ತು ಪ್ರಸ್ತುತ

ಸಂಯುಕ್ತ ಸಹಕಾರಿಯಿಂದ ಖರ್ಚು ಮಾಡಲಾದ ಮೊತ್ತವನ್ನು ಆಯಾ ಸೌಹಾರ್ದ ಸಹಕಾರಿಗಳಿಂದ ಹಿಂಪಡೆದುಕೊಳ್ಳಲು ಆದ್ಯತೆ ಮೇರೆಗೆ ಅಗತ್ಯ ಕ್ರಮ ವಹಿಸಲು ಸಭೆಯು ಸೂಚಿಸಿತು.

**ವಿಷಯ 31 : ವಸೂಲಾಗದೆಂದು ಪರಿಗಣಿತವಾದ ಸುಸ್ಥಿ ಸಾಲಗಳ ಬಗ್ಗೆ ತೀರ್ಮಾನ.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯಿಂದ ಶಾಸನಬದ್ಧ ಕರ್ತವ್ಯಗಳನ್ನು ಪಾಲನೆ ಮಾಡಿ, ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಕೆಲಸ ನಿರ್ವಹಿಸುತ್ತಿದೆ. ಇಂತಹ ಸಂದರ್ಭದಲ್ಲಿ ನಿಯಂತ್ರಣಾತ್ಮಕ ಚಟುವಟಿಕೆಗಳಿಗೆ ಸಂಯುಕ್ತ ಸಹಕಾರಿಯಿಂದ ವೆಚ್ಚಗಳನ್ನು ಮಾಡುತ್ತಿದೆ. ಕೆಲವೊಂದು ವೆಚ್ಚಗಳು ಕೆಲವು ಸಂದರ್ಭಗಳಲ್ಲಿ ಸಂಬಂಧಿಸಿದ ಸೌಹಾರ್ದ ಸಹಕಾರಿಗಳಿಂದ ವಸೂಲಿ ಮಾಡಲು ಸಾಧ್ಯವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸನ್ನದು ಲೆಕ್ಕಪರಿಶೋಧಕರು ನೀಡಿದ ಸಲಹೆಯಂತೆ ಶಾಸನಬದ್ಧ ಕಾರ್ಯಗಳನ್ನು ನಿರ್ವಹಿಸಲು ಸಂಯುಕ್ತ ಸಹಕಾರಿಯಿಂದ ಮಾಡಲಾದ ವೆಚ್ಚಗಳನ್ನು ಸಂಬಂಧಿಸಿದ ಸೌಹಾರ್ದ ಸಹಕಾರಿಗಳಿಂದ ವಸೂಲಾಗದೇ ಇದ್ದ ಸಂದರ್ಭದಲ್ಲಿ ಮೂರು ವರ್ಷಗಳ ನಂತರ ಸದರಿ ಮೊತ್ತವನ್ನು ಆದಾಯ ವೆಚ್ಚ ಖಾತೆಗೆ ವರ್ಗಾಯಿಸಿ ವಜಾ (Write off) ಮಾಡಲು ಸಲಹೆ ನೀಡಿರುತ್ತಾರೆ. ಅದರಂತೆ, ಸಂಯುಕ್ತ ಸಹಕಾರಿಯ ವತಿಯಿಂದ ಸಮಾಪನೆಯಲ್ಲಿರುವ ಹಾಗೂ ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಆಡಳಿತಾತ್ಮಕ ವೆಚ್ಚಗಳಿಗಾಗಿ ಹಾಗೂ ಕಾನೂನು ಕ್ರಮವಿಡಲು ಇಲ್ಲಿಯವರೆಗೆ ಒಟ್ಟು ರೂ.22,45,702/– ಮೊತ್ತವನ್ನು ಪಾವತಿಸಲಾಗಿದೆ. ಇದು ಸಾಲದ ಮೊತ್ತವಾಗಿರುವುದಿಲ್ಲ. ಬದಲಾಗಿ ಆಯಾ ಸೌಹಾರ್ದ ಸಹಕಾರಿಗಳಿಂದ ಹಿಂಪಡೆಯಬೇಕಾದ ಮೊತ್ತವಾಗಿದ್ದು, ಈ ಮೊತ್ತವನ್ನು ಬರತಕ್ಕ ಖಾತೆಯಲ್ಲಿ ಇರಿಸಲಾಗಿದೆ. ಆದರೆ, ಆ ಸೌಹಾರ್ದ ಸಹಕಾರಿಗಳು ಸಮಾಪನೆಯ ಹಂತದಲ್ಲಿರುವ ಹಾಗೂ ಸದರಿ ಮೊತ್ತವನ್ನು ಮರು ಪಾವತಿಸಲು ಅಶಕ್ತವಾಗಿರುವುದರಿಂದ ಬರತಕ್ಕ ಖಾತೆಯಲ್ಲಿರುವ ಮೊತ್ತವನ್ನು ಮುಂದುವರೆಸುವ ಅಥವಾ ಮೂರು ವರ್ಷಗಳಿಗಿಂತ ಹಿಂದಿನ ಬರಬೇಕಾದ ಮೊತ್ತವನ್ನು ಆದಾಯ ವೆಚ್ಚ ಖಾತೆಗೆ ವರ್ಗಾಯಿಸಿ ವಜಾ (Write off) ಮಾಡುವ ಬಗ್ಗೆ ತೀರ್ಮಾನಿಸಲು ಮಂಡಿಸಿದೆ. ಮೂರು ವರ್ಷಗಳಿಗಿಂತ ಹಿಂದಿನ ಬರಬೇಕಾದ ಮೊತ್ತದ ವಿವರಗಳು ಈ ಕೆಳಗಿನಂತಿದ್ದು, ಅದರಂತೆ ಹೊಂದಾಣಿಕೆ ಮಾಡಿಕೊಳ್ಳಲು ಅನುಮತಿಗಾಗಿ ಸಭೆಗೆ ಕೋರಿದರು. ಈ ಮೊತ್ತವನ್ನು ಸಂಬಂಧಪಟ್ಟ ಆಯಾ ಸೌಹಾರ್ದ ಸಹಕಾರಿಗಳಿಂದ ಹಿಂಪಡೆಯಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು. ಇದಕ್ಕೆ ಸಭೆಯು ಸಹಮತ ವ್ಯಕ್ತಪಡಿಸಿತು.

| ಕ್ರ. ಸಂ. | **ಸಹಕಾರಿಯ ಹೆಸರು** | **ಮೊತ್ತ** |
|---|---|---|
| 1 | ಅಹನ ಸೌಹಾರ್ದ ಪತ್ತಿನ ಸಹಕಾರಿ ನಿ., ಹೊಸಪೇಟೆ, ವಿಜಯನಗರ. (ವಿ.ಜೆ.ಎನ್–0084) | 86,000.00 |
| 2 | ಶ್ರೀ ಗುರು ಸಾರ್ವಭೌಮ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು. (ಬಿ.ಜಿ.ಯು–0280) | 9,95,292.00 |
| 3 | ಬೆಳ್ಳಿ ಬೆಳಕು ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು. (ಬಿ.ಜಿ.ಯು–0273) | 4,000.00 |
| 4 | ವೀರರಾಣಿ ಚನ್ನಮ್ಮ ಮಹಿಳಾ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು. (ಟಿ.ಎಂ.ಕೆ–0088) | 2,250.00 |
| 5 | ವಿ–ಗೋಲ್ಡ್ ಸೌಹಾರ್ದ ಸಹಕಾರಿ ನಿ., ಬೆಂಗಳೂರು. (ಬಿ.ಜಿ.ಯು–0306) | 2,800.00 |
| 6 | ಆಶ್ರಯ ಕ್ರೆಡಿಟ್ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಳಗಾವಿ. (ಬಿ.ಜಿ.ಎಂ–0096) | 1,50,450.00 |
| 7 | ಮಯೂರ್ ಸೌಹಾರ್ದ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ನಿ., ಹುಕ್ಕೇರಿ ತಾ॥, ಬೆಳಗಾವಿ. (ಬಿ.ಜಿ.ಎಂ–0272) | 91,200.00 |
| | **ಒಟ್ಟು** | **13,31,992.00** |

**ನಿರ್ಣಯ** : ದಿನಾಂಕ 31.03.2025ರ ವರ್ಷಾಂತ್ಯದಂತೆ, ಸಮಾಪನೆಯಲ್ಲಿರುವ ಹಾಗೂ ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಆಡಳಿತಾತ್ಮಕ ಹಾಗೂ ನಿಯಂತ್ರಣಾತ್ಮಕ ವೆಚ್ಚಗಳಿಗಾಗಿ ಮತ್ತು ಕಾನೂನು ಕ್ರಮವಿಡಲು ಸಂಯುಕ್ತ ಸಹಕಾರಿಯಿಂದ ಪಾವತಿಸಲಾಗಿರುವ ರೂ.22,45,702/–ರಷ್ಟು ಮೊತ್ತದಲ್ಲಿ ಮೂರು ವರ್ಷಗಳಿಗಿಂತ ಹಿಂದಿನ ಬರಬೇಕಾದ ರೂ.13,31,992/–ಗಳ ಮೊತ್ತವನ್ನು ಆದಾಯ ವೆಚ್ಚ ಖಾತೆಗೆ

ವರ್ಗಾಯಿಸಿ ವಜಾ (Write off) ಮಾಡಿಕೊಳ್ಳಲು ಸಭೆಯು ಸರ್ವಾನುಮತದಿಂದ ಅನುಮತಿ ನೀಡಿತು ಮತ್ತು ಈ ಆದಾಯ ವೆಚ್ಚ ಖಾತೆಗೆ ವರ್ಗಾಯಿಸಿ ವಜಾ (Write off) ಮಾಡಿಕೊಳ್ಳಲಾದ ರೂ.13,31,992/-ಗಳ ಮೊತ್ತದಲ್ಲಿ ಈ ಪಟ್ಟಿಯಲ್ಲಿರುವ ಯಾವುದಾದರೂ ಸೌಹಾರ್ದ ಸಹಕಾರಿಗಳಿಂದ ಮೊತ್ತ ಬರುವ ಸಾಧ್ಯತೆ ಇದ್ದಲ್ಲಿ ಅಂತಹ ಸೌಹಾರ್ದ ಸಹಕಾರಿಗಳಿಂದ ಮೊತ್ತವನ್ನು ಸಂಯುಕ್ತ ಸಹಕಾರಿಗೆ ಪಡೆದುಕೊಳ್ಳಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಸಭೆಯು ಅಧಿಕಾರ ನೀಡಿತು.

**ವಿಷಯ 32 : ಮಂಡಲಿಯ ನಿರ್ದೇಶಕರುಗಳನ್ನು ತೆಗೆದುಹಾಕುವುದು.**

**ನಡವಳಿ** : ಮಂಡಲಿಯ ಯಾವುದೇ ನಿರ್ದೇಶಕರನ್ನು ತೆಗೆದು ಹಾಕುವ ಪ್ರಸಂಗ ಉದ್ಭವಿಸಿಲ್ಲವಾದ್ದರಿಂದ ಪ್ರಸಕ್ತ ವರ್ಷದಲ್ಲಿ ಇದರ ಅನ್ವಯಿಸುವಿಕೆ ಇಲ್ಲದಿರುವ ವಿಷಯವನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ಮಂಡಿಸಿದರು. ಈ ವಿಷಯವನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ** : ಮಂಡಲಿಯ ಯಾವುದೇ ನಿರ್ದೇಶಕರನ್ನು ತೆಗೆದು ಹಾಕುವ ಪ್ರಸಂಗ ಉದ್ಭವಿಸಿಲ್ಲವಾದ್ದರಿಂದ ಪ್ರಸಕ್ತ ವರ್ಷದಲ್ಲಿ ಇದರ ಅನ್ವಯಿಸುವಿಕೆ ಇಲ್ಲದಿರುವುದನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 33 : 65ನೇ ಪ್ರಕರಣದ ಅಡಿಯಲ್ಲಿ ವಿಚಾರಣಾ ವರದಿ ಯಾವುದಾದರೂ ಇದ್ದಲ್ಲಿ, ಅದರ ಬಗ್ಗೆ ಕೈಗೊಂಡ ಕ್ರಮಗಳ ವರದಿ.**

**ನಡವಳಿ** : ಸೌಹಾರ್ದ ಸಹಕಾರಿ ಕಾಯ್ದೆ ಕಲಂ 65ರಂತೆ ಪ್ರಸಕ್ತ ಸಾಲಿನಲ್ಲಿ ಯಾವುದೇ ವಿಚಾರಣೆ ನಡೆದಿಲ್ಲದಿರುವುದರಿಂದ ಈ ವಿಷಯವು ಅನ್ವಯಿಸದಿರುವ ವಿಷಯವನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ಮಂಡಿಸಿದರು. ಈ ವಿಷಯವನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ** : ಸೌಹಾರ್ದ ಸಹಕಾರಿ ಕಾಯ್ದೆ ಕಲಂ 65ರಂತೆ ಪ್ರಸಕ್ತ ಸಾಲಿನಲ್ಲಿ ಯಾವುದೇ ವಿಚಾರಣೆ ನಡೆದಿಲ್ಲದಿರುವುದರಿಂದ ಈ ವಿಷಯವು ಅನ್ವಯಿಸದಿರುವುದನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 34 : ಮಂಡಲಿಯಿಂದ ಯಾವ ವ್ಯಕ್ತಿಯ ಸದಸ್ಯತ್ವದ ಅರ್ಜಿಯನ್ನು ನಿರಾಕರಿಸಲಾಗಿದೆಯೋ ಆ ವ್ಯಕ್ತಿಯು ಸಲ್ಲಿಸಿದ ಅಪೀಲು ಯಾವುದಾದರೂ ಇದ್ದಲ್ಲಿ ಅದರ ಪರಿಗಣನೆ.**

**ನಡವಳಿ** : ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರಂತೆ ಸೌಹಾರ್ದ ಸಹಕಾರಿಗಳ ಸದಸ್ಯತ್ವವು ಸಂಯುಕ್ತ ಸಹಕಾರಿಯಲ್ಲಿ ಕಡ್ಡಾಯವಾಗಿರುವುದರಿಂದ ಯಾವುದೇ ಸಹಕಾರಿಯ ಸದಸ್ಯತ್ವವನ್ನು ನಿರಾಕರಿಸಲು ಸಾಧ್ಯವಿಲ್ಲದಿರುವುದರಿಂದ ಇದು ಅನ್ವಯಿಸದಿರುವ ವಿಷಯವನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ಮಂಡಿಸಿದರು. ಈ ವಿಷಯವನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ** : ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರಂತೆ ಸೌಹಾರ್ದ ಸಹಕಾರಿಗಳ ಸದಸ್ಯತ್ವವು ಸಂಯುಕ್ತ ಸಹಕಾರಿಯಲ್ಲಿ ಕಡ್ಡಾಯವಾಗಿರುವುದರಿಂದ ಯಾವುದೇ ಸಹಕಾರಿಯ ಸದಸ್ಯತ್ವವನ್ನು ನಿರಾಕರಿಸಲು ಸಾಧ್ಯವಿಲ್ಲದಿರುವುದರಿಂದ ಇದು ಅನ್ವಯಿಸದಿರುವುದನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 35 : ನಿರ್ದೇಶಕರುಗಳ ಅಥವಾ ಮುಖ್ಯಕಾರ್ಯನಿರ್ವಾಹಕನ ಸಂಬಂಧಿಗಳನ್ನು ನೇಮಕ ಮಾಡಿಕೊಂಡಿರುವಲ್ಲಿ ಆ ನೌಕರರ ಪಟ್ಟಿಯ ಪರಿಗಣನೆ.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯಲ್ಲಿ 2024-25ನೇ ಸಾಲಿನಲ್ಲಿ ಗುತ್ತಿಗೆ ಆಧಾರದಲ್ಲಿ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆಯನ್ನು ನಡೆಸಲಾಗಿದ್ದು, ಅತ್ಯಂತ ಪಾರದರ್ಶಕ ನಿಯಮಗಳನ್ನು ಪಾಲನೆ ಮಾಡುವುದರ ಮೂಲಕ ಸಿಬ್ಬಂದಿಗಳನ್ನು ಸಿಬ್ಬಂದಿ ನೇಮಕಾತಿ ಉಪ ಸಮಿತಿಯ ಮೂಲಕ ನೇಮಕಾತಿ ಮಾಡಿಕೊಳ್ಳಲಾಗಿದೆ. ಈ

ಉಪ ಸಮಿತಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು, ಓರ್ವ ನಿರ್ದೇಶಕರು, ಬಾಹ್ಯ ತಜ್ಞರಾಗಿ ಇಬ್ಬರು ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ನಿ) ಸದಸ್ಯರಾಗಿರುತ್ತಾರೆ. ಈ ನೇಮಕಾತಿ ಪ್ರಕ್ರಿಯೆಯ ವಿವರಗಳನ್ನು ಸಭೆಗೆ ನೀಡಲಾಗಿದೆ. ನೇಮಕವಾಗಿರುವ ಎಲ್ಲಾ ಸಿಬ್ಬಂದಿಗಳು ಯಾವ ಹುದ್ದೆಗೆ, ಯಾವ ವಿಭಾಗಕ್ಕೆ, ಯಾವ ಜಿಲ್ಲೆಗೆ ನಿಯೋಜಿಸಲಾಗಿದೆ ಎಂಬ ಮಾಹಿತಿಯನ್ನು ಸಭೆಗೆ ನೀಡಲಾಗಿದೆ. ಪ್ರಸ್ತುತ ನೇಮಕಗೊಂಡಿರುವ ಸಿಬ್ಬಂದಿಗಳಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳ ಅಥವಾ ವ್ಯವಸ್ಥಾಪಕ ನಿರ್ದೇಶಕರ ಸಂಬಂಧಿಗಳು ಇರುವುದಿಲ್ಲ. ಈ ಕುರಿತು ಅನುಮೋದಿಸಲು ಸಭೆಗೆ ಕೋರಿದರು.

ನಂತರ ಸಭೆಯು, ಸಂಯುಕ್ತ ಸಹಕಾರಿಯಲ್ಲಿ 2024–25ನೇ ಸಾಲಿನಲ್ಲಿ ನಡೆದಿರುವ ಗುತ್ತಿಗೆ ಆಧಾರದ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆಯಲ್ಲಿ ನೇಮಕಗೊಂಡಿರುವ ಸಿಬ್ಬಂದಿಗಳಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳ ಅಥವಾ ವ್ಯವಸ್ಥಾಪಕ ನಿರ್ದೇಶಕರ ಸಂಬಂಧಿಗಳು ಇಲ್ಲದೇ ಇರುವ ಮಾಹಿತಿಯನ್ನು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ** : ಸಂಯುಕ್ತ ಸಹಕಾರಿಯಲ್ಲಿ 2024–25ನೇ ಸಾಲಿನಲ್ಲಿ ನಡೆದಿರುವ ಗುತ್ತಿಗೆ ಆಧಾರದ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆಯಲ್ಲಿ ನೇಮಕಗೊಂಡಿರುವ ಸಿಬ್ಬಂದಿಗಳಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳ ಅಥವಾ ವ್ಯವಸ್ಥಾಪಕ ನಿರ್ದೇಶಕರ ಸಂಬಂಧಿಗಳು ಇಲ್ಲದೇ ಇರುವ ಮಾಹಿತಿಯನ್ನು ಸಭೆಯು ತನ್ನ ಅವಗಾಹನೆಗೆ ತೆಗೆದುಕೊಂಡು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 36 : ಸಂಯುಕ್ತ ಸಹಕಾರಿಯ ಉಪವಿಧಿ ತಿದ್ದುಪಡಿ ಕುರಿತು.**

**ನಡವಳಿ** : ಮೇಲಿನ ವಿಷಯದ ಕುರಿತು ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕಳೆದ ಸಂಯುಕ್ತ ಸಹಕಾರಿಯ 22ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಒಪ್ಪಿಗೆ ಸೂಚಿಸಿದ್ದ ಸಂಯುಕ್ತ ಸಹಕಾರಿಯ ಪ್ರಸ್ತಾಪಿತ ಉಪವಿಧಿ ತಿದ್ದುಪಡಿಯಲ್ಲಿ ಒಂದು ಅಂಶವನ್ನು ಮಾನ್ಯ ಸಹಕಾರಿಗಳ ನಿಬಂಧಕರಿಂದ ಅನುಮೋದನೆಯ ಸಂದರ್ಭದಲ್ಲಿ ತಿರಸ್ಕೃತವಾಗಿದ್ದು, ಸದರಿ ಅಂಶವಾದ 'ಸಭೆಗಳನ್ನು ನಡೆಸುವ ಸ್ಥಳ'ವನ್ನೊಳಗೊಂಡಂತೆ ಪ್ರಸ್ತುತ ನಾಮಮಾತ್ರ ಸದಸ್ಯರು, ಸಮಿತಿಯ ಸದಸ್ಯರ ಸಂಖ್ಯೆ, ನೌಕರರ ಸಾಂದರ್ಭಿಕ ರಜೆ ಈ ವಿಷಯಗಳಿಗೆ ಸಂಬಂಧಿಸಿದಂತೆ ಸಂಯುಕ್ತ ಸಹಕಾರಿಯ ಉಪವಿಧಿಗೆ ಪ್ರಸ್ತಾಪಿತ ತಿದ್ದುಪಡಿಗಳನ್ನು ಸಭೆಗೆ ಮಂಡಿಸಲಾಗಿದೆ. ಸೌಹಾರ್ದ ಸಹಕಾರಿಗಳನ್ನು ಹೊರತುಪಡಿಸಿ 1959ರ ಸಹಕಾರ ಸಂಘಗಳು, ಬಹುರಾಜ್ಯ ಸಹಕಾರ ಸಂಘಗಳು, ಸಂಘ ಸಂಸ್ಥೆಗಳನ್ನು ಸಂಯುಕ್ತ ಸಹಕಾರಿಯ ಸದಸ್ಯರನ್ನಾಗಿ ಮಾಡಿಕೊಂಡು ವಿಶೇಷ ಸೇವೆಯನ್ನು ಪಡೆದುಕೊಳ್ಳಲು ಅನುವಾಗುಂತೆ ನಾಮಮಾತ್ರ ಸದಸ್ಯರು ಈ ಅಂಶವನ್ನು ಸೇರ್ಪಡೆ ಮಾಡಲಾಗಿದೆ. ಪ್ರಸ್ತುತ ಸಭೆಗೆ ಮಂಡಿಸಲಾಗಿರುವ ಸಂಯುಕ್ತ ಸಹಕಾರಿಯ ಉಪವಿಧಿ ತಿದ್ದುಪಡಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಅನುಮೋದಿಸಲು ಸಭೆಗೆ ಕೋರಿದರು.

ನಂತರ ಸಭೆಯು, ಸಂಯುಕ್ತ ಸಹಕಾರಿಯ ಉಪವಿಧಿಗೆ ಪ್ರಸ್ತುತ ಪ್ರಸ್ತಾಪಿಸಲಾಗಿರುವ ನಾಮಮಾತ್ರ ಸದಸ್ಯರು, ಸಭೆಗಳನ್ನು ನಡೆಸುವ ಸ್ಥಳ, ಸಮಿತಿಯ ಸದಸ್ಯರ ಸಂಖ್ಯೆ, ನೌಕರರ ಸಾಂದರ್ಭಿಕ ರಜೆ ಈ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಸ್ತಾಪಿತ ತಿದ್ದುಪಡಿಗಳಿಗೆ ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿ, ಅದರಂತೆ ಪ್ರಸ್ತಾಪಿತ ತಿದ್ದುಪಡಿಗಳನ್ನು ಅನುಮೋದನೆಗಾಗಿ ಮಾನ್ಯ ಸಹಕಾರಿಗಳ ನಿಬಂಧಕರಿಗೆ ಸಲ್ಲಿಸಲು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

**ನಿರ್ಣಯ** : ಸಂಯುಕ್ತ ಸಹಕಾರಿಯ ಉಪವಿಧಿಗೆ ಪ್ರಸ್ತುತ ಪ್ರಸ್ತಾಪಿಸಲಾಗಿರುವ ನಾಮಮಾತ್ರ ಸದಸ್ಯರು, ಸಭೆಗಳನ್ನು ನಡೆಸುವ ಸ್ಥಳ, ಸಮಿತಿಯ ಸದಸ್ಯರ ಸಂಖ್ಯೆ, ನೌಕರರ ಸಾಂದರ್ಭಿಕ ರಜೆ ಈ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಸ್ತಾಪಿತ ತಿದ್ದುಪಡಿಗಳಿಗೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿ, ಅದರಂತೆ ಪ್ರಸ್ತಾಪಿತ ತಿದ್ದುಪಡಿಗಳನ್ನು ಅನುಮೋದನೆಗಾಗಿ ಮಾನ್ಯ ಸಹಕಾರಿಗಳ ನಿಬಂಧಕರಿಗೆ ಸಲ್ಲಿಸಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

## ಉಪವಿಧಿ ತಿದ್ದುಪಡಿ ಪ್ರಸ್ತಾವನೆ

| ಉಪವಿಧಿ ಸಂಖ್ಯೆ | ತಿದ್ದುಪಡಿಗೆ ಪೂರ್ವದಲ್ಲಿ ಉಪವಿಧಿ ವಿವರ | ಉಪವಿಧಿ ಸಂಖ್ಯೆ | ತಿದ್ದುಪಡಿ ಸ್ವೀಕರಿಸಿದ ನಂತರ ಆಗುವ ಉಪವಿಧಿ ವಿವರ | ತಿದ್ದುಪಡಿಗೆ ಕಾರಣಗಳು |
|---|---|---|---|---|
| 11 | ಹೊಸದು | 11 | ನಾಮಮಾತ್ರ ಸದಸ್ಯರು :<br>1) ಸಂಯುಕ್ತ ಸಹಕಾರಿಯು ಹಾಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ರಚನೆಗೊಂಡ ಕರ್ನಾಟಕ ರಾಜ್ಯದಲ್ಲಿ ನೋಂದಾಯಿತ ಕಛೇರಿಯನ್ನು ಹೊಂದಿರುವ ಸಂಸ್ಥಾ ರೂಪದ ವ್ಯಕ್ತಿಗಳನ್ನು ನಿರ್ದಿಷ್ಟ ಅವಧಿಗೆ ನಿರ್ದಿಷ್ಟ ಉದ್ದೇಶಗಳಿಗಾಗಿ ನಾಮಮಾತ್ರ ಸದಸ್ಯನನ್ನಾಗಿ ಸೇರಿಸಿಕೊಳ್ಳಬಹುದು. ಆ ರೀತಿ ಸೇರಿಸಿಕೊಂಡ ನಾಮಮಾತ್ರ ಸದಸ್ಯನು ಸಂಯುಕ್ತ ಸಹಕಾರಿಗೆ ಅಗತ್ಯ ಸೇವೆಗಳನ್ನು ನೀಡುವ ಅಥವಾ ಸಂಯುಕ್ತ ಸಹಕಾರಿಯು ನಾಮಮಾತ್ರ ಸದಸ್ಯರುಗಳಿಗಾಗಿ ನಿರ್ದಿಷ್ಟಪಡಿಸಿದ ಸೇವೆಗಳನ್ನು ಪಡೆಯುವ ಸ್ಥಿತಿಯಲ್ಲಿ ಇರತಕ್ಕದ್ದು.<br>2) ನಾಮಮಾತ್ರ ಸದಸ್ಯತ್ವಕ್ಕೆ ಪ್ರವೇಶ :<br>ಎ) ನಾಮಮಾತ್ರ ಸದಸ್ಯರಾಗಬಯಸುವವರು ನಿಗದಿಪಡಿಸಿದ ಪ್ರವೇಶ ಶುಲ್ಕವನ್ನು ಪಾವತಿ ಮಾಡಿ ಲಿಖಿತದಲ್ಲಿ ಅರ್ಜಿ ಸಲ್ಲಿಸತಕ್ಕದ್ದು.<br>ಬಿ) ಮಂಡಲಿಯು ನಾಮಮಾತ್ರ ಸದಸ್ಯತ್ವ ಕೋರಿ ಬಂದಿರುವ ಯಾವುದೇ ಅರ್ಜಿಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಹೊಂದಿರತಕ್ಕದ್ದು. ಯಾವುದೇ ವ್ಯಕ್ತಿಗೆ, ನಾಮಮಾತ್ರ ಸದಸ್ಯತ್ವವನ್ನು ತಿರಸ್ಕರಿಸಿದರೆ ಅರ್ಜಿ ಶುಲ್ಕವನ್ನು ಹಿಂತಿರುಗಿಸತಕ್ಕದ್ದಲ್ಲ. ಈ ಬಗ್ಗೆ ನಿರ್ಣಯ ಕೈಗೊಂಡ ಹದಿನೈದು ದಿನಗಳಲ್ಲಿ ಅಂತಹ ವ್ಯಕ್ತಿಗೆ ಅವನ ಅರ್ಜಿ ತಿರಸ್ಕೃತವಾದ ಬಗ್ಗೆ ತಿಳಿಸತಕ್ಕದ್ದು ಮತ್ತು ಪ್ರವೇಶ ಶುಲ್ಕವನ್ನು ಹಿಂತಿರುಗಿಸತಕ್ಕದ್ದು.<br>3) ನಾಮಮಾತ್ರ ಸದಸ್ಯರ ಹಕ್ಕು ಮತ್ತು ಕರ್ತವ್ಯಗಳು :<br>ಎ) ನಾಮಮಾತ್ರ ಸದಸ್ಯರು ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಅಥವಾ ವಿಶೇಷ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು, ನೋಟೀಸು ಪಡೆಯಲು ಅರ್ಹರಾಗಿರತಕ್ಕದ್ದಲ್ಲ.<br>ಬಿ) ಸಂಯುಕ್ತ ಸಹಕಾರಿಯ ಯಾವುದೇ ನಿರ್ದೇಶಕ ಅಥವಾ ಪದಾಧಿಕಾರಿ ಸ್ಥಾನಕ್ಕೆ ಸ್ಪರ್ಧಿಸುವುದಕ್ಕಾಗಲೀ ಅಥವಾ ಮತದಾನ ಮಾಡುವುದಕ್ಕಾಗಲೀ ನಾಮಮಾತ್ರ ಸದಸ್ಯರು ಅರ್ಹರಾಗಿರತಕ್ಕದ್ದಲ್ಲ. | ಇಸ್ಟಾಂಪ್, ಸಿಎಸ್ ಸಿ ಸೇರಿದಂತೆ ಕೆಲವು ಸೇವೆಗಳನ್ನು ಸೌಹಾರ್ದ ಸಹಕಾರಿಗಳಲ್ಲದ ವರಿಗೂ ನೀಡಲು ಅನುವಾಗಲು |

ಸಿ) ಸಂಸ್ಥಾ ರೂಪದ ನಾಮಮಾತ್ರ ಸದಸ್ಯರು ಪ್ರತಿ ವರ್ಷ ಸೆಪ್ಟಂಬರ್ 30ರೊಳಗಾಗಿ ತಮ್ಮ ಸಂಸ್ಥೆಯ ಹಿಂದಿನ ವರ್ಷದ ಲೆಕ್ಕಪರಿಶೋಧನಾ ವರದಿಯನ್ನು ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು.

ಡಿ) ಪ್ರತಿ ಸಂಸ್ಥಾರೂಪದ ನಾಮಮಾತ್ರ ಸದಸ್ಯನು ಈ ಕೆಳಗಿನಂತೆ, ಪ್ರತಿ ವರ್ಷ ಸೆಪ್ಟಂಬರ್ 30ರೊಳಗೆ, ಹಿಂದಿನ ವರ್ಷಾಂತ್ಯಕ್ಕೆ ಇದ್ದ ಅದರ ದುಡಿಯುವ ಬಂಡವಾಳಕ್ಕೆ ಅನುಗುಣವಾಗಿ ವಾರ್ಷಿಕ ಶುಲ್ಕವನ್ನು ಸಂಯುಕ್ತ ಸಹಕಾರಿಗೆ ಪಾವತಿಸತಕ್ಕದ್ದು. ಆ ಸಹಕಾರ ವರ್ಷದಲ್ಲಿ ಸೇರ್ಪಡೆಯಾದ ಸಂಸ್ಥಾರೂಪದ ನಾಮಮಾತ್ರ ಸದಸ್ಯರು ಆ ವರ್ಷದ ಡಿಸೆಂಬರ್ 31ರೊಳಗೆ ಸೇರ್ಪಡೆಯಾದಲ್ಲಿ ಸದರಿ ಸಾಲಿನ ಶುಲ್ಕವನ್ನು ಜನವರಿ 31 ರೊಳಗೆ ನೀಡತಕ್ಕದ್ದು.

| ಸಂಖ್ಯೆ | ದುಡಿಯುವ ಬಂಡವಾಳ ರೂ.ಗಳಲ್ಲಿ | ವಾರ್ಷಿಕ ಶುಲ್ಕ ರೂ.ಗಳಲ್ಲಿ |
|---|---|---|
| 1 | 10 ಲಕ್ಷಕ್ಕಿಂತ ಕಡಿಮೆ | 1,000 |
| 2 | 10 ಲಕ್ಷಕ್ಕಿಂತ ಹೆಚ್ಚು 1 ಕೋಟಿಗಿಂತ ಕಡಿಮೆ | 3,000 |
| 3 | 1 ಕೋಟಿಗಿಂತ ಹೆಚ್ಚು 10 ಕೋಟಿಗಿಂತ ಕಡಿಮೆ | 5,000 |
| 4 | 10 ಕೋಟಿಗಿಂತ ಹೆಚ್ಚು 50 ಕೋಟಿಗಿಂತ ಕಡಿಮೆ | 10,000 |
| 5 | 50 ಕೋಟಿಗಿಂತ ಹೆಚ್ಚು | 20,000 |

ದುಡಿಯುವ ಬಂಡವಾಳ = ಶೇರು ಬಂಡವಾಳ + ಕಾಯ್ದಿಟ್ಟ ನಿಧಿ ಹಾಗೂ ಇತರೆ ನಿಧಿಗಳು + ಎಲ್ಲಾ ವಿಧದಲ್ಲಿ ಸ್ವೀಕರಿಸಿದ ಠೇವಣಿಗಳು + ಪಡೆದ ಸಾಲ

ಇ) ನಾಮಮಾತ್ರ ಸದಸ್ಯರು ಸಂಯುಕ್ತ ಸಹಕಾರಿಯು ನಾಮಮಾತ್ರ ಸದಸ್ಯರಿಗೆ ನಿರ್ದಿಷ್ಟ ಪಡಿಸುವ ಸೇವೆಗಳನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

ಎಫ್)ನಾಮಮಾತ್ರ ಸದಸ್ಯನು ಸಂಯುಕ್ತ ಸಹಕಾರಿಗೆ ಮುನ್ಸೂಚನೆ ಕೊಟ್ಟು ಕೆಲಸದ ವೇಳೆಯಲ್ಲಿ ತಾನು ಮಾಡಿದ ವ್ಯವಹಾರಗಳಿಗೆ ಸಂಬಂಧಿಸಿದ ವಿವರಗಳನ್ನು, ದಾಖಲೆಗಳನ್ನು ಪರಿಶೀಲಿಸುವ ಮತ್ತು ಅವುಗಳ ಪ್ರತಿಗಳನ್ನು ಮಂಡಲಿಯು ನಿಗದಿಪಡಿಸಿದ ಶುಲ್ಕವನ್ನು ಪಾವತಿಸಿ ಪಡೆಯುವ ಹಕ್ಕುಳ್ಳವನಾಗಿರತಕ್ಕದ್ದು.

ಜಿ) ನಾಮಮಾತ್ರ ಸದಸ್ಯನು ಸಂಯುಕ್ತ ಸಹಕಾರಿಯ ಉಪವಿಧಿಗಳನ್ನು, ಲೆಕ್ಕಪರಿಶೋಧನಾ ವರದಿಯನ್ನು, ವ್ಯವಹಾರಗಳ ನಿಯಮಗಳನ್ನು ಕಛೇರಿ ಸಮಯದಲ್ಲಿ

| | | | | |
|---|---|---|---|---|
| | | | ಪರಿಶೀಲಿಸುವ ಮತ್ತು ಅವುಗಳ ಪ್ರತಿಗಳನ್ನು ಮಂಡಲಿಯು ನಿಗದಿಪಡಿಸಿದ ಶುಲ್ಕವನ್ನು ಪಾವತಿಸಿ ಪಡೆಯುವ ಹಕ್ಕುಳ್ಳವನಾಗಿರತಕ್ಕದ್ದು.<br>4) ನಾಮಮಾತ್ರ ಸದಸ್ಯತ್ವ ಮುಕ್ತಾಯ :<br>ಯಾವುದೇ ನಾಮಮಾತ್ರ ಸದಸ್ಯನ ಸದಸ್ಯತ್ವದ ಅವಧಿ ಮುಕ್ತಾಯವಾದ ತಕ್ಷಣ ಅವನ ಸದಸ್ಯತ್ವ ಕೊನೆಗೊಳ್ಳತಕ್ಕದ್ದು. ಆದಾಗ್ಯೂ ಯಾವುದೇ ನಾಮಮಾತ್ರ ಸದಸ್ಯನು ಸದಸ್ಯತ್ವದ ಕರ್ತವ್ಯಗಳನ್ನು ನಿರ್ವಹಿಸದಿದ್ದಲ್ಲಿ ಸಂಯುಕ್ತ ಸಹಕಾರಿಯ ಮಂಡಲಿಯು, ಅಂತಹ ಸದಸ್ಯನಿಗೆ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶ ನೀಡಿದ ತರುವಾಯ ಸದಸ್ಯತ್ವವನ್ನು ಮುಕ್ತಾಯಗೊಳಿಸುವ ಅಧಿಕಾರ ಹೊಂದಿರತಕ್ಕದ್ದು. | |
| 11 | New | 11 | **Nominal Members:**<br>1) The Federal Cooperative may, in its interest, admit, any body incorporated and having its registered office with in Karnataka, as a nominal member for a specific period and for specific purpose. Such person or institution shall be in a position to provide the services required by the Federal Cooperative. or obtain the services specified by the Federal Cooperative for nominal members.<br>2) Admission for Nominal membership<br>a) Any person seeking admission as nominal membership, shall make an application in writing and on payment of the prescribed admission fee.<br>b) The board shall have power to either accept or reject any such application. In case membership is refused, the application fee paid by the applicant shall not be refunded to him. The applicant shall be informed in writing about the rejection within fifteen days from the date of taking such a decision and the admission fee shall be refunded to him.<br>3) Rights and duties of the Nominal Members.<br>a) A nominal member shall not be entitled to recive notice or participate in any general body meeting or special general | |

body meeting of the Federal Cooperative.

b) A nominal member shall not have the right to vote at election to the board and shall not be eligible to be elected as a director or an office-bearer of the Federal Cooperative.

c) Every Instituional Nominal members shall submit thier audit report of preceeding year before, 30th September of every year.

d) Every Instituional Nominal members shall pay annual fee based on their working capital at the closure of the previous year, before, 30th September of every year at the rates as given below. Those Instituional Nominal members are admitted before 31st December of that cooperative year, shall pay annual fee before 31st Janaury of that year.

| Sl. No. | Working Capital (In Rs.) | Annual Fee (In Rs.) |
|---|---|---|
| 1 | Below 10 lakhas | 1000 |
| 2 | 10 lakhs and above but less than 1 crore | 3000 |
| 3 | 1 crore and above but less than 10 crore | 5000 |
| 4 | 10 crore and above but less than 50 crore | 10000 |
| 5 | 50 crore and above | 20000 |

Working Capital = Paid up Share Capital + Reserve Fund & Other Funds + of all types Deposits + Borrowing.

e) A nominal member shall have right to avail the services preiscribed by the Federal Cooperative.

f) A Nominal Member shall have access to the particulars of his transactions made with Federal Cooperative and the related records with prior intimation during the office hours and obtain the copies after payment of the prescribed fee as may be decided by the board.

g) A Nominal Member may view bye-laws, subsidiary rules or annual accounts of Federal Cooperative with prior intimation

| | | | | |
|---|---|---|---|---|
| | | | during the business hours and obtain the copies after payment of prescribed fees as may be decided by the board.<br>4) Ceasation of Nominal Membership,-<br>A person shall loose his nominal membership on the date of completion of his period of his membership. However if any nominal member fails to disharge his duties satisfactorily, the board shall have power to terminate his membership after giving an reasonable opportunity of being heard. | |
| 31 | ಸಭೆಗಳನ್ನು ನಡೆಸುವ ಸ್ಥಳ : ಮಂಡಲಿಯ ಸಭೆಗಳೂ ಸೇರಿದಂತೆ ಎಲ್ಲಾ ಸಭೆಗಳನ್ನು ಸಾಮಾನ್ಯವಾಗಿ ಸಂಯುಕ್ತ ಸಹಕಾರಿಯ ನೋಂದಾಯಿತ ಕಛೇರಿ ಇರುವ ಪ್ರಧಾನ ಸ್ಥಳದಲ್ಲಿ ನಡೆಸತಕ್ಕದ್ದು. ವಿಶೇಷ ಸಂದರ್ಭಗಳಲ್ಲಿ ಕಾರ್ಯವ್ಯಾಪ್ತಿಯ ಬೇರಾವುದೇ ಸ್ಥಳದಲ್ಲಿ ಅಂಥ ಸಭೆಯನ್ನು ನಡೆಸಬಹುದು. | 31 | ಸಭೆಗಳನ್ನು ನಡೆಸುವ ಸ್ಥಳ : ಮಂಡಲಿಯ ಸಭೆಗಳೂ ಸೇರಿದಂತೆ ಎಲ್ಲಾ ಸಭೆಗಳನ್ನು ಸಾಮಾನ್ಯವಾಗಿ ಸಂಯುಕ್ತ ಸಹಕಾರಿಯ ನೋಂದಾಯಿತ ಕಛೇರಿ ಇರುವ ಪ್ರಧಾನ ಸ್ಥಳದಲ್ಲಿ ನಡೆಸತಕ್ಕದ್ದು. ವಿಶೇಷ ಸಂದರ್ಭದಲ್ಲಿ ಕಾರ್ಯವ್ಯಾಪ್ತಿಯ ಬೇರಾವುದೇ ಸ್ಥಳದಲ್ಲಿ ನಡೆಸಬಹುದು ಅಥವಾ ಸಂದರ್ಭಾನುಸಾರ ವಿಡಿಯೋ ಕಾನ್ಫರೆನ್ಸ್ / ವರ್ಚುವಲ್ ಮೂಲಕ ಅಂಥ ಸಭೆಗಳನ್ನು ನಡೆಸಬಹುದು. | ತಂತ್ರಜ್ಞಾನವನ್ನು ಅಳವಡಿಸಿ ಕೊಳ್ಳಲು ಅನುವಾಗುವಂತೆ |
| 31 | **Place of Meeting:** Generally all the meetings including the board meetings shall be held in the registered office. The meetings may be held within the area of operation on special occasions. | 31 | **Place of Meeting:** Generally all the meetings including the board meetings shall be held in the registered office. In a special occation or circumstances, the meetings may be held in any other places within the area of operation or by video conference/virtual. | |
| 35 | ಸಮಿತಿಗಳು:<br>. . . . . .<br>2) ಇಂಥ ಸಮಿತಿಯ ಸದಸ್ಯರ ಸಂಖ್ಯೆಯು ಕನಿಷ್ಠ ಮೂರು ಇರತಕ್ಕದ್ದು ಆದರೆ ಐದನ್ನು ಮೀರತಕ್ಕದ್ದಲ್ಲ. ಸಮಿತಿಯ ಸದಸ್ಯರಲ್ಲೊಬ್ಬನು ಸಮಿತಿಯ ಅಧ್ಯಕ್ಷನಾಗಿರತಕ್ಕದ್ದು. ಮತ್ತು ವ್ಯವಸ್ಥಾಪಕ ನಿರ್ದೇಶಕ ಅಥವಾ ಆ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಯು ಸಮಿತಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸತಕ್ಕದ್ದು. | 358 | ಸಮಿತಿಗಳು:<br>. . . . . .<br>2) ಇಂಥ ಸಮಿತಿಯ ಸದಸ್ಯರ ಸಂಖ್ಯೆಯು ಕನಿಷ್ಠ ಮೂರು ಇರತಕ್ಕದ್ದು. ಆದರೆ ವ್ಯವಸ್ಥಾಪಕ ನಿರ್ದೇಶಕರನ್ನು ಹೊರತುಪಡಿಸಿ, ಐದನ್ನು ಮೀರತಕ್ಕದ್ದಲ್ಲ. ಸಮಿತಿಯ ಸದಸ್ಯರಲ್ಲೊಬ್ಬನು ಸಮಿತಿಯ ಅಧ್ಯಕ್ಷನಾಗಿರತಕ್ಕದ್ದು ಮತ್ತು ವ್ಯವಸ್ಥಾಪಕ ನಿರ್ದೇಶಕ ಅಥವಾ ಆ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಯು ಸಮಿತಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸತಕ್ಕದ್ದು. | ಸಮಿತಿ ನಿರ್ದೇಶಕರ ಸಂಖ್ಯೆ ಹೆಚ್ಚಿಸಲು |

| | | | | |
|---|---|---|---|---|
| 35 | **committees:**<br>. . . . . . .<br>2) Such committee shall consist of a minimum of three, but shall not excedding five members. A member of the committee shall be chairperson and Managing Director or any officer working in that post shall act as the secretary of th committee. | 35 | **committees:**<br>. . . . . . .<br>2) Such committee shall consist of a minimum of three, but excluding Managing Director, shall not exceed five members. A member of the committee shall be chairperson and Managing Director or any officer working in that post shall act as the secretary of th committee. | |
| 46(2) | ಒಂದು ಕ್ಯಾಲೆಂಡರು ವರ್ಷದಲ್ಲಿ ಒಬ್ಬ ನೌಕರನಿಗೆ ಹದಿನೈದು ದಿನಗಳ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಬಹುದು. ಸಾಂದರ್ಭಿಕ ರಜೆಯನ್ನು ವರ್ಷದಿಂದ ವರ್ಷಕ್ಕೆ ಒಟ್ಟುಗೂಡಿಸಿಕೊಳ್ಳಲು ಅಥವಾ ಮುಂದಕ್ಕೊಯ್ಯಲಾಗದು. ಸಾಮಾನ್ಯವಾಗಿ ಒಂದು ಸಲಕ್ಕೆ, ಮಧ್ಯಂತರದಲ್ಲಿ ರಜೆಗಳು/ಸಾರ್ವತ್ರಿಕ ರಜೆಗಳು ಸೇರಿದಂತೆ, ಏಳು ದಿನಗಳಿಗಿಂತ ಹೆಚ್ಚಾಗಿ ಸಾಂದರ್ಭಿಕ ರಜೆಯನ್ನು ಅನುಮತಿಸತಕ್ಕುದಲ್ಲ. | 46(2) | ಒಂದು ಕ್ಯಾಲೆಂಡರು ವರ್ಷದಲ್ಲಿ ಒಬ್ಬ ನೌಕರನಿಗೆ ಹನ್ನೆರಡು ದಿನಗಳ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಬಹುದು. ಸಾಂದರ್ಭಿಕ ರಜೆಯನ್ನು ವರ್ಷದಿಂದ ವರ್ಷಕ್ಕೆ ಒಟ್ಟುಗೂಡಿಸಿಕೊಳ್ಳಲು ಅಥವಾ ಮುಂದಕ್ಕೊಯ್ಯಲಾಗದು. ಸಾಮಾನ್ಯವಾಗಿ ಒಂದು ಸಲಕ್ಕೆ ಮೂರು ದಿನಗಳಿಗಿಂತ ಹೆಚ್ಚಾಗಿ ಸಾಂದರ್ಭಿಕ ರಜೆಯನ್ನು ಅನುಮತಿಸತಕ್ಕುದಲ್ಲ. | ಎರಡನೇ ಶನಿವಾರ ರಜೆ ನೀಡಿರುವ ಕಾರಣ, ಸಾಂದರ್ಭಿಕ ರಜೆಗಳನ್ನು ಈಗಾಗಲೇ ಸೇವಾ ನಿಯಮ ತಿದ್ದುಪಡಿ ಮೂಲಕ ಕಡಿಮೆ ಮಾಡಿದ್ದು, ಅದಕ್ಕೆ ಪೂರಕ ತಿದ್ದುಪಡಿ. |
| 46(2) | Fifteen days casual leave may be granted to a permanant employee in a calendar year. Casual leave cannot be accumulated or carried forward from year to year. Casual leave shall not ordinarily be allowed for more than seven days at a time / inclusive of intervening holidays, if any. | 46(2) | Twelve days casual leave may be granted to a permanant employee in a calendar year. Casual leave cannot be accumulated or carried forward from year to year. Casual leave shall not ordinarily be allowed for more than three days at a time. | |

**ವಿಷಯ 37 : ಅಧ್ಯಕ್ಷರ ಒಪ್ಪಿಗೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು.**

**ನಡವಳಿ** : ಮೇಲಿನ ವಿಷಯದ ಸಂದರ್ಭದಲ್ಲಿ ಸಭೆಯಲ್ಲಿ ಮಾತನಾಡಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಅಧ್ಯಕ್ಷರ ಅಪ್ಪಣೆಯ ಮೇರೆಗೆ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಗೆ ಸಂಬಂಧಿಸಿದ ಯಾವುದೇ ವಿಷಯಗಳ ಕುರಿತಂತೆ ಪ್ರಶ್ನೆಗಳನ್ನು ಕೇಳಲು ಇಚ್ಛಿಸುವವರು ವಿಷಯಗಳನ್ನು ದಿನಾಂಕ 14.08.2025ರೊಳಗಾಗಿ kssfcladmin@souharda.coop ಈ ಇ–ಮೇಲ್ ಐಡಿಗೆ ಕಳುಹಿಸಲು ತಿಳಿಸಲಾಗಿತ್ತು. ಅದರಂತೆ, ಶುಕಪುರಿ ಸೌಹಾರ್ದ ಸಹಕಾರಿ ಸಂಘ ನಿ., ಗಿಣಿಗೇರಿ, ಶ್ರೀ ನಗರೇಶ್ವರ ಸೌಹಾರ್ದ ಪತ್ತಿನ ಸಹಕಾರ ಸಂಘ ನಿ., ಬೆಂಗಳೂರು, ದಿ ಜುಮನಾಳ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಜುಮನಾಳ, ಸಿಂಧು ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ,. ಸಿಂಧನೂರು, ಇಗ್ಗುತ್ತಪ್ಪ ಸೌಹಾರ್ದ ಕ್ರೆಡಿಟ್ ಕೋಆಪರೇಟಿವ್ ಲಿ., ಪೊನ್ನಂಪೇಟೆ ಈ 05 ಸದಸ್ಯ ಸಹಕಾರಿಗಳಿಂದ ಒಟ್ಟು 19 ಪ್ರಶ್ನೆಗಳು ಸ್ವೀಕೃತವಾಗಿರುತ್ತದೆ. ಈ ಪ್ರಶ್ನೆಗಳಿಗೆ ಲಿಖಿತ ರೂಪದಲ್ಲಿ ಉತ್ತರಗಳನ್ನು ಒದಗಿಸಲಾಗಿದೆ. ಇದಕ್ಕೆ ಒಂದು ಉಪ ಪ್ರಶ್ನೆಯನ್ನು ಕೇಳಲು ಅವಕಾಶ ಇರುತ್ತದೆ. ಇದರೊಂದಿಗೆ ಸದರಿಯವರ ಪ್ರಶ್ನೆಗಳಿಗೆ ಉತ್ತರಿಸಿದ ನಂತರ ಉಳಿದ ಸದಸ್ಯ ಸಹಕಾರಿಗಳಿಗೆ ಪ್ರಶ್ನೆಗಳನ್ನು ಕೇಳಲು ಅವಕಾಶ ನೀಡಲಾಗುತ್ತದೆ. ಇವುಗಳನ್ನು ಹೊರತುಪಡಿಸಿ ಇನ್ನಾವುದೇ ವಿಷಯಗಳಿದ್ದಲ್ಲಿ ಮಾನ್ಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ ವಿಷಯವನ್ನು ತೆಗೆದುಕೊಳ್ಳಲಿದ್ದಾರೆ ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ಅಜೆಂಡಾವಾರು ವಿಷಯಗಳ ಮಂಡನೆಯ ನಂತರ ಲಿಖಿತವಾಗಿ ಪ್ರಶ್ನೆ ಕೇಳಿರುವ ಸೌಹಾರ್ದ ಸಹಕಾರಿಗಳ ಪ್ರಶ್ನೆಗಳಿಗೆ ಈಗಾಗಲೇ ಲಿಖಿತವಾಗಿ ಉತ್ತರಗಳನ್ನು ನೀಡಲಾಗಿದ್ದು, ಸದರಿಯವರುಗಳಿಗೆ ಪೂರಕ ಪ್ರಶ್ನೆಗಳನ್ನು ಕೇಳಲು ಅವಕಾಶ ನೀಡಲಾಯಿತು. ಅವುಗಳ ವಿವರಗಳು ಈ ಕೆಳಗಿನಂತಿದೆ;

**ದಿ ಜುಮನಾಳ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಜುಮನಾಳ.**

ಮೇಲ್ಕಂಡ ಸೌಹಾರ್ದ ಸಹಕಾರಿಯು ಲಿಖಿತವಾಗಿ ಕೇಳಿರುವ ಪ್ರಶ್ನೆಗಳಿಗೆ ಈ ಕೆಳಗಿನಂತೆ ಲಿಖಿತ ರೂಪದಲ್ಲಿ ಉತ್ತರ ನೀಡಲಾಗಿದೆ ಎಂದು ಮಾನ್ಯ ಅಧ್ಯಕ್ಷರು ಸಭೆಗೆ ತಿಳಿಸಿದರು.

**ಪ್ರಶ್ನೆ** : ಕಾರ್ಯನಿರತವಲ್ಲದ 1148 ಸಹಕಾರಿಗಳಿಗೆ ತಾವು ತೆಗೆದುಕೊಂಡ ಕ್ರಮ ಏನು ಮತ್ತು ಆ ಸಹಕಾರ ಸಂಘದಲ್ಲಿ ಇಟ್ಟಿರುವ ಠೇವಣಿದಾರರ ಕಥೆ ಏನು. ಇದಕ್ಕೆ ತಮ್ಮಿಂದ ಕ್ರಮ ಏನು.

**ಉತ್ತರ** : ಕಾರ್ಯನಿರ್ವಹಿಸದೇ ಇರುವ ಸಹಕಾರಿಗಳಿಗೆ ಸಂಬಂಧಿಸಿದ ಮಂಡಳಿ ಸದಸ್ಯರನ್ನು ಭೇಟಿ ಮಾಡಿ ಪುನಶ್ಚೇತನ ಮಾಡಲು ಪ್ರಯತ್ನಿಸಲಾಗುತ್ತಿದೆ. ಹಿಂದಿನ 2–3 ವರ್ಷಗಳಲ್ಲಿ 35ಕ್ಕೂ ಹೆಚ್ಚು ಸಹಕಾರಿಗಳ ಪುನಶ್ಚೇತನ ಮಾಡಲಾಗಿದೆ. ಪುನಶ್ಚೇತನ ಸಾಧ್ಯವಿಲ್ಲದ ಹಾಗೂ ಠೇವಣಿದಾರರ ದೂರುಗಳು ಇಲ್ಲದ ಸಹಕಾರಿಗಳ ಸಮಾಪನೆಗೆ ಶಿಫಾರಸ್ಸು ಮಾಡಲಾಗುತ್ತಿದೆ. ಪ್ರಸ್ತುತ 328 ಸಹಕಾರಿಗಳ ಸಮಾಪನೆಗೆ ಆದೇಶವಾಗಿರುತ್ತದೆ. ಕೆಲವು ಸಹಕಾರಿಗಳ ಕುರಿತು ಮಾತ್ರ ಠೇವಣಿದಾರರ ದೂರುಗಳು ಇದ್ದು, ಅಂತಹ ಸಹಕಾರಿಗಳ ವಿಷಯದಲ್ಲಿ, ಠೇವಣಿದಾರರಿಗೆ ಠೇವಣಿ ಮರುಪಾವತಿ ಮಾಡುವ ಕುರಿತು ಕ್ರಮವಿಡಲಾಗುತ್ತಿದೆ.

**ಪ್ರಶ್ನೆ** : ಅವಧಿ ಠೇವಣಿಗಳಿಗೆ ಬಡ್ಡಿ ದರವು ಶೇ.10 ಮೀರತಕ್ಕದಲ್ಲ ಎಂದರೆ, ಜಿಲ್ಲಾ ಮಧ್ಯವರ್ತಿ ಮತ್ತು ಸಹಕಾರ ಬ್ಯಾಂಕುಗಳು ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳಲ್ಲಿ ಶೇ.09 ರಂತೆ ಬಡ್ಡಿ ದರ ಇರುತ್ತದೆ. ಠೇವಣಿ ಮಾಡುವವರು ನಮ್ಮ ಸೌಹಾರ್ದಗಳಲ್ಲಿ ಹೇಗೆ ಮಾಡುತ್ತಾರೆ. ಆದ್ದರಿಂದ ಬಡ್ಡಿ ದರದಲ್ಲಿ ಬದಲಾವಣೆ ಮಾಡಬೇಕು.

**ಉತ್ತರ** : ಸೌಹಾರ್ದ ಸಹಕಾರಿಗಳಲ್ಲಿ ಬಡ್ಡಿ ದರ ನಿಗದಿ ಮಾಡುವ ಅಧಿಕಾರ ಆಡಳಿತ ಮಂಡಲಿಗೆ ನಿಯುಕ್ತಿಯಾಗಿರುತ್ತದೆ. ಆದಾಗ್ಯೂ ಹೆಚ್ಚು ಬಡ್ಡಿ ನೀಡಿದಲ್ಲಿ, ಸಾಲಕ್ಕೂ ಹೆಚ್ಚಿನ ಬಡ್ಡಿದರ ನಿಗದಿಪಡಿಸಬೇಕಿದ್ದು, ಇದರಿಂದ ಉತ್ತಮ ಸಾಲಗಾರರು ಸಿಗದೇ, ಮರುಪಾವತಿಯ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ ಬಡ್ಡಿದರಗಳ ಸ್ಪರ್ಧಾತ್ಮಕ ಇರಬೇಕಾದರೂ ಹೆಚ್ಚಿನ ಬಡ್ಡಿದರ ನೀಡುವುದು ಸಹಕಾರಿಗೆ ಋಣಾತ್ಮಕ ಪರಿಣಾಮ ಬೀರುತ್ತದೆ. ಆದ್ದರಿಂದ ಶೇ.10 ಬಡ್ಡಿದರ ಸರಿ ಇದೆ.

**ಪ್ರಶ್ನೆ** : ಪಂಚಾಯತ ಪ್ರಕರಣ (A B N) ದಾವಾ ದಾಖಲಿಸಲು ಸಹಕಾರಿಗಳಿಗೆ ಬಹಳ ತೊಂದರೆಯಾಗುತ್ತಿದ್ದು, ಕನಿಷ್ಠ 3–4 ಬಾರಿ ದಾವಾ ದಾಖಲು ಮಾಡಲಿಕ್ಕೆ ಹೋಗಬೇಕಾಗುತ್ತದೆ. ಅದನ್ನು ಸರಳೀಕರಣಗೊಳಿಸಬೇಕು.

**ಉತ್ತರ** : ದಾವಾ ದಾಖಲಿಸಲು ಅವಶ್ಯವಿರುವ ದಾಖಲೆಗಳನ್ನು ಸರಿಯಾಗಿ ಲಗತ್ತಿಸಿದ ಪಕ್ಷದಲ್ಲಿ ಕೇವಲ ಒಂದು ಬಾರಿ ದಾವಾ ಪಂಚಾಯಿತಿ ನ್ಯಾಯಾಲಯಕ್ಕೆ ಆಗಮಿಸಬೇಕಾಗುತ್ತದೆ. ಸರಳೀಕರಣ ಕುರಿತು ಪೀಠಾಧಿಕಾರಿಗಳ ಜೊತೆ ಚರ್ಚಿಸಲಾಗುವುದು.

ನಂತರ ಸಭೆಯಲ್ಲಿ ದಿ ಜುಮನಾಳ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಜುಮನಾಳ ಸಹಕಾರಿಯ ಡೆಲಿಗೇಟ್ ಆದ ಶ್ರೀ ಯಮನಪ್ಪ ಸಾತಿಹಾಳ ಇವರು ಮಾತನಾಡಿ ಈಗಾಗಲೇ ಲಿಖಿತವಾಗಿ ಕೇಳಿರುವ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ನೀಡಲಾಗಿದೆ. ಸೌಹಾರ್ದ ಸಹಕಾರಿಗಳಿಂದ ದಾವೆಗಳನ್ನು ದಾಖಲಿಸಲು ತೊಂದರೆಯಾಗುತ್ತಿದೆ. 20 ಪ್ರಕರಣಗಳನ್ನು ದಾಖಲಿಸಿದಲ್ಲಿ ಚೀಲಗಟ್ಟಲೆ ದಾಖಲಾತಿಗಳನ್ನು ಒಯ್ಯಬೇಕು. ಈಗಾಗಲೇ ರಿಜಿಸ್ಟರ್‌ನಲ್ಲಿರುವ ದಾಖಲಾತಿಗಳನ್ನೇ ಜೆರಾಕ್ಸ್ ಮಾಡಿ ನಕಲು ಪ್ರತಿಯನ್ನು ಸಲ್ಲಿಸಿರುತ್ತೇವೆ. ಆದರೆ, ಮೂಲ ಲೆಡ್ಜರ್ ಅನ್ನೇ ತರಬೇಕೆಂದು 441 ನ್ಯಾಯಾಲಯದಿಂದ ತಿಳಿಸುತ್ತಿದ್ದಾರೆ. ದಾವೆ ದಾಖಲಿಸುವುದಕ್ಕೂ ತೊಂದರೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಇದನ್ನು ಸರಳೀಕರಣ ಮಾಡಬೇಕು. ಅಲ್ಲದೇ, ದಾವಾ ಪ್ರಕರಣಗಳ ಇತ್ಯರ್ಥ ಮುಕ್ತಾಯವಾಗಬೇಕೆಂದರೆ 7–8 ತಿಂಗಳುಗಳ ಸಮಯಾವಕಾಶವನ್ನು ತೆಗೆದುಕೊಳ್ಳುತ್ತಿದೆ. ದಯವಿಟ್ಟು ಈ ಕುರಿತಂತೆ ಅಧಿಕಾರಿಗಳೊಂದಿಗೆ ಚರ್ಚಿಸಿ, ಸಮಸ್ಯೆಯನ್ನು ಪರಿಹರಿಸಬೇಕೆಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿ ಮಾತನಾಡಿದ ಮಾನ್ಯ ಅಧ್ಯಕ್ಷರು ದಾವೆ ದಾಖಲಿಸುವ ಸಮಸ್ಯೆಗೆ ಸಂಬಂಧಿಸಿದಂತೆ ದಾವೆ ದಾಖಲಿಸುವ ಸಂದರ್ಭದಲ್ಲಿಯೇ ಒಂದೇ ಬಾರಿ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿದಲ್ಲಿ ಪ್ರಕರಣವು ತಕ್ಷಣವೇ ದಾಖಲಾಗುತ್ತದೆ. ದಾಖಲಾದ ದಾವೆಗಳನ್ನು ಆದಷ್ಟು ಶೀಘ್ರವಾಗಿ ಇತ್ಯರ್ಥಗೊಳಿಸಲು ಸಂಯುಕ್ತ ಸಹಕಾರಿಯಿಂದ ಸಾಕಷ್ಟು ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಬೆಂಗಳೂರು ನ್ಯಾಯಾಲಯದಲ್ಲಿ ಈ ರೀತಿಯ ಸಮಸ್ಯೆ ಇದ್ದರೂ ಬಹಳ ಕಡಿಮೆ, ಬಹುಶಃ ಆ ರೀತಿ ಸಮಸ್ಯೆ ಇರುವುದಿಲ್ಲ. ಬೆಳಗಾವಿ ನ್ಯಾಯಾಲಯದಲ್ಲಿ ಈ ರೀತಿಯ ಸಮಸ್ಯೆಗಳಿದ್ದು, ಇದಕ್ಕೆ ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. ದಾವಾ ಪ್ರಕರಣಗಳ ಇತ್ಯರ್ಥವು ಯಾವ ಸಂದರ್ಭದಲ್ಲಿ ವಿಳಂಬವಾಗುತ್ತದೆ ಎಂದರೆ ಎದುರುಗಡೆ ಪಾರ್ಟಿಯವರೂ ಸಹ ವಕೀಲರನ್ನು ನೇಮಕ ಮಾಡಿಕೊಂಡು ಪ್ರಕರಣದ ಸುನಾವಣೆಯಲ್ಲಿ ಹಾಜರಾಗುತ್ತಾರೆ. ಆ ಸಂದರ್ಭದಲ್ಲಿ ಎದುರು ಪಾರ್ಟಿಯವರು ಸಮಯವನ್ನು ಕೇಳಿದಾಗ ಅವರಿಗೂ ಸಹ ಸಮಯಾವಕಾಶವನ್ನು ನೀಡಬೇಕಿರುತ್ತದೆ. ಇಂತಹ ಸಂದರ್ಭಗಳಲ್ಲಿ ಮಾತ್ರ ವಿಳಂಬವಾಗುತ್ತಿದೆ. ಹಾಗೆಯೇ, ನ್ಯಾಯಾಲಯಕ್ಕೆ ಅಗತ್ಯವಿರುವ ಎಲ್ಲಾ ದಾಖಲಾತಿಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಈ ವಿಷಯದಲ್ಲಿ ಸಂಯುಕ್ತ ಸಹಕಾರಿಯು ಮಧ್ಯಪ್ರವೇಶಿಸಲು ಸಾಧ್ಯವಿರುವುದಿಲ್ಲ. ನ್ಯಾಯಾಲಯವು ದಾಖಲಾತಿಗಳನ್ನು ಯಾವ ರೀತಿ ಕೇಳುತ್ತದೆಯೋ ಅದೇ ರೀತಿಯಲ್ಲಿಯೇ ದಾಖಲಾತಿಗಳನ್ನು ಸಲ್ಲಿಸಬೇಕಿರುತ್ತದೆ. ಅದು ನಮ್ಮ ಕರ್ತವ್ಯವು ಸಹ ಆಗಿರುತ್ತದೆ ಎಂದು ತಿಳಿಸಿದರು.

ಸಭೆಯಲ್ಲಿ ಮುಂದುವರೆದು ಮಾತನಾಡಿದ ಮಾನ್ಯ ಡೆಲಿಗೇಟ್‌ರವರು ಎದುರು ಪಕ್ಷದವರು ಸುನಾವಣೆಗೆ ಹಾಜರಾಗದೇ ಇದ್ದರೂ ಸಹ ನಾವೇ ಅಪರಾಧಿ ಎಂದು ತೋರಿಸಿಕೊಡುತ್ತಿದ್ದಾರೆ ಎಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿ ಮಾತನಾಡಿದ ಮಾನ್ಯ ಅಧ್ಯಕ್ಷರು ತಾವು ತಿಳಿಸಿರುವ ಅಂಶಗಳನ್ನು ಮಾನ್ಯ ಪೀಠಾಧಿಕಾರಿಗಳ ಗಮನಕ್ಕೆ ತಂದು ಆದಷ್ಟು ಬೇಗ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.

**ಶುಕಪುರಿ ಸೌಹಾರ್ದ ಸಹಕಾರಿ ಸಂಘ ನಿ., ಗಿಣಿಗೇರಿ.**

ಮೇಲ್ಕಂಡ ಸೌಹಾರ್ದ ಸಹಕಾರಿಯು ಲಿಖಿತವಾಗಿ ಕೇಳಿರುವ ಪ್ರಶ್ನೆಗಳಿಗೆ ಈ ಕೆಳಗಿನಂತೆ ಲಿಖಿತ ರೂಪದಲ್ಲಿ ಉತ್ತರ ನೀಡಲಾಗಿದೆ ಎಂದು ಮಾನ್ಯ ಅಧ್ಯಕ್ಷರು ಸಭೆಗೆ ತಿಳಿಸಿದರು.

**ಪ್ರಶ್ನೆ** : ಸೌಹಾರ್ದ ಸಹಕಾರಿ ಒಂದು ಸಮಾನ ಮನಸ್ಕರು ಸೇರಿ ಒಂದು ಸಹಕಾರಿ ಪ್ರಾರಂಭ ಮಾಡುತ್ತಾರೆ. ತದ ನಂತರ ಅವರ ವ್ಯವಹಾರ ಏನು ಮಾಡುವುದಿಲ್ಲ, ಒಬ್ಬ ಸದಸ್ಯನಿಗಾದರೂ

ಸಾಲ ವಿತರಣೆ ಮಾಡಿದ ಒಂದು ಉದಾಹರಣೆ ಇಲ್ಲ, ಇದು ಸಂಯುಕ್ತ ಸಹಕಾರಿಗೆ ಗೊತ್ತಿದ್ದರೂ ಯಾಕೆ ಸಂಯುಕ್ತ ಸಹಕಾರಿ ಆಡಳಿತ ಮಂಡಳಿ ಮೌನವಿದೆ, ಕೆಲವು ಸಹಕಾರಿಗಳು ಈ ತರ ಮಾಡುವುದರಿಂದ ಉಳಿದ ಸಹಕಾರಿಗಳಿಗೆ ಇದು ಒಂದು ಅಸ್ತ್ರ ಆಗುತ್ತದೆ, ಇತರ ಸಹಕಾರಿಗಳಿಗೆ ಆಡಳಿತ ಮಂಡಳಿ ಉತ್ತೇಜನ ಕೊಟ್ಟಿರುವ ತರ ಆಗುತ್ತದೆ. ಇದನ್ನು ಬದಲಾವಣೆಗೆ ತರಬೇಕೆಂದು ತಮ್ಮಲ್ಲಿ ವಿನಂತಿ.

**ಉತ್ತರ** : ಕಾಯ್ದೆಯಲ್ಲಿ ಪ್ರತಿಯೊಂದು ಸದಸ್ಯರು ಸಹಕಾರಿಯೊಡನೆ ಕನಿಷ್ಠ ಮಟ್ಟದ ವ್ಯವಹಾರ ಮಾಡುವುದನ್ನು ಕಡ್ಡಾಯ ಮಾಡಿದ್ದು, ಕನಿಷ್ಠ ವ್ಯವಹಾರ ನಿರ್ವಹಿಸದಿದ್ದಲ್ಲಿ, ಅಂತಹ ಸದಸ್ಯರು ನಿರ್ದೇಶಕರಾಗಿ ಮುಂದುವರೆಯಲು ಅನರ್ಹರಾಗುತ್ತಾರೆ. ಈ ಕುರಿತು ಸಂಯುಕ್ತ ಸಹಕಾರಿಗೆ ಅರ್ಜಿ ಸಲ್ಲಿಕೆಯಾದಲ್ಲಿ ಅಂತಹ ನಿರ್ದೇಶಕರಾಗಿ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡಿದ ತರುವಾಯ ಸಂಯುಕ್ತ ಸಹಕಾರಿಯು ನಿರ್ದೇಶಕ ಸ್ಥಾನದಿಂದ ಅನರ್ಹತೆಯ ಆದೇಶ ಮಾಡುತ್ತದೆ. ಸ್ವಯಂಪ್ರೇರಿತವಾಗಿ ಪ್ರಕರಣ ತೆಗೆದುಕೊಳ್ಳಲು ಅವಕಾಶ ಇರುವುದಿಲ್ಲ.

**ಪ್ರಶ್ನೆ** : ಸೌಹಾರ್ದ ಸಹಕಾರಿ ಪ್ರಾರಂಭವಾಗಿ 25 ಕಳೆದವು, ನಮ್ಮ ರಾಜ್ಯದಲ್ಲಿ ಸೌಹಾರ್ದ ಸದಸ್ಯರ ಸಂಖ್ಯೆ 6130, ಸಹಕಾರ ಅಭಿವೃದ್ಧಿ ಆಗಬೇಕಾದರೆ ಓದುವ ಮಕ್ಕಳಿಗೆ ಶಾಲೆಯ ಪಾಠದಲ್ಲಿ ಒಂದು ಪಾಠವಾಗಿ ಬರಬೇಕು, ಸಹಕಾರ ಕ್ಷೇತ್ರದ ಅವಗಾ ಅಭಿವೃದ್ಧಿಯಾಗುತ್ತದೆ. ಸಹಕಾರಿ ಅಭಿವೃದ್ಧಿ ಆಗಲಿಕ್ಕೆ ಯುವಕರಿಗೆ ಮತ್ತು ಯುವತಿಯರು ಸಹಕಾರಿ ಕ್ಷೇತ್ರಕ್ಕೆ ಬರಬೇಕು, ಸರಕಾರ ಮಟ್ಟದಲ್ಲಿ ಹೋರಾಟ ಮಾಡಿ ತರಲು ಸಂಯುಕ್ತ ಸಹಕಾರಿ ಈ ಕೆಲಸ ಮಾಡುತ್ತದೆ ಅನ್ನುವ ಭರವಸೆ ಕೂಡಾ ನಮ್ಮ ಸಹಕಾರಿ ಆಡಳಿತ ಮಂಡಳಿ ತಮ್ಮ ಮೇಲೆ ಭರವಸೆ ಇಟ್ಟಿರುತ್ತಾರೆ.

**ಉತ್ತರ** : ಉತ್ತಮ ಸಲಹೆ, ಈಗಾಗಲೇ ವಿಶ್ವವಿದ್ಯಾಲಯಗಳ ಪಠ್ಯಕ್ರಮದಲ್ಲಿ ಸೇರಿಸಲು ಪ್ರಯತ್ನ ಜಾರಿಯಲ್ಲಿರುತ್ತದೆ.

**ಪ್ರಶ್ನೆ** : ಸಹಕಾರ ಪಿತಾಮಹ ಸಿದ್ದನಗೌಡ ತ/ ಸಣ್ಣರಾಮನಗೌಡ ಪಾಟೀಲ ಕರ್ನಾಟಕ ರಾಜ್ಯದ ಧಾರಾವಾಡ ಜಿಲ್ಲೆಯ ಕಣಗಿನಾಳ ಗ್ರಾಮದಲ್ಲಿ ಜನಿಸಿ, ಸಹಕಾರ ಕ್ಷೇತ್ರವನ್ನು ಹುಟ್ಟು ಹಾಕಿದರು, ಅವರ ಸಹಕಾರ ಕ್ಷೇತ್ರದ ಕೊಡುಗೆ ಬಹಳ ಇದೆ, ಅವರ ಜಯಂತಿಯನ್ನು ಆಚರಣೆ ಮಾಡಲು ಸೌಹಾರ್ದ ಸಹಕಾರಿಗಳಿಗೆ ಆದೇಶ ಹೊರಡಿಸಬೇಕು. [ನನ್ನ ಸವಿನಯ ಪ್ರಾರ್ಥನೆ ತಮಗೆ]

**ಉತ್ತರ** : ತಮ್ಮ ಸಲಹೆ ಕುರಿತು ಚರ್ಚಿಸಿ, ಸೂಕ್ತ ಕ್ರಮವಿಡಲಾಗುವುದು.

**ಪ್ರಶ್ನೆ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಸ್ಥಾಪನಾ ದಿನಾಚರಣೆ ಆಚರಣೆ ಮಾಡಬೇಕು, ಪ್ರತಿ ವರ್ಷ ಜನವರಿ 1ನೇ ತಾರೀಖು ಇದನ್ನು ಸಹಕಾರಿಗಳಲ್ಲಿ ಅದರ ಹೆಸರಿನಲ್ಲಿ ಏನಾದರೂ ಒಂದು ಹೊಸ ಕಾರ್ಯಕ್ರಮ ಮಾಡುವುದಕ್ಕೆ ಸಹಕಾರಿಗಳು ಮುಂದಾಗುತ್ತಾರೆ.

**ಉತ್ತರ** : ಜನವರಿ 01ರಂದು ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದ ಹಿನ್ನೆಲೆಯಲ್ಲಿ ಸಹಕಾರ ಧ್ವಜಾರೋಹಣ ಮಾಡಲಾಗುತ್ತಿದೆ. ಈಗಾಗಲೇ ಸೌಹಾರ್ದ ಸಹಕಾರಿಗಳು ಜನವರಿ 01ರಂದು ಸಸಿ ನೆಡುವ ಕಾರ್ಯಕ್ರಮ, ರಕ್ತದಾನ ಹಾಗೂ ಇತರೆ ಸಾಮಾಜಿಕ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ.

**ಪ್ರಶ್ನೆ** : ಸರಕಾರ ಆದೇಶ ಮಾಡಿರುವಂತ ಜಯಂತಿಗಳು ಕೆಲವು ಸಹಕಾರಿಗಳು ಮಾತ್ರ ಆಚರಣೆ ಮಾಡುತ್ತಾರೆ, ಕೆಲವು ಸಹಕಾರಿಗಳು ಮಾತ್ರ ಮಾಡುವುದಿಲ್ಲ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ವತಿಯಿಂದ ಕಡ್ಡಾಯ ಆದೇಶ ಮಾಡಬೇಕೆಂದು ತಮ್ಮಲ್ಲಿ ವಿನಂತಿ.

**ಉತ್ತರ** : ತಮ್ಮ ಸಲಹೆ ಕುರಿತು ಆಡಳಿತ ಮಂಡಳಿಯಲ್ಲಿ ಚರ್ಚಿಸಿ, ಸೂಕ್ತ ನಿರ್ಣಯ ಕೈಗೊಳ್ಳಲಾಗುವುದು.

ನಂತರ ಸಭೆಯಲ್ಲಿ ಶುಕಪುರಿ ಸೌಹಾರ್ದ ಸಹಕಾರಿ ಸಂಘ ನಿ., ಗಿಣಿಗೇರಿ ಸೌಹಾರ್ದ ಸಹಕಾರಿಯ ಡೆಲಿಗೇಟ್ ಆದ ಶ್ರೀ ಶರಣಪ್ಪ ಹ್ಯಾಟಿರವರು ಮಾತನಾಡಿ ಇತ್ತೀಚಿಗೆ ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿಯಾಗಿದ್ದು, ಈ ತಿದ್ದುಪಡಿಗಳ ಕುರಿತಂತೆ ಸಂಯುಕ್ತ ಸಹಕಾರಿಯ ನಿಲುವನ್ನು ತಿಳಿಸಬೇಕೆಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿ ಮಾತನಾಡಿದ ಮಾನ್ಯ ಅಧ್ಯಕ್ಷರು ಈ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಸಮಯದ ಅಗತ್ಯತೆ ಇರುವುದರಿಂದ ಸದರಿ ವಿಷಯದ ಕುರಿತಂತೆ ಕೊನೆಯಲ್ಲಿ ಚರ್ಚಿಸಲಾಗುವುದು. ಕಾಯ್ದೆ ತಿದ್ದುಪಡಿಯ ಕುರಿತಂತೆ ಇನ್ನೂ ಸಹ ಪೂರ್ಣವಾದ ಮಾಹಿತಿಯು ದೊರೆತಿರುವುದಿಲ್ಲ. ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ ಎಷ್ಟು ಸಾಧ್ಯವೋ ಅಷ್ಟು ಚರ್ಚಿಸಲಾಗುವುದು ಎಂದು ತಿಳಿಸಿದರು.

**ಸಿಂಧು ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಸಿಂಧನೂರು.**

ಮೇಲ್ಕಂಡ ಸೌಹಾರ್ದ ಸಹಕಾರಿಯು ಲಿಖಿತವಾಗಿ ಕೇಳಿರುವ ಪ್ರಶ್ನೆಗಳಿಗೆ ಈ ಕೆಳಗಿನಂತೆ ಲಿಖಿತ ರೂಪದಲ್ಲಿ ಉತ್ತರ ನೀಡಲಾಗಿದೆ ಎಂದು ಮಾನ್ಯ ಅಧ್ಯಕ್ಷರು ಸಭೆಗೆ ತಿಳಿಸಿದರು.

**ಪ್ರಶ್ನೆ** : ಸೌಹಾರ್ದ ಸಹಕಾರಿಗಳಲ್ಲಿ ಕಾರ್ಯನಿರ್ವಹಿಸುವ ಪ್ರಭಾರ ಮುಖ್ಯಕಾರ್ಯನಿರ್ವಾಹಕರು ಎಷ್ಟು ವರ್ಷಗಳ ವರೆಗೆ ಪ್ರಭಾರ ಕಾರ್ಯನಿರ್ವಹಿಸಬಹುದು.

**ಉತ್ತರ** : ಈ ಕುರಿತು ನಿರ್ಣಯಿಸಲು ಸಹಕಾರಿಯ ಆಡಳಿತ ಮಂಡಲಿಯು ಸಕ್ಷಮವಾಗಿರುತ್ತದೆ.

**ಪ್ರಶ್ನೆ** : ಪ್ರಭಾರ ಮುಖ್ಯಕಾರ್ಯನಿರ್ವಾಹಕರ ವಯಸ್ಸಿನ ಕನಿಷ್ಠ ಮತ್ತು ಗರಿಷ್ಠ ಮಾನದಂಡವೇನು.

**ಉತ್ತರ** : ಈ ಕುರಿತು ನಿರ್ಣಯಿಸಲು ಸಹಕಾರಿಯ ಆಡಳಿತ ಮಂಡಲಿಯು ಸಕ್ಷಮವಾಗಿರುತ್ತದೆ.

**ಪ್ರಶ್ನೆ** : ಕೆಲವು ಸೌಹಾರ್ದ ಸಹಕಾರಿಗಳಲ್ಲಿ ನಿವೃತ್ತ ನೌಕರರು (ಸರಕಾರಿ ಅಥವಾ ಖಾಸಗಿ) ಮುಖ್ಯ ಕಾರ್ಯನಿರ್ವಾಹಕರಾಗಿ ಸೇವೆ ಸಲ್ಲಿಸುತ್ತಿರುವುದು ಎಷ್ಟು ಸರಿ.

**ಉತ್ತರ** : ಕಾಯ್ದೆಯಲ್ಲಿ ಸಿಬ್ಬಂದಿ ವಯೋಮಿತಿ ಕುರಿತು ಯಾವುದೇ ಮಾನದಂಡಗಳು ಇರುವುದಿಲ್ಲ. ಈ ಕುರಿತು ನಿರ್ಣಯಿಸಲು ಸಹಕಾರಿಯ ಆಡಳಿತ ಮಂಡಲಿಯು ಸಕ್ಷಮವಾಗಿರುತ್ತದೆ.

**ಪ್ರಶ್ನೆ** : ಕಾಯ್ದೆ ವ್ಯಾಪ್ತಿಯಲ್ಲಿ ಯಾವ ಆಧಾರದ ಮೇಲೆ ಪ್ರಭಾರ ಮುಖ್ಯಕಾರ್ಯನಿರ್ವಾಹಕರಿಗೆ ಹೊಣೆಗಾರಿಕೆಯನ್ನು ನಿಗದಿಪಡಿಸಬಹುದು.

**ಉತ್ತರ** : ಮುಖ್ಯಕಾರ್ಯನಿರ್ವಾಹಕನನ್ನು ಹೇಗೆ ಹೊಣೆಗಾರ ಮಾಡಲಾಗುತ್ತದೆಯೋ ಅದೇ ರೀತಿ ಹೊಣೆಗಾರ ಮಾಡಬಹುದು.

**ಪ್ರಶ್ನೆ** : ಸಹಕಾರಿ ಪ್ರಭಾರ ಕಾರ್ಯನಿರ್ವಾಹಕರ ಜವಾಬ್ಧಾರಿಯಲ್ಲಿ ಉದ್ದೇಶಪೂರ್ವಕವಾಗಿ ಅಥವಾ ಬೇರಾವುದೇ ಕಾರಣದಿಂದ ಸಹಕಾರಿಯು ನಷ್ಟ ಅನುಭವಿಸಿದರೆ ಯಾರನ್ನ ಹೊಣೆಗಾರರನ್ನಾಗಿ ಮಾಡಲು ಕಾನೂನಿನಲ್ಲಿ ಅಥವಾ ಸೌಹಾರ್ದ ಸಂಯುಕ್ತ ಸಹಕಾರಿಯ ಮಾರ್ಗಸೂಚಿಯಲ್ಲಿ ಯಾವುದಾದರು ಮಾನದಂಡವನ್ನು ನಿಗದಿಪಡಿಸಲಾಗಿದೆಯೇ.

**ಉತ್ತರ** : ಮುಖ್ಯಕಾರ್ಯನಿರ್ವಾಹಕನನ್ನು ಹೇಗೆ ಹೊಣೆಗಾರ ಮಾಡಲಾಗುತ್ತದೆಯೋ ಅದೇ ರೀತಿ ಹೊಣೆಗಾರ ಮಾಡಬಹುದು. ಪ್ರಭಾರ ಮುಖ್ಯಕಾರ್ಯನಿರ್ವಾಹಕನ ಕುರಿತು ಪ್ರತ್ಯೇಕ ಮಾನದಂಡಗಳು ಇರುವುದಿಲ್ಲ.

**ಪ್ರಶ್ನೆ** : ಕೆಲವು ಸೌಹಾರ್ದ ಸಹಕಾರಿಗಳಲ್ಲಿ ಅದರಲ್ಲೂ ವಿಶೇಷವಾಗಿ ಪತ್ತಿನ ಸೌಹಾರ್ದ ಸಹಕಾರಿಗಳಲ್ಲಿ ಅಧ್ಯಕ್ಷರನ್ನಾಗಿ ಮನೆಯ ಸದಸ್ಯರನ್ನ ನೇಮಕ ಮಾಡಿ ಮನೆಯ ಮತ್ತಾರೋ ಪ್ರಭಾರ ಮುಖ್ಯಕಾರ್ಯನಿರ್ವಾಹಕರಾಗಿ ಕಾರ್ಯನಿರ್ವಹಿಸುತ್ತಿರುವುದು ಎಷ್ಟು ಸರಿ.

**ಉತ್ತರ** : ಸಹಕಾರಿಯ ನಿರ್ದೇಶಕರ ಸಂಬಂಧಿಗಳನ್ನು ಮುಖ್ಯಕಾರ್ಯನಿರ್ವಾಹನನ್ನಾಗಿ ನೇಮಕ ಮಾಡಿಕೊಂಡಿದ್ದಲ್ಲಿ, ಸದರಿ ವಿಷಯದ ಕುರಿತು ಸಾಮಾನ್ಯ ಸಭೆಗೆ ವಿಷಯ ಮಂಡಿಸಿ ಅನುಮೋದನೆ ಪಡೆದುಕೊಳ್ಳತಕ್ಕದ್ದು ಎಂದು ಕಾಯ್ದೆ ಕಲಂ 23(ಕ್ಯೂ) ರಲ್ಲಿ ನಿಗದಿಪಡಿಸಿದೆ.

**ಪ್ರಶ್ನೆ** : ಪ್ರಭಾರ ಮುಖ್ಯ ಕಾರ್ಯನಿರ್ವಾಹಕರ ಜವಾಬ್ಧಾರಿಯಲ್ಲಿ ಆರ್ಥಿಕ ನಷ್ಟವನ್ನು ಸಹಕಾರಿಯು ಅನುಭವಿಸಿದರೆ ಅದಕ್ಕೆ ಸಹಕಾರಿಯ ಆಡಳಿತ ಮಂಡಳಿ ಆರ್ಥಿಕ ನಷ್ಟಕ್ಕೆ ಹೊಣೆಗಾರಿಕೆ ಇದೆಯೇ.

**ಉತ್ತರ :** ಸಹಕಾರಿಯ ಆರ್ಥಿಕ ನಷ್ಟಕ್ಕೆ ಮುಖ್ಯಕಾರ್ಯನಿರ್ವಾಹಕ ಹಾಗೂ ಅವನನ್ನು ನೇಮಕ ಮಾಡಿದ ಆಡಳಿತ ಮಂಡಲಿ ಇಬ್ಬರೂ ಹೊಣೆಗಾರರು.

**ಗಮನಿಸಿ :** ಕಾಯ್ದೆಯಂತೆ ಮುಖ್ಯಕಾರ್ಯನಿರ್ವಾಹಕ ಎಂದರೆ, ಕಾಯ್ದೆಯಡಿ ಮುಖ್ಯಕಾರ್ಯನಿರ್ವಾಹಕನಿಗೆ ನಿಗದಿಪಡಿಸಿದ ಕರ್ತವ್ಯಗಳನ್ನು ನಿರ್ವಹಿಸಲು ಮಂಡಲಿಯಿಂದ ನೇಮಕವಾದ ಯಾವುದೇ ಪದನಾಮದಿಂದ ಕರೆಯಲ್ಪಡುವ ನೌಕರ. ಇದರಲ್ಲಿ ಪ್ರಭಾರ ಇರಲಿ ಅಥವಾ ಪೂರ್ಣಾವಧಿಗೆ ಇರಲಿ ಹೊಣೆಗಾರಿಕೆ ವ್ಯತ್ಯಾಸ ಆಗುವುದಿಲ್ಲ ಹಾಗೂ ಮುಖ್ಯಕಾರ್ಯನಿರ್ವಾಹಕನ ಸಂಬಂಧದಲ್ಲಿ ತೆಗೆದುಕೊಳ್ಳುವ ಎಲ್ಲಾ ಕ್ರಮಗಳು ಪ್ರಭಾರ ಮುಖ್ಯಕಾರ್ಯನಿರ್ವಾಹಕನಿಗೂ ಅನ್ವಯವಾಗುತ್ತದೆ.

ನಂತರ ಸಭೆಯಲ್ಲಿ ಸಿಂಧು ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಸಿಂಧನೂರು ಸಹಕಾರಿಯ ಡೆಲಿಗೇಟ್ ಆದ ಶ್ರೀ ಬಿ.ರಾಜಶೇಖರವರು ಮಾತನಾಡಿ ನಾನು ಲಿಖಿತವಾಗಿ ಕೇಳಿರುವ ಪ್ರಶ್ನೆಗಳಿಗೆ ಲಿಖಿತವಾಗಿ ಉತ್ತರಗಳನ್ನು ನೀಡಿರುವುದಕ್ಕೆ ಮೊದಲಿಗೆ ಧನ್ಯವಾದಗಳನ್ನು ಸಲ್ಲಿಸಿದರು. ನಾನು ಕೇಳಿರುವ ಪ್ರಶ್ನೆಗಳು ಯಾವುದೇ ಕಾರಣಕ್ಕೂ ಯಾವುದೇ ವೈಯಕ್ತಿಕ ಅಲ್ಲ. ಕಾನೂನು ವ್ಯಾಪ್ತಿಗೆ ಬರುವ ಪ್ರಶ್ನೆಗಳಾಗಿರುವುದರಿಂದ ದಯವಿಟ್ಟು ಆಡಳಿತ ಮಂಡಲಿಯು ಮತ್ತೊಮ್ಮೆ ಪರಿಶೀಲಿಸಿ, ಸಾಧ್ಯವಾದರೆ ಕಾಯ್ದೆಯಲ್ಲಿ, ಸಂಯುಕ್ತ ಸಹಕಾರಿಯ ನಿಯಮಾವಳಿಗಳಲ್ಲಿ ಸೇರ್ಪಡೆ ಮಾಡುವುದು ಬಹಳ ಒಳ್ಳೆಯದು. ಇಲ್ಲವಾದಲ್ಲಿ ಕೆಲವು ಸೌಹಾರ್ದ ಸಹಕಾರಿಗಳಲ್ಲಿ ಮುಖ್ಯಕಾರ್ಯನಿರ್ವಾಹಕರಿಂದ ಈಗಾಗಲೇ ಬಹಳಷ್ಟು ಅನ್ಯಾಯವಾಗಿದೆ. ಈ ಹಿನ್ನೆಲೆಯಲ್ಲಿ ಇದನ್ನು ಪರಿಗಣಿಸುವುದು ಬಹಳ ಅಗತ್ಯವಾಗಿದೆ. ಬಹಳಷ್ಟು ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳು ಮುಜುಗರಕ್ಕೆ ಒಳಗಾಗಿದ್ದೇವೆ. ಸೌಹಾರ್ದ ಸಹಕಾರಿ ಕಾಯ್ದೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಬಹಳಷ್ಟು ಸಂದರ್ಭದಲ್ಲಿ ಕೇಳುತ್ತಿದ್ದಾರೆ. ಹಾಗಾಗಿ ನಾನು ತಮ್ಮಲ್ಲಿ ಮಾಡುವ ಮನವಿ ಏನೆಂದರೆ ನಾನು ಲಿಖಿತವಾಗಿ ಕೇಳಿರುವ ಪ್ರಶ್ನೆಗಳನ್ನು ಆಡಳಿತ ಮಂಡಲಿಯಲ್ಲಿ ಮತ್ತೊಮ್ಮೆ ಪರಿಶೀಲಿಸಬೇಕು. ಸಾಧ್ಯವಾದರೆ ಕಾಯ್ದೆಯ ವ್ಯಾಪ್ತಿಗೆ ಅಥವಾ ಸುತ್ತೋಲೆಗಳಲ್ಲಿ ತರುವಂತಹ ಪ್ರಯತ್ನ ಮಾಡಬೇಕು ಎಂದು ವಿನಂತಿಸಿದರು.

ಇದಕ್ಕೆ ಪ್ರತಿಕ್ರಿಯಿಸಿ ಮಾತನಾಡಿದ ಮಾನ್ಯ ಅಧ್ಯಕ್ಷರು ತಾವು ಕೇಳಿರುವ ಮೊದಲನೆಯ ಪ್ರಶ್ನೆಗೆ ಸಂಬಂಧಿಸಿದಂತೆ, ಕೆಲವೊಂದು ಸೌಹಾರ್ದ ಸಹಕಾರಿಗಳಲ್ಲಿ ಮುಖ್ಯಕಾರ್ಯನಿರ್ವಾಹಕರನ್ನು ಪ್ರಭಾರದಲ್ಲಿ ನೇಮಕ ಮಾಡಿಕೊಂಡು 2, 10, 15 ವರ್ಷಗಳವರೆಗೆ ಮುಂದುವರೆಸಿರುತ್ತಾರೆ. ಆ ಕಾರಣಕ್ಕೆ ಪ್ರಭಾರ ಮುಖ್ಯಕಾರ್ಯನಿರ್ವಾಹಕರು ಎಷ್ಟು ವರ್ಷಗಳವರೆಗೆ ಕಾರ್ಯನಿರ್ವಹಿಸಬಹುದೆಂದು ತಿಳಿಸಲು ಸಾಧ್ಯವಿರುವುದಿಲ್ಲ. ಆದಷ್ಟು ಮುಖ್ಯಕಾರ್ಯನಿರ್ವಾಹಕರನ್ನು ಪ್ರಭಾರ ಬದಲು ಪೂರ್ಣಾವಧಿಯಲ್ಲಿ ಖಾಯಂ ಸಿಬ್ಬಂದಿಯಾಗಿ ನೇಮಕ ಮಾಡಿಕೊಳ್ಳುವುದು ಉತ್ತಮ ಎಂದು ಶಿಫಾರಸ್ಸಾಗಿ ಹೇಳುತ್ತಿದ್ದೇವೆ. ಏಕೆಂದರೆ ಸೌಹಾರ್ದ ಸಹಕಾರಿಯ ಸಂಪೂರ್ಣ ಜವಾಬ್ಧಾರಿಯು ಮುಖ್ಯಕಾರ್ಯನಿರ್ವಾಹಕರ ಮೇಲಿರುವುದರಿಂದ ಆದಷ್ಟು ಆ ಹುದ್ದೆಗೆ ಖಾಯಂ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಬೇಕು. ಇಲ್ಲವಾದಲ್ಲಿ ಈ ಕುರಿತು ಆಯಾ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಯು ನಿರ್ಣಯಿಸಿದಂತೆ ನಿರ್ವಹಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಮುಂದುವರೆದು ಮಾತನಾಡಿದ ಮಾನ್ಯ ಅಧ್ಯಕ್ಷರು ತಾವು ಕೇಳಿರುವ ಎರಡನೇಯ ಪ್ರಶ್ನೆಗೆ ಸಂಬಂಧಿಸಿದಂತೆ, ಪ್ರಭಾರ ಮುಖ್ಯಕಾರ್ಯನಿರ್ವಾಹಕರ ವಯಸ್ಸಿನ ಕನಿಷ್ಠ ಮತ್ತು ಗರಿಷ್ಠ ಮಾನದಂಡಕ್ಕೆ ಸಂಬಂಧಿಸಿದಂತೆ ಆಯಾ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಯೇ ನಿರ್ಣಯಿಸಬೇಕು. 60 ವರ್ಷಗಳು ಸಿಬ್ಬಂದಿಗಳಿಗೆ ನಿವೃತ್ತ ವಯೋಮಿತಿಯಾಗಿರುತ್ತದೆ. ಸಿಬ್ಬಂದಿಗಳ ನೇಮಕಾತಿಗೆ ಸಂಬಂಧಿಸಿದಂತೆ ಕನಿಷ್ಠ ಹಾಗೂ ಗರಿಷ್ಠ ವಯೋಮಿತಿಗಳಿರುತ್ತದೆ. ಪ್ರಭಾರ ಎಂದರೆ ನಿವೃತ್ತ ಬ್ಯಾಂಕ್ ಸಿಬ್ಬಂದಿ, ನಿವೃತ್ತರಾಗಿರುವಂತಹ 60, 70, 80 ವರ್ಷಗಳಾಗಿರುವಂತಹವರನ್ನು ಪ್ರಭಾರದಲ್ಲಿ ನೇಮಕಾತಿ ಮಾಡಿಕೊಂಡಿರುವುದನ್ನು ನೋಡಿದ್ದೇವೆ. ಅನೇಕ ಸಂದರ್ಭಗಳಲ್ಲಿ 60 ವರ್ಷಗಳ ಮೇಲ್ಪಟ್ಟ ಮುಖ್ಯಕಾರ್ಯನಿರ್ವಾಹಕರಿದ್ದಲ್ಲಿ ಸದರಿಯವರು ಸಹಿ ಮಾಡಿದಲ್ಲಿ ಊರ್ಜಿತವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಆ ವಯೋಮಿತಿಯೊಳಗೆ ಮುಖ್ಯಕಾರ್ಯನಿರ್ವಾಹಕರನ್ನು ನೇಮಕಾತಿ ಮಾಡಿಕೊಳ್ಳಬೇಕೆಂದು ತಿಳಿಸಿದ್ದಾಗ್ಯೂ ಸಹ ಕೆಲವು ಸೌಹಾರ್ದ ಸಹಕಾರಿಗಳು

ಬದಲಾಯಿಸಿಕೊಂಡಿರುವುದಿಲ್ಲ. ಅವರನ್ನೇ ಮುಂದುವರೆಸುವ ಪರಿಸ್ಥಿತಿ ಈಗಲೂ ಮುಂದುವರೆದಿದೆ. ಅದಕ್ಕಾಗಿ ಈ ಕುರಿತು ನಿರ್ಣಯಿಸಲು ಆಯಾ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಯೇ ಸಕ್ಷಮವಾಗಿದೆ ಎಂದು ಅದನ್ನೇ ಲಿಖಿತ ರೂಪದಲ್ಲಿ ಉತ್ತರವನ್ನು ನೀಡಲಾಗಿದೆ. ನಿರ್ದಿಷ್ಟವಾಗಿ ಒಬ್ಬರಿಗೆ ಅನ್ವಯವಾಗುವಂತಿದ್ದಲ್ಲಿ ಈ ಕುರಿತಂತೆ ನಿರ್ದಿಷ್ಟವಾಗಿ ಉತ್ತರಿಸಬಹುದಾಗಿರುತ್ತದೆ. ಸಾರ್ವಜನಿಕವಾಗಿ ಆಗಿರುವುದರಿಂದ ಈ ರೀತಿ ಉತ್ತರ ನೀಡಿದೆ ಎಂದು ತಿಳಿಸಿದರು.

ಸಭೆಯಲ್ಲಿ ಮುಂದುವರೆದು ಮಾತನಾಡಿದ ಮಾನ್ಯ ಅಧ್ಯಕ್ಷರು ತಾವು ಕೇಳಿರುವ ಮೂರನೇಯ ಪ್ರಶ್ನೆಗೆ ಸಂಬಂಧಿಸಿದಂತೆ, ಕೆಲವು ಸೌಹಾರ್ದ ಸಹಕಾರಿಗಳಲ್ಲಿ ನಿವೃತ್ತ ನೌಕರರು (ಸರಕಾರಿ ಅಥವಾ ಖಾಸಗಿ) ಮುಖ್ಯಕಾರ್ಯನಿರ್ವಾಹಕರಾಗಿ ಸೇವೆ ಸಲ್ಲಿಸುತ್ತಿರುವುದು ಎಷ್ಟು ಸರಿ ಎಂಬುದಕ್ಕೆ ಆಯಾ ಸೌಹಾರ್ದ ಸಹಕಾರಿಗಳೇ ನಿರ್ಧರಿಸಬೇಕಿರುತ್ತದೆ. ಕಾಯ್ದೆಯಲ್ಲಿ ಸಿಬ್ಬಂದಿ ವಯೋಮಿತಿ ಕುರಿತು ಯಾವುದೇ ಮಾನದಂಡಗಳು ಇರುವುದಿಲ್ಲ. ಈ ಕುರಿತು ಆಯಾ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಯೇ ಯೋಚಿಸಬೇಕು. ನಿವೃತ್ತ ನೌಕರರನ್ನು ಇಟ್ಟುಕೊಳ್ಳುವುದು ಸರಿ, ತಪ್ಪು ಎಂಬುದರ ಬದಲು ಈ ಕುರಿತು ಆಡಳಿತ ಮಂಡಲಿಯವರು ಸರಿಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಮುಂದುವರೆದು ಮಾತನಾಡಿದ ಮಾನ್ಯ ಅಧ್ಯಕ್ಷರು ತಾವು ಕೇಳಿರುವ ನಾಲ್ಕನೇಯ ಪ್ರಶ್ನೆಗೆ ಸಂಬಂಧಿಸಿದಂತೆ, ಮುಖ್ಯಕಾರ್ಯನಿರ್ವಾಹಕರ ಕಾರ್ಯನಿರ್ವಹಣೆಗೆ ಪ್ರಭಾರ ಅಥವಾ ಖಾಯಂ ಎಂಬುದಿಲ್ಲ. ಕಾಯ್ದೆ ವ್ಯಾಪ್ತಿಯಲ್ಲಿ ತಿಳಿಸಲಾಗಿರುವ ಮುಖ್ಯಕಾರ್ಯನಿರ್ವಾಹಕರು ನಿರ್ವಹಿಸಬೇಕಾಗಿರುವ ಎಲ್ಲಾ ಜವಾಬ್ಧಾರಿಗಳ ನಿರ್ವಹಣೆಯೂ ಸಹ ಪ್ರಭಾರ ಮುಖ್ಯಕಾರ್ಯನಿರ್ವಾಹಕರಿಗೆ ಅನ್ವಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಮುಖ್ಯಕಾರ್ಯನಿರ್ವಾಹಕರಿಗೆ ವಹಿಸಿರುವ ಜವಾಬ್ಧಾರಿಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವುದರ ಕುರಿತು ಪರಿಶೀಲಿಸುವುದು ಆಯಾ ಆಡಳಿತ ಮಂಡಲಿಯವರ ಜವಾಬ್ಧಾರಿಯಾಗಿರುತ್ತದೆ ಎಂದು ತಿಳಿಸಿದರು.

ಸಭೆಯಲ್ಲಿ ಮುಂದುವರೆದು ಮಾತನಾಡಿದ ಮಾನ್ಯ ಅಧ್ಯಕ್ಷರು ತಾವು ಕೇಳಿರುವ ಐದನೇಯ ಪ್ರಶ್ನೆಗೆ ಸಂಬಂಧಿಸಿದಂತೆ, ಸೌಹಾರ್ದ ಸಹಕಾರಿಗಳಲ್ಲಿ ಪ್ರಭಾರ ಮುಖ್ಯಕಾರ್ಯನಿರ್ವಾಹಕರ ನೇಮಕಕ್ಕೆ ಸಂಬಂಧಿಸಿದಂತೆ ಸಂಯುಕ್ತ ಸಹಕಾರಿಯಿಂದ ಯಾವುದೇ ಮಾರ್ಗಸೂಚಿಯನ್ನು ಬಿಡುಗಡೆ ಮಾಡಿರುವುದಿಲ್ಲ. ಪ್ರಭಾರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮುಖ್ಯಕಾರ್ಯನಿರ್ವಾಹಕರು ಉದ್ಧೇಶಪೂರ್ವಕವಾಗಿಯೇ ಮೋಸ ಮಾಡಿದಲ್ಲಿ ಉದ್ಧೇಶಪೂರ್ವಕವಾಗಿ ಅವರನ್ನು ನೇಮಕ ಮಾಡಿಕೊಂಡ ಆಯಾ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಹಾಗೂ ಆ ಸಿಬ್ಬಂದಿಯೇ ಜವಾಬ್ಧಾರರಾಗಿರುತ್ತಾರೆ ಎಂದು ತಿಳಿಸಿದರು.

ಸಭೆಯಲ್ಲಿ ಮುಂದುವರೆದು ಮಾತನಾಡಿದ ಮಾನ್ಯ ಅಧ್ಯಕ್ಷರು ತಾವು ಕೇಳಿರುವ ಆರನೇಯ ಪ್ರಶ್ನೆಗೆ ಸಂಬಂಧಿಸಿದಂತೆ, ಸೌಹಾರ್ದ ಸಹಕಾರಿ ಕಾಯ್ದೆ ಪ್ರಾರಂಭದಲ್ಲಿಯೇ ಸೌಹಾರ್ದ ಸಹಕಾರಿ ಸಂಸ್ಥೆಯನ್ನು ಪ್ರಾರಂಭಿಸಬೇಕೆಂದರೆ ಬೇರೆ ಬೇರೆ ವಿವಿಧ ಕುಟುಂಬಗಳ 10 ಜನ ಪ್ರವರ್ತಕರನ್ನೊಳಗೊಂಡಂತೆ ಸೌಹಾರ್ದ ಸಹಕಾರಿ ಸಂಸ್ಥೆಯನ್ನು ರಚಿಸಬೇಕು ಎಂದು ತಿಳಿಸಲಾಗಿರುತ್ತದೆ. ಆದರೆ, ಕೆಲವು ಸೌಹಾರ್ದ ಸಹಕಾರಿಗಳಲ್ಲಿ ಶೇ.100ಕ್ಕೆ 100ರಷ್ಟು ಇದೇ ಪರಿಸ್ಥಿತಿ ಇದೆ, ಬಹಳಷ್ಟು ಕಡೆಗಳಲ್ಲಿ ಗಂಡ, ಹೆಂಡತಿ, ಮಗ, ಮಕ್ಕಳನ್ನೊಳಗೊಂಡಂತೆ ಅವರದ್ದೇ ಆದ ಸೌಹಾರ್ದ ಸಹಕಾರಿಗಳನ್ನು ರಚಿಸಿ, ನಡೆಸುತ್ತಿದ್ದಾರೆ. ಇದು ನೈತಿಕವಾಗಿ ಬಹಳ ತಪ್ಪು. ಕಾನೂನು ಪ್ರಕಾರ ಅದು ವೇಗವಾಗಿದೆ. ಇದಕ್ಕೆ ನಿರ್ದಿಷ್ಟ ಪ್ರಾವಧಾನ ಬೇಕು ಎಂದು ಈಗಾಗಲೇ ಸರ್ಕಾರಕ್ಕೆ ವಿನಂತಿಸಲಾಗಿದೆ. ನೈತಿಕವಾಗಿ ಉತ್ತಮವಾಗಿರಬೇಕೆಂಬ ದೃಷ್ಠಿಯಿಂದ ಇದನ್ನು ಮಾಡುತ್ತಿದ್ದೇವೆ ಎಂದು ತಿಳಿಸಿದರು.

**ಶ್ರೀ ನಗರೇಶ್ವರ ಸೌಹಾರ್ದ ಪತ್ತಿನ ಸಹಕಾರ ಸಂಘ ನಿ., ಬೆಂಗಳೂರು.**

ಮೇಲ್ಕಂಡ ಸೌಹಾರ್ದ ಸಹಕಾರಿಯು ಲಿಖಿತವಾಗಿ ಕೇಳಿರುವ ಪ್ರಶ್ನೆಗಳಿಗೆ ಈ ಕೆಳಗಿನಂತೆ ಲಿಖಿತ ರೂಪದಲ್ಲಿ ಉತ್ತರ ನೀಡಲಾಗಿದೆ ಎಂದು ಮಾನ್ಯ ಅಧ್ಯಕ್ಷರು ಸಭೆಗೆ ತಿಳಿಸಿದರು.

**ಪ್ರಶ್ನೆ** : ಸಂಯುಕ್ತ ಸಹಕಾರಿಯ ಆರ್ಥಿಕ ಸಬಲತೆಯ ಮಾನದಂಡಗಳ ಸುತ್ತೋಲೆಗಳನ್ವಯ ಪ್ರತಿಯೊಂದು ಸಹಕಾರಿಯು ಸಂಗ್ರಾಹಿತ ಠೇವಣಿಯ ಕನಿಷ್ಠ ಶೇ.20 ಅನ್ನು ದ್ರವ್ಯಾಸ್ತಿಯಾಗಿ ನಿರ್ವಹಿಸತಕ್ಕದ್ದು ಎಂಬುದಾಗಿದೆ. ಇದನ್ನು ಶೇ.10ಕ್ಕೆ ನಿಗದಿಪಡಿಸಿದ್ದಲ್ಲಿ ಬಹಳಷ್ಟು

ಸಹಕಾರಿಗಳಿಗೆ ಅನುಕೂಲವಾಗುವುದು ಕಾರಣ ಇತ್ತೀಚೆಗೆ ಬ್ಯಾಂಕ್‌ಗಳಲ್ಲಿ ಠೇವಣಿಗಳಿಗೆ ನೀಡುವ ಬಡ್ಡಿಯು ಗಣನೀಯವಾಗಿ ಕಡಿಮೆಯಾಗಿದ್ದು ಮತ್ತು ಮುಂಬರುವ ದಿನಗಳಿಗೆ ಇನ್ನೂ ಕಡಿಮೆಯಾಗುವ ಸಂಭವಿದ್ದು, ಇದರಿಂದ ಸಹಕಾರಿಗೆ ಪ್ರತಿ ತಿಂಗಳು ಬರುವ ಬಡ್ಡಿಯೇತರ ಆದಾಯವು ಗಣನೀಯವಾಗಿ ಕುಸಿಯಲಿದೆ.

ಆದ್ದರಿಂದ, ದ್ರವ್ಯಾಸ್ತಿಯ ನಿರ್ವಹಣೆಯನ್ನು ಶೇ.10ಕ್ಕೆ ಮಿತಿಗೊಳಿಸುವುದರಿಂದ ಉಳಿಕೆ ಶೇ.10ರಷ್ಟನ್ನು ಸದಸ್ಯರಿಗೆ ಸಾಲ ನೀಡಿದಲ್ಲಿ ಸ್ವಲ್ಪಮಟ್ಟಿಗೆ ಆರ್ಥಿಕ ಸಬಲತೆಯನ್ನು ಹೊಂದಲು ಅನುಕೂಲವಾಗುತ್ತದೆ. ದಯವಿಟ್ಟು ಇದನ್ನು ಸಾಮಾನ್ಯ ಸಭೆಯಲ್ಲಿ ಚರ್ಚೆಗಾಗಿ ಮಂಡಿಸಿ, ಸೂಕ್ತ ಕ್ರಮಕೈಗೊಳ್ಳುವಂತೆ ಕೋರುತ್ತೇನೆ.

**ಉತ್ತರ** : ಪ್ರಸ್ತುತ 2025ರ ಕಾಯ್ದೆ ತಿದ್ದುಪಡಿಯಲ್ಲಿ, ಶೇ.20 ದ್ರವ್ಯಾಸ್ತಿ ಇಡುವ ಕುರಿತು ಪ್ರಾವಧಾನ ಇದೆ. ಕಾಯ್ದೆ ಜಾರಿಯ ನಂತರ ಇದು ಕಡ್ಡಾಯವಾಗಲಿದೆ.

ಈ ಕುರಿತು ಸಾಮಾನ್ಯ ಸಭೆಗೆ ಕರಡು ಸುತ್ತೋಲೆ ನೀಡಿದ್ದು, ಸಾಮಾನ್ಯ ಸಭೆಯ ನಿರ್ಣಯದಂತೆ ಕ್ರಮವಿಡಲಾಗುವುದು.

**ಇಗ್ಗುತ್ತಪ್ಪ ಸೌಹಾರ್ದ ಕ್ರೆಡಿಟ್ ಕೋಆಪರೇಟಿವ್ ಲಿ., ಪೊನ್ನಂಪೇಟೆ.**

ಮೇಲ್ಕಂಡ ಸೌಹಾರ್ದ ಸಹಕಾರಿಯು ಲಿಖಿತವಾಗಿ ಕೇಳಿರುವ ಪ್ರಶ್ನೆಗಳಿಗೆ ಈ ಕೆಳಗಿನಂತೆ ಲಿಖಿತ ರೂಪದಲ್ಲಿ ಉತ್ತರ ನೀಡಲಾಗಿದೆ ಎಂದು ಮಾನ್ಯ ಅಧ್ಯಕ್ಷರು ಸಭೆಗೆ ತಿಳಿಸಿದರು.

**ಪ್ರಶ್ನೆ** : ಪ್ರತಿ ವರ್ಷ ಆಯೋಜಿಸಲಾಗುತ್ತಿರುವ ಸಹಕಾರಿ ರತ್ನ, ಶ್ರೇಷ್ಠ ಸಹಕಾರಿ ಪ್ರಶಸ್ತಿ ಪಾತ್ರರಾದವರಿಗೆ ಪ್ರಶಸ್ತಿಯೊಂದಿಗೆ ಧನ ಸಹಾಯವೆಷ್ಟು ನೀಡಲಾಗುತ್ತಿದೆ. ಪ್ರಶಸ್ತಿ ಪಡೆಯುವ ಆಯ್ದ ಸಹಕಾರಿಗೆ (ಸಾಮಾನ್ಯವಾಗಿ ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡುವವರು ನಿಸ್ವಾರ್ಥ ಸೇವೆ ಸಲ್ಲಿಸುವವರು) ಶೇಕಡ 90ರಷ್ಟು ಆರ್ಥಿಕವಾಗಿ ದುರ್ಬಲರಾಗಿರುತ್ತಾರೆ. ತುರ್ತು ಕರೆ ಮೂಲಕ ಆಹ್ವಾನಿಸುವಾಗ ಅವರ ಪ್ರಯಾಣ ಭತ್ಯೆ ಪಾವತಿಸಲಾಗುತ್ತಿದೆಯೇ?

**ಉತ್ತರ** : ಉತ್ತಮ ಸಹಕಾರಿ ಸಂಸ್ಥೆ ಪ್ರಶಸ್ತಿ ಪಡೆಯಲು ಸಂಸ್ಥೆಯ ವೆಚ್ಚದಲ್ಲಿಯೇ ಸಹಕಾರಿಯ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರು ಆಗಮಿಸುತ್ತಾರೆ. ಶ್ರೇಷ್ಠ ಸಹಕಾರಿ (ವ್ಯಕ್ತಿ) ಗಳಿಗೆ ರೂ.25,000/–ಗಳ ನಗದು ಗೌರವ ಮೊತ್ತ ನೀಡುತ್ತಿದ್ದು, ವೆಚ್ಚವನ್ನು ಅದರಿಂದಲೇ ಭರಿಸಬಹುದಾಗಿದೆ.

**ಪ್ರಶ್ನೆ** : ನಮ್ಮ ಸಹಕಾರಿಯಿಂದ ಕಳೆದ ಇಪ್ಪತ್ತು ಆರ್ಥಿಕ ವರ್ಷಗಳಲ್ಲಿ ವಿಧ್ಯಾ ನಿಧಿಗೆ ಶೇಕಡ 2% ನ್ನು ಹೊರತು ಪಡಿಸಿ ರೂ:–2,79,500/–ಗಳನ್ನು ತಮ್ಮ ಸಂಸ್ಥೆಗೆ ವರ್ಕಿಂಗ್ ಕ್ಯಾಪಿಟಲ್ ಫಂಡ್ ಮೇಲೆ ಪಾವತಿಸಲಾಗಿದೆ. ಹಾಗಾದರೆ ಇಷ್ಟೊಂದು ಬೃಹತ್ ಮೊತ್ತವನ್ನು ಪಾವತಿಸಿರುವಾಗ ನಮ್ಮ ಸಂಸ್ಥೆಗೆ ತಮ್ಮ ಸಂಯುಕ್ತ ಸಹಕಾರಿ ಯಾವ್ಯಾವ ಬಾಬ್ತಿನಲ್ಲಿ ಎಷ್ಟೆಷ್ಟು ಮೊತ್ತದ ಕೆಲಸ ಕಾರ್ಯಗಳಾಗಿವೆ, ಬಡ ಕಾರ್ಮಿಕ ರೈತಾಪಿ ಮತ್ತಿತರ ಬಡ ವರ್ಗದ ಜನರಿಂದ ವಸೂಲಿ ಮಾಡುವ ಬಡ್ಡಿ ಹಣವನ್ನು ಗಣನೆಗೆ ತೆಗೆದುಕೊಂಡು ತಮ್ಮ ವತಿಯಿಂದ ಯಾವ ರೀತಿ ನಮಗೆ ಉಪಯೋಗವಾಗುತ್ತಿದೆ ಎಂದು ಸದಸ್ಯರಿಗೆ ತಿಳಿಸಬೇಕಾಗಿರುತ್ತದೆ.

**ಉತ್ತರ** : ಕಾಯ್ದೆ ಕಲಂ 62 ರಂತೆ ಪ್ರತಿಯೊಂದು ಸಹಕಾರಿಯು ತನ್ನ ದುಡಿಯುವ ಬಂಡವಾಳದ ಆಧಾರದ ಮೇಲೆ ಪ್ರತಿ ವರ್ಷ ವಾರ್ಷಿಕ ವಂತಿಗೆ ನೀಡಬೇಕಿದ್ದು, ಇದು ಶಾಸನಾತ್ಮಕ ಪಾವತಿಯಾಗಿರುತ್ತದೆ. ಈ ಮೊತ್ತವನ್ನು ಸಂಯುಕ್ತ ಸಹಕಾರಿಯ ಆಡಳಿತಾತ್ಮಕ ವೆಚ್ಚ (ಬಾಡಿಗೆ, ಸಿಬ್ಬಂದಿ ವೇತನ, ಸಾದಿಲ್ವಾರು ವೆಚ್ಚಗಳು) ಹಾಗೂ ನಿಯಂತ್ರಣಾತ್ಮಕ ವೆಚ್ಚ (ಪರಿವೀಕ್ಷಣೆ, ಭೇಟಿ, ಶಾಸನಾತ್ಮಕ ಕರ್ತವ್ಯಗಳು) ಗಳಿಗೆ ಉಪಯೋಗಿಸಲಾಗುತ್ತದೆ. ಸಂಯುಕ್ತ ಸಹಕಾರಿಗೆ ಸರ್ಕಾರದಿಂದ ಯಾವುದೇ ಅನುದಾನ ಇರುವುದಿಲ್ಲ. ಸದಸ್ಯ ಸಹಕಾರಿಗಳು ನೀಡುವ ವಾರ್ಷಿಕ ವಂತಿಗೆಯೇ ನಿಯಂತ್ರಣಾತ್ಮಕ ವೆಚ್ಚ ಹಾಗೂ ಆಡಳಿತಾತ್ಮಕ ವೆಚ್ಚಗಳಿಗೆ ಆಧಾರ.

**ಪ್ರಶ್ನೆ** : ತಮ್ಮ ಸಾಮಾನ್ಯ ಸಭೆ ಒಂದು ಗಂಭೀರ ಸಭೆಯಾಗಿದ್ದು, ಅದರ ಗಾಂಭೀರ್ಯತೆಯನ್ನು ಒಂದು "ಹಬ್ಬ" ವೆಂದು ಪದೇ ಪದೇ ಉಲ್ಲೇಖಿಸುವುದು ಎಷ್ಟು ಸಮಂಜಸ? ಸಭೆಯಲ್ಲಿ ಲಿಖಿತವಾಗಿ

ಕೇಳಿದ ಪ್ರಶ್ನೆಗಳಿಗೆ ಉತ್ತರ ದೊರೆಯುತ್ತದೆಯಾದರೂ, ಅನೇಕ ಕಾರಣಗಳಿಂದ ಲಿಖಿತ ಪ್ರಶ್ನೆ ಕೇಳಲು ಅನೇಕ ಪ್ರತಿನಿಧಿಗಳಿಗೆ ಅವಕಾಶವಾಗುತ್ತಿಲ್ಲವೆಂಬುದು ತಮಗೆ ತಿಳಿದಿದೆ. ಹಾಗಿದ್ದರೆ ಪ್ರತಿನಿಧಿಗಳು ಹಬ್ಬದೂಟಕ್ಕೆ ಮಾತ್ರ ಸಾಮಾನ್ಯ ಸಭೆಗೆ ಬರಬೇಕೇ ಎಂಬ ಜಿಜ್ಞಾಸೆ ಇದೆ. ತಮ್ಮ ಕಾರ್ಯಕ್ರಮದಲ್ಲಿ "ಒಪ್ಪಬಹುದು" ಎಂಬ ಪದ ಬಳಕೆ ಮಾಡಿ ಸದಸ್ಯ ಸಂಘಗಳಿಗೆ ನಿರ್ದೇಶನ ನೀಡಿದ ಮೇಲೆ ಸಭೆಯಲ್ಲಿ ಖುದ್ದಾಗಿ ಹಾಜರಾಗಲು ನೂರಾರು ಕಿಲೋಮೀಟರ್ ದೂರದಿಂದ ಪ್ರತಿನಿಧಿಗಳು ಸಹಸ್ರಾರು ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಬರಬೇಕಾಗಿರುವುದು ಸಮಂಜಸವೇ?

**ಉತ್ತರ** : ಸೌಹಾರ್ದ ಸಹಕಾರಿ ಅಧಿನಿಯಮ ಅನುಸಾರ ಸಾಮಾನ್ಯ ಸಭೆ ನಡೆಸುವುದು ಕಡ್ಡಾಯವಾಗಿರುತ್ತದೆ. ಅದರಂತೆ ಅರ್ಹ ಸದಸ್ಯ ಸಹಕಾರಿಗಳ ಪ್ರತಿನಿಧಿಗಳು ಸಾಮಾನ್ಯ ಸಭೆಯಲ್ಲಿ ಭಾಗವಹಿಸುವುದು ಅವರ ಕರ್ತವ್ಯವಾಗಿರುತ್ತದೆ. ಇದು ಕಾಯ್ದೆಯಂತೆ ನಡೆಯುವ ಸಭೆಯಾಗಿದೆ.

ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಲಿಖಿತ ಪ್ರಶ್ನೆ ಕೇಳಲು ಯಾವುದೇ ನಿಬಂಧನೆ ಇಲ್ಲ. ಎಲ್ಲರಿಗೂ ಮುಕ್ತ ಅವಕಾಶ ಇದೆ.

ನಂತರ ಸಭೆಯಲ್ಲಿ ಉಪಸ್ಥಿತರಿದ್ದ ಸೌಹಾರ್ದ ಸಹಕಾರಿಗಳ ಮಾನ್ಯ ಡೆಲಿಗೇಟ್‌ಗಳು ವಾರ್ಷಿಕ ಸಾಮಾನ್ಯ ಸಭೆಯ ಚರ್ಚೆಯಲ್ಲಿ ಭಾಗವಹಿಸಿ, ಕೆಲವೊಂದು ಪ್ರಶ್ನೆಗಳನ್ನು ಕೇಳಿದರು ಹಾಗೂ ಸಲಹೆಗಳನ್ನು ನೀಡಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಪ್ರತಿಕ್ರಿಯಿಸಿ, ಸದರಿ ಪ್ರಶ್ನೆಗಳಿಗೆ ಸ್ಥಳದಲ್ಲಿಯೇ ಉತ್ತರಿಸಿದರು ಹಾಗೂ ಸಲಹೆಗಳನ್ನು ಆಡಳಿತ ಮಂಡಲಿಯಲ್ಲಿ ಚರ್ಚಿಸಿ, ಕ್ರಮವಿಡುವುದಾಗಿ ತಿಳಿಸಿದರು. ಮಾನ್ಯ ಸಹಕಾರಿ ಪ್ರತಿನಿಧಿಗಳು ಸ್ಥಳದಲ್ಲಿಯೇ ಕೇಳಿರುವ ಪ್ರಶ್ನೆಗಳಿಗೆ ಮಾನ್ಯ ಅಧ್ಯಕ್ಷರು ಸಹ ಸ್ಥಳದಲ್ಲಿಯೇ ಉತ್ತರಗಳನ್ನು ನೀಡಿರುತ್ತಾರೆ. ಆದರೆ, ನಿಯಮಾನುಸಾರ ಈ ಪ್ರಶ್ನೋತ್ತರಗಳನ್ನು ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳಲ್ಲಿ ದಾಖಲಿಸಿರುವುದಿಲ್ಲ.

ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸಲು ಇಚ್ಛಿಸಿ ಬಂದಿರುವ ಎಲ್ಲಾ ಲಿಖಿತ ಕೋರಿಕೆಯ ಪ್ರಶ್ನೆಗಳಿಗೆ ಉತ್ತರಿಸಲಾಯಿತು ಹಾಗೂ ಸಭೆಯಲ್ಲಿ ಸ್ಥಳದಲ್ಲಿಯೇ ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಸಹ ಮಾನ್ಯ ಅಧ್ಯಕ್ಷರು ಉತ್ತರ ನೀಡಿರುತ್ತಾರೆ ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು. ಸಭೆಯು ಅದನ್ನು ಸರ್ವಾನುಮತದಿಂದ ಅನುಮೋದಿಸಿತು. ಮುಂದುವರೆದು 2025ನೇ ವರ್ಷದ ರಜತ ಮಹೋತ್ಸವ ವರ್ಷದಲ್ಲಿ ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯ ವಿಷಯಗಳನ್ನು ತಮ್ಮೆದುರಿಗೆ ಮಂಡಿಸಲು ಅವಕಾಶ ನೀಡಿದ ಆಡಳಿತ ಮಂಡಲಿಯವರಿಗೆ ಹಾಗೂ ಎಲ್ಲಾ ಪ್ರತಿನಿಧಿಗಳಿಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ವಂದನೆಯನ್ನು ಸಲ್ಲಿಸಿದರು.

ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸಬಹುದಾದ ಎಲ್ಲಾ ವಿಷಯಗಳು ಮುಕ್ತಾಯವಾದ ಹಿನ್ನೆಲೆಯಲ್ಲಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನಂತರ ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ, ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಿರುವ ಕರ್ನಾಟಕ ಸರಕಾರ, ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಸಹಕಾರ ಸಚಿವರು, ಮಂತ್ರಿಮಂಡಳದ ಮಾನ್ಯ ಸದಸ್ಯರು, ಕರ್ನಾಟಕದ ಮಾನ್ಯ ವಿಧಾನ ಸಭಾ ಸದಸ್ಯರು, ಮಾನ್ಯ ವಿಧಾನ ಪರಿಷತ್ ಸದಸ್ಯರು, ಕೇಂದ್ರದಲ್ಲಿ ಕರ್ನಾಟಕವನ್ನು ಪ್ರತಿನಿಧಿಸುತ್ತಿರುವ ಮಾನ್ಯ ಸಚಿವರುಗಳು, ಮಾನ್ಯ ಲೋಕಸಭಾ ಸದಸ್ಯರು, ಮಾನ್ಯ ರಾಜ್ಯಸಭಾ ಸದಸ್ಯರು, ಸಹಕಾರ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಮಾನ್ಯ ಸಹಕಾರಿಗಳ ನಿಬಂಧಕರು, ರಾಜ್ಯ ಹಾಗೂ ಜಿಲ್ಲಾ ಮಟ್ಟದ ಎಲ್ಲಾ ಸಹಕಾರಿ ಸಂಸ್ಥೆಗಳ, ಎಲ್ಲಾ ಮಹಾಮಂಡಳಗಳ ಮಾನ್ಯ ಪದಾಧಿಕಾರಿಗಳು ಹಾಗೂ ನಿರ್ದೇಶಕರುಗಳು, ಸಹಕಾರಿ ಗಣ್ಯರು, ಸಹಕಾರಿ ಅಧಿಕಾರಿಗಳು, ಮಾಧ್ಯಮ ಮಿತ್ರರು, ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ಅಧ್ಯಕ್ಷರುಗಳಾದ ಶ್ರೀ ಮನೋಹರ ಮಸ್ಕಿ, ಶ್ರೀ ವಿಶ್ವನಾಥ ಚ. ಹಿರೇಮಠ, ಶ್ರೀ ಎಸ್.ಆರ್.ಸತೀಶ್ಚಂದ್ರ, ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ಹೆಚ್.ವಿ.ರಾಜೀವ, ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿರವರು, ಸಂಯುಕ್ತ ಸಹಕಾರಿಯ ಹಿಂದಿನ ಹಾಗೂ ಪ್ರಸಕ್ತ ಆಡಳಿತ ಮಂಡಲಿಯ ಸದಸ್ಯರುಗಳು, ಅಧಿಕಾರಿಗಳು, ಸಿಬ್ಬಂದಿಯವರು, ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ತರಬೇತುದಾರರು, ವಿಷಯ ತಜ್ಞರು, ಸಂಪನ್ಮೂಲ ವ್ಯಕ್ತಿಗಳು, ಸಂಯುಕ್ತ ಸಹಕಾರಿಯ ಲೆಕ್ಕಪರಿಶೋಧಕರು, ನ್ಯಾಯವಾದಿಗಳು, ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾದ ಅಧಿಕಾರಿಗಳು, ಬೆಂಗಳೂರಿನ ಪ್ರಾದೇಶಿಕ

ಸಹಕಾರ ನಿರ್ವಹಣಾ ಸಂಸ್ಥೆಯ ಅಧ್ಯಕ್ಷರು, ಪ್ರಾದೇಶಿಕ ನಿರ್ದೇಶಕರು ಹಾಗೂ ಆಡಳಿತ ಮಂಡಲಿ ಸದಸ್ಯರುಗಳು, ರಾಷ್ಟ್ರಮಟ್ಟದ ಸಂಸ್ಥೆಗಳಾದ ಆರ್‌ಬಿಐ, ಎನ್‌ಸಿಯುಐ, ಎನ್‌ಸಿಸಿಇ, ಎನ್‌ಸಿಸಿಟಿ, ಇಂಡಿಯನ್ ಸೊಸೈಟಿ ಫಾರ್ ಸ್ಟಡೀಸ್ ಇನ್ ಕೋ–ಆಪರೇಷನ್ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಅಧಿಕಾರಿಗಳು, ಅಧ್ಯಯನಕ್ಕೆ ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಪರಿಗಣಿಸುವ ಅಂತರರಾಷ್ಟ್ರೀಯ ಮೈತ್ರಿ ಸಂಸ್ಥೆ (ICA) ಇವರಿಗೆ, ಮಹಾತ್ಮಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ವಿಶ್ವವಿದ್ಯಾಲಯದ ಮಾನ್ಯ ಉಪಕುಲಪತಿಗಳು ಹಾಗೂ ಅಧಿಕಾರಿಗಳಿಗೆ, ಸಂಯುಕ್ತ ಸಹಕಾರಿಯ ಡಿಸಿಬಿಎಂ ಕೋರ್ಸ್ ರೂಪಿಸುವಲ್ಲಿ ಸಹಕರಿಸಿದ ಡಾ. ಯಶವಂತ ಡೋಂಗ್ರೆ, ಶ್ರೀ ಸಿ ಎನ್ ಪರಶಿವಮೂರ್ತಿ, ಡಾ. ಎಸ್ ಎ ಸಿದ್ಧಾಂತಿ ಹಾಗೂ ಈ ಕೋರ್ಸ್‌ನ ಅಧ್ಯಯನ ಸಾಹಿತ್ಯ ಸಿದ್ಧಪಡಿಸಿದ, ಸಂಪರ್ಕ ತರಗತಿಗಳನ್ನು ನಡೆಸುತ್ತಿರುವ ವಿಷಯ ತಜ್ಞರು, ಸೌಹಾರ್ದ ಸಹಕಾರಿ ಕ್ಷೇತ್ರದ ಮತ್ತು ಸಂಯುಕ್ತ ಸಹಕಾರಿಯ ಬೆಳವಣಿಗೆಗೆ ಸಹಕರಿಸಿದ ಎಲ್ಲಾ ಹಿತೈಷಿಗಳಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಹಾಗೂ ವೈಯಕ್ತಿಕವಾಗಿ ಮಾನ್ಯ ಅಧ್ಯಕ್ಷರು ಕೃತಜ್ಞತೆಗಳನ್ನು ಸಲ್ಲಿಸಿ, ಮುಂಬರುವ ದಿನಗಳಲ್ಲಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಸಂಪೂರ್ಣ ಸಹಕಾರ ಹಾಗೂ ಸಹಯೋಗವನ್ನು ಕೋರಿದರು.

ಸಭೆಯ ಕೊನೆಯಲ್ಲಿ ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆಯನ್ನು ನಡೆಸಿಕೊಟ್ಟ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರಿಗೆ, ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್.ಪ್ರಸನ್ನ ಕುಮಾರ್‌ರವರಿಗೆ, ಎಲ್ಲಾ ಗೌರವಾನ್ವಿತ ಮಾನ್ಯ ನಿರ್ದೇಶಕರುಗಳಿಗೆ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಗೆ, ಸಿಬ್ಬಂದಿ ವರ್ಗದವರಿಗೆ, ಸನ್ನದು ಲೆಕ್ಕಪರಿಶೋಧಕರಾದ ಮೆ. ಮಧುಕರ್ ಹೆಗಡೆ & ಕೋ., ಬೆಂಗಳೂರು ಇವರಿಗೆ, ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ, ಸಕಾರಾತ್ಮಕವಾಗಿ ಸ್ಪಂದಿಸಿದ ವಿವಿಧ ಸೌಹಾರ್ದ ಸಹಕಾರಿಗಳ ಮಾನ್ಯ ಡೆಲಿಗೇಟುಗಳಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ ಇವರು ವಂದನೆಗಳನ್ನು ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ವಂದನೆಗಳೊಂದಿಗೆ,**

**ತಮ್ಮ ವಿಶ್ವಾಸಿ**

Karnataka State Souharda Federal Cooperative Ltd. Reg. No. RSR / SOU / ACT / 136 / Regn 051 / 2001-02 dated 04-01-2002 Bangalore

**ದಿನಾಂಕ : 20.09.2025**
**ಸ್ಥಳ : ಬೆಂಗಳೂರು**

**(ಶರಣಗೌಡ ಜಿ. ಪಾಟೀಲ)**
**ವ್ಯವಸ್ಥಾಪಕ ನಿರ್ದೇಶಕ**